ಅಖಿಲ ಭಾರತ ಪತ್ರಿಕೆ
ಅಕ್ಟೋಬರ್ 2016





# ದೈವೀಪ್ರೇಮವನ್ನು ಕುರಿತು ಧ್ಯಾನ

ಬೆಲೆ : 15/-



*Your soul blossoms to the Light*
*as a flower opens to the sun.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ದೈವೀಪ್ರೇಮವನ್ನು ಕುರಿತು ಧ್ಯಾನ"


**ಅನು : ಡಾ. ಕೆ.ಎಸ್. ಆಮೂರ**

ಪ್ರಾಚೀನ ಕಾಲದ ಒಂದು ಚಾಲ್ಡಿಯನ್ ಪುರಾಣ ಕತೆ ............ 4
ಪರಿಶುದ್ಧ ಹಾಗೂ ನಿರ್ಲಿಪ್ತ ಪ್ರೇಮ ............ 5
ನಿನ್ನ ಪ್ರೇಮ ಜಗತ್ತಿಗಿಂತ ವಿಶಾಲವಾಗಿದೆ ............ 7
ವಿಜಯಿಯಾಗಿರುವ ದೈವೀಪ್ರೇಮದ ಸಾಮರ್ಥ್ಯ ........ 8
ಎಲ್ಲ ವಸ್ತು–ವಿಷಯಗಳಲ್ಲಿ ಹಾಗೂ ಎಲ್ಲೆಡೆಯಲ್ಲಿ ಈ ಪ್ರೇಮವಾಗಿರು ............ 10
ವೇದನೆಯ ಮೂಲ ............ 15
ದೈವೀಪ್ರೇಮ ಅಧೋಲೋಕದ ಆಳಗಳನ್ನು ತಲುಪುತ್ತದೆ ............ 16

**ಅನು : ಶ್ರೀ ವೀರೇಂದ್ರ ಸಿಂಪಿ**

ಪ್ರೇಮದ ಅಭಿವ್ಯಕ್ತಿ ಎಂಬ ಔದಾರ್ಯ ............ 17
ಆಂತರಿಕ ಸಾಮೀಪ್ಯ ............ 19
ಪ್ರೇಮದ ರೀತಿ ............ 20
ಪ್ರೇಮ ವಿಶ್ವಂಭರವಾದದದ್ದು ಹಾಗೂ ಸನಾತನವಾದದ್ದು ............ 21

**ಅನು : ಡಾ. ಕೆ.ಎಸ್. ಆಮೂರ**

ಪ್ರೇಮಕ್ಕೆ ಆಸೆಗಳಿರುವುದಿಲ್ಲ ............ 23
ದೈವೀಪ್ರೇಮವನ್ನು ಪ್ರಕಟಿಸುವುದು ............ 23
ಅವಶ್ಯವಾದದ್ದು ಪರಿವರ್ತನೆ, ಆದರೆ ದಮನವಲ್ಲ.. .... 25
ದೈವೀಪ್ರೇಮದ ಶ್ರೇಷ್ಠ ಯಜ್ಞಾಹುತಿ ............ 26
ಪ್ರೇಮದ ಹಂತಗಳು ............ 28

ದೈವೀಪ್ರೇಮಕ್ಕಾಗಿ ಭೌತಿಕದಲ್ಲಿ ಅಭೀಪ್ಸೆ .............................. 31

ದೈವೀಪ್ರೇಮವನ್ನು ಕಂಡುಕೊಳ್ಳುವುದು .............................. 32

ನಿಜವಾದ ಪ್ರೇಮ ಮತ್ತು ಮನುಕುಲ ................................ 34

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಸ್ವಾರ್ಥರಹಿತ, ಲೆಕ್ಕಾಚಾರ ಮಾಡದ ಚೈತ್ಯಸತ್ತೆಯ ಚಲನೆ.. .. 36

ಪ್ರೇಮದ ಗುಣಲಕ್ಷಣ ...................................................... 37

ಪ್ರೇಮವನ್ನು ತಿಳಿದುಕೊಳ್ಳುವುದಕ್ಕಾಗಿ ಮನುಷ್ಯ
ಭಗವಂತನನ್ನು ಪ್ರೀತಿಸಬೇಕು ................................... 38

ಪ್ರೀತಿಸುವುದಕ್ಕೆ ಸರಳವಾಗಿ ಸಂತೋಷದಿಂದಿರುವುದು ......... 39

**ಅನು : ಡಾ. ಕೆ.ಎಸ್. ಆಮೂರ**

ಸ್ವಾರ್ಥಿಯಾಗಿರುವುದನ್ನು ನಿಲ್ಲಿಸಬೇಕಾದುದು
ಮೊದಲ ಹೆಜ್ಜೆ ........................................................ 41

ನಿಜವಾದ ಪ್ರೇಮ ಮತ್ತು ಪ್ರೇಮ ಕುರಿತು ಮಾನವನ
ಭಾವನೆಗಳು .......................................................... 42

ದೈವೀಪ್ರೇಮ ಯಾವಾಗಲೂ ಅಲ್ಲಿರುತ್ತದೆ .......................... 43

ಜೀವನದಲ್ಲಿ ವಿಪತ್ತುಗಳು ಮತ್ತು ದೈವೀಪ್ರೇಮ ................... 45

ದೈವೀಪ್ರೇಮ ಪರಿವರ್ತನೆಯ ಪರಮೋಚ್ಚ ಸಾಮರ್ಥ್ಯ ........ 46

ದೈವೀಪ್ರೇಮ ಪರಿವರ್ತನೆಯ ಅತ್ಯಂತ ಪ್ರಭಾವಪೂರ್ಣ
ಸಾಮರ್ಥ್ಯ ............................................................ 47

**ಅನು : ಶ್ರೀ ವೀರೇಂದ್ರ ಸಿಂಪಿ**

ಸೂತ್ರಗಳು ................................................................. 50

**ಅನು : ಡಾ. ಕೆ.ಎಸ್. ಆಮೂರ**

ದೈವೀಪ್ರೇಮ ಸನಾತನನ ಗೋಲಗಳಿಂದ ಬಂದ
ಒಂದು ವೈಭವ (ಕವಿತೆ) .......................................... 54

ದೈವೀಪ್ರೇಮ ಇಲ್ಲಿ ದೂರದಲ್ಲಿರುವ ವಿಶ್ವಾತೀತನ
ದೇವದೂತನಾಗಿಹುದು (ಕವಿತೆ) ............................... 55

## (All India Magazine) ಸಂಪಾದಕೀಯ:

ಸೃಷ್ಟಿಸುವುದರಲ್ಲಿ ತೊಡಗಿಕೊಂಡಿದ್ದ ಎಲ್ಲ ಸಾಮರ್ಥ್ಯಗಳಲ್ಲಿ ಅತ್ಯಂತ ಬಲಶಾಲಿಯಾದದ್ದು ದೈವೀಪ್ರೇಮವಾಗಿದೆ. ದೈವೀ ಪ್ರೇಮವಿಲ್ಲದೆ ಸೃಷ್ಟಿಯನ್ನು ಅದರ ಅಂಧಕಾರದಿಂದ ಹೊರಗೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲ ವಸ್ತು–ವಿಷಯಗಳನ್ನು ಚಲಿಸುವಂತೆ ಮಾಡುವ ಈ ದೈವೀ ಪ್ರೇಮವೆಂದರೆ ಏನು? ಅದು ರಹಸ್ಯಗಳಲ್ಲಿರುವ ಅತ್ಯಂತ ಶ್ರೇಷ್ಠ ರಹಸ್ಯ. ಈ ಸಂಚಿಕೆಯನ್ನು ಶ್ರೀಮಾತಾರವಿಂದರ ಪ್ರಕಾಶಮಯ ಶಬ್ದಗಳೊಂದಿಗೆ ಚಿಂತನ ಹಾಗೂ ಧ್ಯಾನ ಕೈಕೊಳ್ಳಲು ಮೀಸಲಾಗಿಟ್ಟಿದ್ದೇವೆ. ಶ್ರೀಮಾತೆಯವರು ಮೇ 16, 1960ರಂದು ಅನುಯಾಯಿಯೊಬ್ಬನೊಂದಿಗೆ ನಡೆಸಿದ ಮಾತುಕತೆಯ ವಿಷಯ ನಮ್ಮ ನೆನಪಿಗೆ ತಂದುಕೊಡುತ್ತದೆ: “ಅದು ಅತ್ಯಂತ ಶ್ರೇಷ್ಠರಹಸ್ಯ, ಅದು ಅಸ್ತಿತ್ವವಿರುವುಗಳ ಹಾಗೂ ಅಸ್ತಿತ್ವದಲ್ಲಿ ಇರದೇ ಇಲ್ಲವುಗಳ ಹಿಂದೆ ಹಾಗೆಯೇ ವೈಯಕ್ತಿಕ ಹಾಗೂ ಅವೈಯಕ್ತಿಕವಾದವುಗಳ ಹಿಂದೆ ಇದೆ. ಈ ಪ್ರೇಮ ಎರಡು ವಸ್ತು–ವಿಷಯಗಳ ನಡುವೆ, ಎರಡು ಸತ್ತೆಗಳ ನಡುವೆ ಇರುವ ಪ್ರೇಮವಲ್ಲ. ಆ ದೈವೀ ಪ್ರೇಮ ಎಲ್ಲವನ್ನೂ ಒಳಗೊಳ್ಳುತ್ತದೆ. ಆಶ್ಚರ್ಯಕರ ವಿಷಯವೆಂದರೆ ಪ್ರತಿ ಕ್ಷಣ ದೈವೀ ಕೃಪೆ, ದೈವೀ ಸಂತೋಷ, ದೈವೀ ಪ್ರಕಾಶ ಇವೆಲ್ಲದರ ಮಧ್ಯೆ ದೈವೀ ಪ್ರೇಮ ಸುರಿಯು–ವುದನ್ನು ನಿಲ್ಲಿಸಿಬಿಡುವುದಿಲ್ಲ. ಅಹಂಕಾರವಿದ್ದಾಗಲೂ, ನಾಚಿಕೆ ಇದ್ದಾಗಲೂ, ಯೋಗ್ಯತೆಯ ಕೊರತೆ ಇದ್ದಾಗಲೂ ಆ ಸುರಿತ ಮುಂದುವರಿದುಕೊಂಡು ಹೋಗುತ್ತದೆ.”

*

## ಪ್ರಾಚೀನ ಕಾಲದ ಒಂದು ಚಾಲ್ಡಿಯನ್ ಪುರಾಣ ಕತೆ

ಬಹಳ ಕಾಲದ ಹಿಂದೆ, ಪೃಥ್ವಿಯ ಮೇಲೆ, ಈಗ ಅರೇಬಿಯಾ ಎಂದು ಕರೆಯುತ್ತಿರುವ ಒಣ ಭೂಮಿಯಲ್ಲಿ ದೈವೀ ಸತ್ತೆಯೊಂದು ಅವತಾರ ತಾಳಿತ್ತು, ಆ ಅವತಾರ ಪೃಥ್ವಿಯ ಮೇಲೆ ಪರಮೋಚ್ಚ ಪ್ರೇಮ ಜಾಗ್ರತಗೊಳ್ಳುವಂತೆ ಮಾಡುವು–ದಕ್ಕಾಗಿತ್ತು. ನಿರೀಕ್ಷಿಸಬಹುದಾದ ಹಾಗೆ, ಅದು ಮನುಷ್ಯರ ಪೀಡೆಗೊಳಗಾಯಿತು, ಅದನ್ನು ಜನರು ಬೆನ್ನಟ್ಟಿಕೊಂಡು ಹೋದರು, ಅದರ ಮೇಲೆ ಆಕ್ರಮಣ ಮಾಡಿದರು. ಮರಣಾಂತಿಕವಾಗಿ ಗಾಯಗೊಂಡ ಅದು ಶಾಂತ ರೀತಿಯಿಂದ ಏಕಾಂತದಲ್ಲಿ ಮರಣ ಹೊಂದಲು ಬಯಸಿತ್ತು. ಅದರಿಂದಾಗಿ ಅದು ತನ್ನ ಕಾರ್ಯವನ್ನು ಸಿದ್ಧಿಸಿಕೊಳ್ಳುವಂತಾಗುತ್ತಿತ್ತು, ಹಾಗಾಗಿ ಬೆನ್ನಟ್ಟಿ ಬಂದವರಿಂದ ದೂರ ಓಡಿಹೋಯಿತು. ಹಠಾತ್ತಾಗಿ (suddenly) ವಿಶಾಲವಾಗಿದ್ದ ಆ ಮರುಭೂಮಿಯಲ್ಲಿ ಒಂದು ದಾಳಿಂಬರ ಪೊದೆ ಕಾಣಿಸಿಕೊಂಡಿತು. ಅದರ ಕೆಳಗೆ ಬಾಗಿಕೊಂಡಿದ್ದ ಟೊಂಗೆಗಳ ನಡುವೆ ಆ ಸಂರಕ್ಷಕ ನುಸುಳಿಕೊಂಡು ಹೋದ, ಅಲ್ಲಿ ಅವನು ಶಾಂತ ರೀತಿಯಿಂದ ಪ್ರಾಣತ್ಯಾಗ ಮಾಡುವವನಿದ್ದ. ಕೂಡಲೆ ಆ ಪೊದೆ ಪವಾಡ ಸದೃಶ ಎನ್ನುವ ರೀತಿಯಲ್ಲಿ ಹರಡಿಕೊಂಡಿತು, ಎತ್ತರಕ್ಕೆ ಬೆಳೆಯಿತು, ಮತ್ತು ಆಳವಾದದ್ದು, ದಪ್ಪವಾದದ್ದು ಆಯಿತು, ಅದರಿಂದಾಗಿ ಆ ಸತ್ತೆಯನ್ನು ಬೆನ್ನಟ್ಟಿ ಬಂದವರು ಆ ಪೊದೆಯ ಬದಿಯಿಂದ ಸಾಗಿ ಹೋಗುವಾಗ ತಾವು ಬೆನ್ನಟ್ಟಿ ಬಂದ ಸತ್ತೆ ಅಲ್ಲಿರುವನೆಂಬ ಸಂಶಯ ಕೂಡ ಅವರಿಗೆ ಬರಲಿಲ್ಲ. ಅವರು ಹಾಗೆಯೇ ಮುಂದೆ ಸಾಗಿ ಹೋದರು.

ಇದು ಹಾಗಿರುವಾಗ ಆ ಸತ್ತೆಯ ಪವಿತ್ರವಾದ ರಕ್ತ ಹನಿ, ಹನಿಯಾಗಿ ಕೆಳಗೆ ಬಿದ್ದು, ಅಲ್ಲಿದ್ದ ನೆಲ ಫಲವತ್ತಾಗುವಂತೆ ಮಾಡಿತು, ಆ ಪೊದೆಯನ್ನು ಕಡುಗೆಂಪು ಬಣ್ಣದ, ದಳಗಳಿಂದ ತುಂಬಿಕೊಂಡ ಅದ್ಭುತ ಹೂವುಗಳು ಆವರಿಸಿಕೊಂಡವು, ಈ ಹೂವುಗಳೇ ನಮಗಾಗಿ ದೈವೀಪ್ರೇಮವನ್ನು ಒಳಗೊಂಡಿರುತ್ತವೆ, ಹಾಗೂ ಅಭಿವ್ಯಕ್ತಗೊಳಿಸುತ್ತವೆ.

**CWM, 7/373** **– ಶ್ರೀಮಾತೆ**

*

**ಪ್ರಶ್ನೆ :** *ಮಧುರ ಮಾತೆಯವರೆ, ನೀವು ಬರೆದ ಚಾಲ್ಡಿಯನ್ ಪುರಾಣ ಕತೆಗೂ ಹಾಗೂ ಕಾಳೀ ಪೂಜೆಗೂ ಏನಾದರೂ ಸಂಬಂಧವಿದೆಯೆ?*

**ಶ್ರೀಮಾತೆ :** ಹೌದು, ನನ್ನ ಮಗು, ಏಕೆಂದರೆ ಕಾಳೀ ಪೂಜೆಯ ದಿನದಂದು ನಾನು, ಯಾವಾಗಲೂ, 'ದೈವೀಪ್ರೇಮ' ಎಂಬ ಹೆಸರಿರುವ ಹೂವುಗಳನ್ನು ಹಂಚುತ್ತೇನೆ. ಮಹಾಶಕ್ತಿಯ ಎಲ್ಲ ಅಂಶಗಳಲ್ಲಿ ಅತ್ಯಂತ ಕ್ರಿಯಾಶೀಲ ಮತ್ತು ಅತ್ಯಂತ ಸಾಮರ್ಥ್ಯವುಳ್ಳ ಪ್ರೇಮವಿರುವ ಅಂಶ ಕಾಳಿಯದಾಗಿದೆ. ಮತ್ತು ಆ ಕಾರಣದಿಂದಾಗಿ ನಾನು ಪ್ರತಿವರ್ಷ ಕಾಳೀಪೂಜೆಯ ದಿನದಂದು 'ದೈವೀಪ್ರೇಮ' ಹೆಸರಿರುವ ಪೂವಿನ ದಳಗಳನ್ನು ಹಂಚುತ್ತೇನೆ. ಹೀಗೆ, ಈ ವಿವರಣೆ, ಸ್ವಾಭಾವಿಕವಾಗಿ, ದೈವೀಪ್ರೇಮವನ್ನು ಅಭಿವ್ಯಕ್ತಪಡಿಸುವುದಕ್ಕಾಗಿ ಈ ಹೂವುಗಳನ್ನು ಏಕೆ ಆಯ್ದುಕೊಳ್ಳಲಾಯಿತು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಕಷ್ಟಾಗುತ್ತದೆ.

*

**ಪ್ರಶ್ನೆ :** *ನೀವು ಯಾವ ಮನುಷ್ಯನನ್ನು ಕುರಿತು ಮಾತನಾಡಿದಿರೋ ಆ ಪುರುಷ ಯಾರು?*

**ಶ್ರೀಮಾತೆ :** ಆ ಸತ್ತೆ ಪುರುಷನಾಗಿದ್ದ ಎಂದು ನಿನಗೆ ಯಾರು ಹೇಳಿದರು? ಆ ಸತ್ತೆ ಪುರುಷನದಾಗಿತ್ತೋ ಇಲ್ಲವೆ ಸ್ತ್ರೀಯದಾಗಿತ್ತೋ ಎಂಬುದನ್ನು ಕುರಿತು ನಾನು ಮಾತನಾಡಿಲ್ಲ. "ದೈವೀ ಸತ್ತೆ" ಎಂದು ಹೇಳುವುದನ್ನು ಕುರಿತು ಕಾಳಜಿ ವಹಿಸಿದ್ದೆ.

ಅದು ಇತಿಹಾಸ ಪೂರ್ವದ ಕತೆ, ಹಾಗಾಗಿ ಅದನ್ನು ಕುರಿತು ಯಾವುದೇ ಮಾಹಿತಿ ದೊರಕಿಸುವುದು ಸಾಧ್ಯವಿಲ್ಲ. ಅದನ್ನು ಎಲ್ಲಿಯೂ ಬರೆದಿಡಲಾಗಿಲ್ಲ. ಬರೆದಿಟ್ಟ ದಾಖಲೆಗಳಾವೂ ಇಲ್ಲ.

**CWM, 7/365–66** **– ಶ್ರೀಮಾತೆ**

*

## ಪರಿಶುದ್ಧ ಹಾಗೂ ನಿರ್ಲಿಪ್ತ ಪ್ರೇಮ

ನಿನ್ನ ದೈವೀಪ್ರೇಮ ಪರಿಶುದ್ಧವಾದದ್ದು ಹಾಗೂ ನಿಷ್ಕಾಮವಾದದ್ದು, ಅದರಲ್ಲಿದ್ದುದನ್ನು ಗ್ರಹಿಸಿ ಪ್ರಕಟಪಡಿಸಲು ಶಕ್ತರಾಗುವುದು ನಿನ್ನನ್ನು ಅರಸುವ ಎಲ್ಲರ ಹೃದಯಗಳನ್ನು ತೆರೆದಿರಿಸಲು ಶಕ್ತವಾದ ಏಕೈಕ ಬೀಗದ ಕೈಯಾಗಿರುತ್ತದೆ. ಬುದ್ಧಿಮತ್ತೆಯಿಂದ ನಿನ್ನನ್ನು ಅರಸುವವರು ಅತ್ಯುಚ್ಚ ಹಾಗೂ ನಿಜವಾದ ಕಲ್ಪನೆ ಹೊಂದಿರಬಹುದು; ನಿಜವಾದ ಜೀವನದ ಬಗ್ಗೆ ಎಂದರೆ ನಿನ್ನೊಡನೆ ಏಕವಾಗಿರುವುದರ ಬಗ್ಗೆ ಎಲ್ಲ ಮಾಹಿತಿ ಅವರ ಬಳಿ ಇರಬಹುದು, ಆದರೆ ಅದು

ಅವರಿಗೆ ತಿಳಿದಿರುವುದಿಲ್ಲ, ಆ ಜೀವನದ ಬಗ್ಗೆ ಆಂತರಿಕ ಅನುಭವವಿರುವುದಿಲ್ಲ. ನಿನ್ನೊಡನೆ ಇರುವ ಎಲ್ಲ ಸಂಪರ್ಕದ ಬಗ್ಗೆ ಅವರು ಅಜ್ಞಾನಿಗಳಾಗಿರುತ್ತಾರೆ. ಬುದ್ಧಿಮತ್ತೆಯದಾದ ಜ್ಞಾನಕ್ಕೆ ಸೀಮಿತವಾಗಿರುವಂತಹರು ಹಾಗೂ ಕ್ರಿಯೆಯ ಒಂದು ರಚನೆಗೆ ಸೀಮಿತಗೊಂಡಿರುವಂತಹರು ಅದನ್ನು ಅತ್ಯಂತ ಒಳ್ಳೆಯದೆಂದು ನಂಬುತ್ತಾರೆ, ಅವರನ್ನು ಪರಿವರ್ತನೆಗೆ ಒಳಪಡಿಸುವುದು ಅತ್ಯಂತ ಕಠಿಣವಾದದ್ದು, ಭಗವಂತನ ಬಗ್ಗೆ ಅವರ ಪ್ರಜ್ಞೆಯನ್ನು ಜಾಗ್ರತಗೊಳಿಸುವುದು ಬೇರೆ ಸದಿಚ್ಛೆಯುಳ್ಳ ಮನುಷ್ಯನಲ್ಲಿ ಜಾಗ್ರತಗೊಳಿಸುವುದಕ್ಕಿಂತ ಹೆಚ್ಚು ಕಠಿಣವಾದದ್ದು. ಪ್ರೇಮ ಮಾತ್ರ ಈ ಪವಾಡವನ್ನು ಕಾರ್ಯಗತಗೊಳಿಸಬಲ್ಲದು, ಏಕೆಂದರೆ ಪ್ರೇಮ ಮಾತ್ರ ಎಲ್ಲ ದ್ವಾರಗಳನ್ನು ತೆರೆದಿರಿಸುತ್ತದೆ, ಎಲ್ಲ ಗೋಡೆಗಳಲ್ಲಿ ಒಳನುಗ್ಗಿ ಹೋಗುತ್ತದೆ, ಪ್ರತಿಯೊಂದು ಅಡೆತಡೆಯನ್ನು ತೆಗೆದುಹಾಕುತ್ತದೆ. ಸ್ವಲ್ಪ ಮಟ್ಟಿಗಿನ ನಿಜವಾದ ಪ್ರೇಮ ಅತ್ಯಂತ ಸುಂದರವಾದ ಭಾಷಣಗಳಿಗಿಂತ ಹೆಚ್ಚಿನದನ್ನು ಕೈಕೊಳ್ಳುತ್ತದೆ.

ದೈವೀ ಪ್ರಭುವೆ, ಪ್ರೇಮದ ಈ ಪರಿಶುದ್ಧ ಪುಷ್ಪ ನನ್ನಲ್ಲಿ ಅರಳಲಿ, ಅದು ತನ್ನ ಪರಿಮಳವನ್ನು ನಮ್ಮ ಬಳಿ ಬರುವವರೆಲ್ಲರಿಗೂ ಕೊಡುವಂತಾಗಲಿ ಮತ್ತು ಈ ಪರಿಮಳ ಅವರನ್ನು ಪವಿತ್ರಗೊಳಿಸಲಿ.

ಈ ಪ್ರೇಮದಲ್ಲಿ ಶಾಂತಿ ಹಾಗೂ ಸಂತೋಷಗಳಿವೆ, ಎಲ್ಲ ಬಲದ ಹಾಗೂ ಸಿದ್ಧಿಯ ಕಾರಂಜಿಯಿದೆ, ಅದು ವಿಫಲವಾಗದ ಚಿಕಿತ್ಸಕ ಮತ್ತು ಪರಮೋಚ್ಚ ರೀತಿಯಲ್ಲಿ ಸಮಾಧಾನಪಡಿಸುವವ ಇದ್ದ ಹಾಗೆ, ಅದು ಜಯಶಾಲಿ, ಸಾರ್ವಭೌಮ ಗುರುವಿದ್ದ ಹಾಗೆ.

ಓ, ದೈವೀ ಪ್ರಭು, ನನ್ನ ಮಧುರ ಗುರುವೆ, ನಿಶ್ಚಲ ನೀರವತೆಯಲ್ಲಿ ನಾನು ನಿನ್ನನ್ನು ಆರಾಧಿಸುತ್ತೇನೆ, ನನ್ನನ್ನು ನಿನಗೆ ಇಡಿಯಾಗಿ ಅರ್ಪಿಸಿಕೊಂಡಿರುತ್ತೇನೆ, ನೀನೇ ನನ್ನ ಜೀವನದ ಮೇಲೆ ಆಳಿಕೆ ನಡೆಸುತ್ತಿರುವಿ, ನನ್ನ ಹೃದಯದಲ್ಲಿ ಪರಿಶುದ್ಧ ಪ್ರೇಮದ ಜ್ವಾಲೆಯನ್ನು ಹೊತ್ತಿಸು, ಅದು ಮಿನುಗುತ್ತಿರುವ ಅಗ್ಗಿಷ್ಟಿಕೆಯ ಹಾಗೆ ಪ್ರಜ್ವಲಿಸಲಿ, ಎಲ್ಲ ಅಪರಿಪೂರ್ಣತೆಗಳನ್ನು ಸುಟ್ಟುಹಾಕಲಿ ಮತ್ತು ಅವುಗಳು ಸಮಾಧಾನಕರವಾಗಿ ಬೆಚ್ಚಗಿರಿಸುವಂತೆ ಪರಿವರ್ತನೆ ಹೊಂದಲಿ, ಅಹಂಮನ್ಯತೆಯ ಮೃತ ಕಟ್ಟಿಗೆಯ ಮೇಲೆ ಹಾಗೂ ಅಜ್ಞಾನದ ಕಪ್ಪು ಇದ್ದಲಿಯ ಮೇಲೆ ಪ್ರಕಾಶವನ್ನು ಹೊರಸೂಸಲಿ.

ಓ, ದೈವೀ ಪ್ರಭು, ಒಂದೇ ವೇಳೆಗೆ ಸಂತೋಷಕರವೂ ಹಾಗೂ ಗಂಭೀರವಾದದ್ದೂ ಆಗಿರುವ ಭಕ್ತಿಯಿಂದ ನಾನು ನಿನ್ನೆಡೆಗೆ ಹೊರಳುವೆ ಮತ್ತು

ನಿನ್ನ ದೈವೀಪ್ರೇಮ ಪ್ರಕಟವಾಗಲಿ,
ನಿನ್ನ ಆಳಿಕೆ ಬರಲಿ,
ನಿನ್ನ ಶಾಂತಿ ಜಗತ್ತಿನ ಮೇಲೆ ಆಳಿಕೆ ನಡೆಸಲಿ

ಎಂದು ನಿನ್ನಲ್ಲಿ ಮೊರೆಯಿಡುತ್ತೇನೆ.

**CWM, 1/40–41** **– ಶ್ರೀಮಾತೆ**

*

## ನಿನ್ನ ಪ್ರೇಮ ಜಗತ್ತಿಗಿಂತ ವಿಶಾಲವಾಗಿದೆ

ಓ ದೈವೀ ಪ್ರಭು, ಸತತ ಯಾರ ಬಗ್ಗೆ ನಾನು ಪ್ರಜ್ಞೆಯುಳ್ಳವಳಾಗಿರ–ಬೇಕಾಗಿದೆಯೋ, ಮತ್ತು ಯಾರನ್ನು ನನ್ನ ಸತ್ತೆಯ ಅತಿ ಚಿಕ್ಕ ಜೀವಕೋಶಗಳಲ್ಲಿ ಸಿದ್ಧಿಸಿಕೊಳ್ಳಬೇಕಾಗಿದೆಯೋ ಆ ನಿನ್ನನ್ನು ನಾನೆಂದೇ ತಿಳಿದುಕೊಳ್ಳುವೆ ಮತ್ತು ಎಲ್ಲ ವಸ್ತು–ವಿಷಯಗಳಲ್ಲಿ ನೀನು ಪ್ರಕಟವಾದದ್ದನ್ನು ನೋಡುವೆ. ನೀನು ಏಕೈಕ ದೈವೀ ನೈಜತೆಯಾಗಿರುವಿ, ಅಸ್ತಿತ್ವದ ಕಾರಣ ಹಾಗೂ ಗುರಿಯಾಗಿರುವಿ, ನಿನಗಾಗಿ ಇರುವ ನನ್ನ ಪ್ರೇಮ ಎಂದೆಂದಿಗೂ ಶ್ರೇಷ್ಠತರವಾಗಿ ಬೆಳೆಯುವಂತಾಗಲಿ ಎಂದು ಅನುಗ್ರಹಿಸು, ಅದರಿಂದಾಗಿ ನಾನು ಎಲ್ಲ ಪ್ರೇಮವಾಗುವಂತಾಗಲಿ, ಅದು ನಿನ್ನದೇ ಪ್ರೇಮ ಮತ್ತು ಅದು ನಿನ್ನ ಪ್ರೇಮವಾಗಿರುವುದರಿಂದ ನಾನು ಸಮಗ್ರವಾಗಿ ನಿನ್ನೊಡನೆ ಏಕವಾಗುವಂತಾಗಲಿ. ಈ ಪ್ರೇಮ ಹೆಚ್ಚು ಹೆಚ್ಚಾಗಿ ಗಾಢವಾಗಲಿ, ಸಂಪೂರ್ಣವಾಗಲಿ, ಪ್ರಕಾಶಮಯವಾಗಲಿ, ಸಾಮರ್ಥ್ಯಪೂರ್ಣವಾಗಲಿ, ಈ ಪ್ರೇಮ ನಿನ್ನತ್ತ ಪ್ರತಿರೋಧಿಸಲಾಗದ ಉತ್ಕಟೇಚ್ಛೆಯಾಗಲಿ, ನಿನ್ನನ್ನು ಪ್ರಕಟಿಸುವ ಅಜೇಯ ಸಾಧನವಾಗಲಿ, ಈ ಸತ್ತೆಯಲ್ಲಿರುವ ಪ್ರತಿಯೊಂದೂ ಆಳವನರಿಯ–ಲಾಗದ ಆಳಗಳಿಂದ ಅತ್ಯಂತ ಬಾಹ್ಯದಲ್ಲಿರುವ ದ್ರವ್ಯದವರೆಗೂ ಪರಿಶುದ್ಧವಾಗಲಿ, ಗಾಢವಾಗಲಿ, ಅನಾಸಕ್ತವಾಗಲಿ, ದೈವೀಪ್ರೇಮವಾಗಲಿ. ಈ ಒಟ್ಟುಗೂಡಿರುವುದರಲ್ಲಿ (ದೇಹದಲ್ಲಿ) ಪ್ರಕಟವಾಗುವ, ರೂಪ ತಾಳಿದ ದೇವ, ನಿನ್ನ ಸಂಪೂರ್ಣ ಹಾಗೂ ಘನತೆವೆತ್ತ ಪ್ರೇಮದ ಎರಕವಾಗಿರಲಿ, ಆ ಪ್ರೇಮ ಒಂದೇ ವೇಳೆಗೆ ಎಲ್ಲ ಜ್ಞಾನದ ಮೂಲ ಹಾಗೂ ಸಿದ್ಧಿಸಿಕೊಳ್ಳುವಿಕೆಯಾಗಿರುತ್ತದೆ; ನಿನ್ನ ಪ್ರೇಮದ ಮೂಲಕ

ಯೋಚನೆ ಸ್ಪಷ್ಟವಾಗುವಂತಾಗಲಿ, ಸಂಘಟಿತವಾಗಲಿ, ಜ್ಞಾನೋದಯ ಪಡೆಯಲಿ ಮತ್ತು ಪರಿವರ್ತನೆಗೊಳಗಾಗಲಿ; ಎಲ್ಲ ಜೀವಸತ್ತೆಗಳು ನಿನ್ನ ಪ್ರೇಮದಿಂದ ಗರ್ಭ–ತಳೆದವುಗಳಾಗಲಿ ಹಾಗೂ ಅದರಿಂದ ಎರಕ ಪಡೆಯುವಂತಾಗಲಿ, ಅದರಿಂದ ಪ್ರತಿರೋಧಿಸಲಾಗದ ಪರಿಶುದ್ಧತೆ ಮತ್ತು ಸತತವಿರುವ ಚೈತನ್ಯ, ಸಾಮರ್ಥ್ಯ ಹಾಗೂ ಸಚ್ಚಾರಿತ್ರ್ಯ ಇವೆಲ್ಲವುಗಳನ್ನು ಎಳೆದುಕೊಳ್ಳುವಂತಾಗಲಿ, ಈ ದುರ್ಬಲಗೊಂಡ ಮಧ್ಯವರ್ತಿ ಸತ್ತೆ ತನ್ನ ದೌರ್ಬಲ್ಯದ ಅನುಕೂಲತೆ ಪಡೆಯಲಿ, ಆ ಅನುಕೂಲತೆಯಿಂದ ನಿನ್ನ ಪ್ರೇಮದ ಎರಕಗೊಂಡ ಅಂಶಗಳಿಂದ ತನ್ನನ್ನು ಪುನರ್ರಚನೆ ಮಾಡಿಕೊಳ್ಳುವಂತಾಗಲಿ, ಮತ್ತು ಈಗ ಪ್ರಜ್ವಲಿಸುತ್ತಿರುವ ಅಗ್ಗಿಷ್ಟಿಕೆಯಾದ ಈ ದೇಹ ನಿನ್ನ ದೈವೀ, ಅವೈಯಕ್ತಿಕ, ಘನತೆವೆತ್ತ ಮತ್ತು ಸ್ಥಿರವಾಗಿರುವ ನಿನ್ನ ಪ್ರೇಮವನ್ನು ಅದರ ಪ್ರತಿಯೊಂದು ರಂಧ್ರದಿಂದ ಹೊರಸೂಸಲಿ.. ಮಿದುಳು ನಿನ್ನ ಪ್ರೇಮದಿಂದ ಪುನರ್ರಚಿತಗೊಳ್ಳಲಿ, ಕೊನೆಯದಾಗಿ, ನಿನ್ನ ಪ್ರೇಮ ಅದರದೇ ಸಾಮರ್ಥ್ಯ, ವೈಭವ, ಮಾಧುರ್ಯ, ಮತ್ತು ಶಕ್ತಿಗಳೊಡನೆ ಎಲ್ಲ ವಸ್ತು–ವಿಷಯಗಳ ಮೇಲೆ ಹೊರಹರಿಯಲಿ, ಪ್ರವಹಿಸಲಿ, ಒಳನುಗ್ಗಲಿ, ಅವು ರೂಪಪರಿವರ್ತನೆಗೊಳ್ಳಲಿ, ಪುನರುಜ್ಜೀವನ ಪಡೆಯಲಿ, ಜೀವಂತವಾಗಲಿ, ನಿನ್ನ ಪ್ರೇಮದಲ್ಲಿ ಶಾಂತಿಯಿದೆ, ಸಂತೋಷವಿದೆ, ನಿನ್ನ ಪ್ರೇಮದಲ್ಲಿ ಸೇವಕನ ಕಾರ್ಯಕ್ಕಾಗಿ ಸಾರ್ವಭೌಮ ಸನ್ನೆ(lever)ಯಿದೆ. ನಿನ್ನ ಪ್ರೇಮ ವಿಶ್ವಕ್ಕಿಂತ ವಿಶಾಲವಾಗಿದೆ, ಎಲ್ಲ ಯುಗಗಳಿಗಿಂತಲೂ ಹೆಚ್ಚಿನ ಕಾಲ ಬಾಳುವಂತಾಗಿದೆ; ಅದು ಅನಂತ, ಸನಾತನ, ಅದು ನೀನೇ ಆಗಿರುವಿ. ನಾನು ನೀನೇ ಆಗಬೇಕೆಂದು ಬಯಸುತ್ತೇನೆ ಮತ್ತು ಅದು ನಾನೇ ಆಗಿರುವೆ, ಏಕೆಂದರೆ ನಿನ್ನ ನಿಯಮ ಹಾಗಿದೆ, ನಿನ್ನ ಸಂಕಲ್ಪ ಹಾಗಿದೆ.

**CWM, 1/154** **– ಶ್ರೀಮಾತೆ**

*

## ವಿಜಯಿಯಾಗಿರುವ ದೈವೀಪ್ರೇಮದ ಸಾಮರ್ಥ್ಯ

ಓ, ವಿಜಯಿಯಾಗಿರುವ ದೈವೀಪ್ರೇಮದ ಸಾಮರ್ಥ್ಯವೆ ನೀನು ಈ ವಿಶ್ವದ ಸಾರ್ವಭೌಮ ಒಡೆಯನಾಗಿರುವಿ, ನೀನು ಅದರ ಸೃಷ್ಟಿಕರ್ತ ಹಾಗೂ ಸಂರಕ್ಷಕ–ನಾಗಿರುವಿ, ಅದು ಅಸ್ತವ್ಯಸ್ತತೆಯಿಂದ ಹೊರಹೊಮ್ಮಲು ಅದಕ್ಕೆ ಅನುಮತಿ ನೀಡಿರುವಿ. ಮತ್ತು ಈಗ ನೀನು ಅದರ ಶಾಶ್ವತ ಗುರಿಯತ್ತ ಅದನ್ನು ಮುನ್ನಡೆಸಿ–

ಕೊಂಡು ಹೋಗುತ್ತಿರುವಿ. ಇದಕ್ಕಿಂತ ವಿನಮ್ರವಾದ ವಿಷಯ ಬೇರೊಂದಿಲ್ಲ, ಆದರೆ ಅದರಲ್ಲಿ ನೀನು ದೇದೀಪ್ಯಮಾನನಾಗಿರುವುದನ್ನು ನಾನು ನೋಡುತ್ತೇನೆ, ನಿನ್ನ ಸಂಕಲ್ಪಕ್ಕೆ ತೋರಿಕೆಗೆ ಅಷ್ಟೊಂದು ವೈರತ್ವವಿರುವ ಸತ್ತೆಯನ್ನಲ್ಲ, ಆದರೆ ನೀನು ಅದರಲ್ಲಿ ಜೀವಿಸುತ್ತಿರುವುದನ್ನು, ಕಾರ್ಯ ಕೈಕೊಳ್ಳುತ್ತಿರುವುದನ್ನು, ತೇಜಸ್ಸನ್ನು ಹೊರಸೂಸುತ್ತಿರುವುದನ್ನು ನಾನು ನೋಡುತ್ತೇನೆ. ಓ, ನನ್ನ ಮಧುರ ಸ್ವಾಮಿಯೆ, ಈ ಪ್ರೇಮದ ಸಾರವಾದವನೆ, ನಾನು ನಿನ್ನ ಹೃದಯ ಮತ್ತು ನಿನ್ನ ದೈವೀಪ್ರೇಮದ ರಭಸ ಪ್ರವಾಹಗಳು ನನ್ನ ಇಡೀ ಸತ್ತೆಯಲ್ಲಿ ಹಾದು ಹೋಗುತ್ತವೆ, ಎಲ್ಲ ವಸ್ತು–ವಿಷಯಗಳಲ್ಲಿ ನಿನ್ನ ದೈವೀಪ್ರೇಮವನ್ನು ಜಾಗ್ರತಗೊಳಿಸುತ್ತವೆ ಇಲ್ಲವೆ ಅದಕ್ಕೂ ಹೆಚ್ಚಾಗಿ ಎಲ್ಲ ವಸ್ತು–ವಿಷಯಗಳು, ಎಲ್ಲವನ್ನೂ ಜೀವಂತಗೊಳಿಸುವ ನಿನ್ನ ದೈವೀಪ್ರೇಮದ ಪ್ರಜ್ಞೆಗೆ ಎಚ್ಚರಗೊಳ್ಳುವಂತೆ ಮಾಡುತ್ತವೆ.

ನಿನ್ನನ್ನು ಗುರುತಿಸದೆ ಇರುವ ಎಲ್ಲವನ್ನೂ, ನಿನ್ನನ್ನು ತಿಳಿದುಕೊಳ್ಳದೆ ಇರುವವರನ್ನೂ, ನಿನ್ನ ಮಧುರ ದೈವೀ ನಿಯಮಕ್ಕೆ ಮುಖ ತಿರುಗಿಸಿ ಹೋಗಲು ಪ್ರಯತ್ನಿಸುವ ಎಲ್ಲರನ್ನೂ ನನ್ನ ತೋಳುಗಳಲ್ಲಿ ತೆಗೆದುಕೊಳ್ಳುತ್ತೇನೆ, ನನ್ನ ಪ್ರೇಮದ ಹೃದಯದ ತೊಟ್ಟಿಲಲ್ಲಿ ಅವರನ್ನಿರಿಸಿ ತೂಗುತ್ತೇನೆ ಮತ್ತು ಅವರನ್ನು ನಿನ್ನ ದೈವೀ ಜ್ವಾಲೆಗಳಿಗೆ ಅರ್ಪಿಸುತ್ತೇನೆ, ಅದರಿಂದಾಗಿ ನಿನ್ನ ಅದ್ಭುತ ತೇಜಸ್ಸು ಅವರೊಳಗೆ ನುಗ್ಗಿ ಹೋಗಿ ಅವರು ನಿನ್ನ ದೈವೀ ಆನಂದದಲ್ಲಿ ಪರಿವರ್ತನೆಗೆ ಒಳಗಾಗುವಂತಾಗುವುದು.

ಓ ದೇದೀಪ್ಯಮಾನವಾದ ದೈವೀಪ್ರೇಮವೆ, ಎಲ್ಲದರಲ್ಲೂ ನೀನು ಒಳನುಗ್ಗುವಿ, ಮತ್ತು ಎಲ್ಲವನ್ನೂ ರೂಪಪರಿವರ್ತನೆಗೆ ಒಳಪಡಿಸುವಿ.

**CWM, 1/163** **– ಶ್ರೀಮಾತೆ**

*



ಓ ನನ್ನ ಮಧುರ ಸ್ವಾಮಿ, ಎಷ್ಟೊಂದು ಉತ್ಸಾಹದಿಂದ ನನ್ನ ಪ್ರೇಮ ನಿನಗಾಗಿ ಅಭೀಪ್ಸೆ ಪಡುತ್ತಿದೆ...

ನಿನ್ನ ದೈವೀಪ್ರೇಮವಲ್ಲದೆ ನಾನು ಬೇರೇನೂ ಆಗಿರದ ಹಾಗೆ ಅನುಗ್ರಹಿಸು ಮತ್ತು ಪ್ರತಿಯೊಂದು ಸತ್ತೆಯಲ್ಲಿ ಈ ಸಾಮರ್ಥ್ಯಪೂರ್ಣ ಹಾಗೂ ವಿಜಯಿಯಾಗಿರುವ ಈ ದೈವೀಪ್ರೇಮ ಎಚ್ಚತ್ತುಕೊಳ್ಳುವಂತಾಗಲಿ.

ನಾನು ಪೃಥ್ವಿಯನ್ನು ಆವರಿಸಿಕೊಳ್ಳುವ ಪ್ರೇಮದ ವಿಶಾಲ ಹೊದಿಕೆಯಾಗು–ವಂತಾಗಲಿ, ಎಲ್ಲರ ಹೃದಯಗಳನ್ನು ಪ್ರವೇಶಿಸುವಂತಾಗಲಿ, ಪ್ರತಿಯೊಬ್ಬನ ಕಿವಿಯಲ್ಲಿ ಭರವಸೆ ಮತ್ತು ಶಾಂತಿ ಇವುಗಳಿರುವ ಸಂದೇಶವನ್ನು ಪಿಸುಗುಟ್ಟಿ ಹೇಳುವಂತಾಗಲಿ.

**CWM, 1/137** **– ಶ್ರೀಮಾತೆ**

*

## ಎಲ್ಲ ವಸ್ತು–ವಿಷಯಗಳಲ್ಲಿ ಹಾಗೂ ಎಲ್ಲೆಡೆಯಲ್ಲಿ ಈ ಪ್ರೇಮವಾಗಿರು

(ಕಳೆದ ದಿನ ಸಾಯಂಕಾಲ ನಾನು ನಿಶ್ಚಲ ನೀರವತೆಯಲ್ಲಿ ಕೇಳಿಸಿಕೊಂಡದ್ದರ ಟಿಪ್ಪಣಿ)

"ವಿವೇಕ ಹಾಗೂ ಪ್ರಜ್ಞೆ ಇವುಗಳನ್ನೂ ಕೂಡಿಕೊಂಡು ಪ್ರತಿಯೊಂದನ್ನೂ ತ್ಯಾಗ ಮಾಡುವುದರ ಮೂಲಕ ನಿನ್ನ ಹೃದಯಕ್ಕೆ ಒಪ್ಪಿಸಿದ ಪಾತ್ರ ವಹಿಸಲು ನೀನು ಶಕ್ತಳಾಗಿರುವಿ. ತೋರಿಕೆಗೆ ಅದು ಪ್ರತಿಫಲ ನೀಡದ ಪಾತ್ರ, ಎಲ್ಲರಿಗೂ ಸಮೃದ್ಧವಾಗಿ ನೀರು ಹರಿಸಿಕೊಡುವ ಕಾರಂಜಿಯಂತಹದರ ಪಾತ್ರ, ಆ ಕಾರಂಜಿಯತ್ತ ಯಾವ ನೀರೂ ಮರಳಿ ಹೋಗುವುದಿಲ್ಲ, ಅದು ಬರಿದಾಗಿ ಹೋಗದ ಬಲವನ್ನು ಆಳಗಳಿಂದ ತೆಗೆದುಕೊಳ್ಳುತ್ತದೆ ಮತ್ತು ಹೊರಗಿನಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಬರಿದಾಗಿ ಹೋಗದ ಪ್ರೇಮದ ವಿಸ್ತಾರದೊಂದಿ–ಗಿರುವ ಘನತೆವೆತ್ತ, ದಿವ್ಯಾನಂದದ ಭಾವನೆ ನಿನಗೆ ಈಗಾಗಲೆ ಬಂದಿರಬಹುದು, ಏಕೆಂದರೆ ಪ್ರೇಮಕ್ಕೆ ಪ್ರೇಮವಷ್ಟೇ ಸಾಕಾಗುತ್ತದೆ, ಅದಕ್ಕೆ ಯಾವ ಪರಸ್ಪರತೆಯ ಆವಶ್ಯಕತೆ ಇರುವುದಿಲ್ಲ; ಇದು ವ್ಯಕ್ತಿಗತ ಪ್ರೇಮಕ್ಕೂ ನಿಜವಾಗಿರುತ್ತದೆ. ಹಾಗಾಗಿ ಅನಂತವನ್ನು ಇಷ್ಟೊಂದು ಉದಾರವಾಗಿ ಪ್ರತಿಫಲಿಸುವ ದೈವೀಪ್ರೇಮ ಕುರಿತು ಇದು ಇನ್ನೂ ಹೆಚ್ಚು ಸತ್ಯವಾಗಿದೆಯಲ್ಲವೇ?"

"ಎಲ್ಲ ವಸ್ತು–ವಿಷಯಗಳಲ್ಲಿ ಮತ್ತು ಎಲ್ಲೆಡೆಯಲ್ಲೂ ಈ ಪ್ರೇಮವಾಗಿರು, ಎಂದೆಂದಿಗೂ ಇನ್ನೂ ಹೆಚ್ಚು ವಿಸ್ತಾರವಾಗಿ, ಇನ್ನೂ ಹೆಚ್ಚು ಗಾಢವಾಗಿ ಆ ಪ್ರೇಮ ಸ್ವರೂಪಳಾಗಿರು ಮತ್ತು ಇಡೀ ಜಗತ್ತು, ಒಂದೇ ಕಾಲಕ್ಕೆ, ನಿನ್ನ ಕಾರ್ಯ ಸ್ವರೂಪದ್ದು, ಸಂಪತ್ತಿನದು, ಹಾಗೂ ನಿನ್ನ ಕಾರ್ಯದ ಮತ್ತು ವಿಜಯದ ಕ್ಷೇತ್ರದ್ದಾಗುವುದು. ಕೊನೆಯ ಮಿತಿಗಳನ್ನು ಮುರಿದು ಹಾಕಲು ಪಟ್ಟು ಹಿಡಿದು ಹೋರಾಡು, ಅವು ಸತ್ತೆಯ ಎದುರು ಕೇವಲ ದುರ್ಬಲ ಅಡೆತಡೆಗಳಾಗಿರುತ್ತವೆ, ಈಗಾಗಲೆ ಜ್ಞಾನೋದಯವನ್ನು ಉಂಟುಮಾಡುವ ದೈವೀ ಸಾಮರ್ಥ್ಯದಿಂದ ಪ್ರಕಾಶಿತಗೊಳಿಸಲಾದ ಕೊನೆಯ ಮಬ್ಬುತನಗಳ ಮೇಲೆ ಜಯ ಸಾಧಿಸಲು ಹೋರಾಡು."

"ಗೆದ್ದು ವಿಜಯಿಯಾಗಲು ಹೋರಾಡು, ಹೊಸ ದೈವೀ ಪ್ರಕಾಶ ಪುಟಿದೆದ್ದು ಮುಂದೆ ಬರಲು, ಜಗತ್ತಿಗೆ ಅವಶ್ಯವಾಗಿರುವ ಹೊಸ ಉದಾಹರಣೆ ಕೊಡುವುದಕ್ಕಾಗಿ ಇಂದಿನವರೆಗೆ ಇದ್ದ ಪ್ರತಿಯೊಂದರ ಮೇಲೆ ಜಯ ಸಾಧಿಸು. ಆಂತರಿಕ ಹಾಗೂ ಬಾಹ್ಯ ಹೀಗೆ ಎಲ್ಲ ಅಡೆತಡೆಗಳ ವಿರುದ್ಧ ಮೊಂಡುತನದಿಂದ ಹೋರಾಡು. ಅದು ನಿನ್ನ ಸಿದ್ಧಿಗಾಗಿ ನೀಡಿದ ಅಮೂಲ್ಯ ಮುತ್ತು (pearl)."

**CWM, 1/337** **– ಶ್ರೀಮಾತೆ**

*

ಪುರುಷನ ಪ್ರೇಮ, ಸ್ತ್ರೀಯ ಪ್ರೇಮ, ವಸ್ತು–ವಿಷಯಗಳ ಪ್ರೇಮ, ನಿನ್ನ ನೆರೆಹೊರೆಯಲ್ಲಿ ಇರುವವರ ಪ್ರೇಮ, ನಿನ್ನ ದೇಶದ ಪ್ರೇಮ, ಪಶುಗಳ ಪ್ರೇಮ, ಮನುಕುಲದ ಪ್ರೇಮ ಇವೆಲ್ಲ ಜೀವಂತವಿರುವ ಪ್ರತೀಕಗಳಲ್ಲಿ ಪ್ರತಿಫಲಿತಗೊಂಡ ಭಗವಂತನ ಪ್ರೇಮವಾಗಿರುತ್ತದೆ. ಹಾಗಾಗಿ ಎಲ್ಲದರ ಸಂತೋಷ ಪಡೆಯು–ವುದಕ್ಕಾಗಿ ಎಲ್ಲರಿಗೂ ಸಹಾಯ ನೀಡುವುದಕ್ಕಾಗಿ ಮತ್ತು ಎಂದೆಂದಿಗೂ ಪ್ರೀತಿಸುವುದಕ್ಕಾಗಿ ಪ್ರೀತಿಸು ಮತ್ತು ಬಲಿಷ್ಠವಾಗುವಂತೆ ಅಭಿವೃದ್ಧಿ ಹೊಂದು.

**CWM, 10/346** **– ಶ್ರೀಮಾತೆ**

*

ಪೂಜಾರೂಪದ ಪ್ರೇಮ ಒಮ್ಮೆಗೆ ಒಂದು ಅಭೀಪ್ಸೆ ಹಾಗೂ ತಯಾರಿಯಾಗಿರುತ್ತದೆ; ಅದು ಅವಿದ್ಯೆಯಲ್ಲಿಯ ತನ್ನ ಚಿಕ್ಕ ಮಿತಿಗಳಲ್ಲಿ ಇನ್ನೂ ಹೆಚ್ಚು ಕಡಿಮೆ ಕುರುಡಾಗಿರುವ ಒಂದು ಇಣುಕು ನೋಟವನ್ನು ತರಬಲ್ಲದು, ಆದರೆ ಭಾಗಶಃವಾಗಿರುವ ಅದು ಆಶ್ಚರ್ಯಕಾರಕ ಸಿದ್ಧಿಯಾಗಿರುತ್ತದೆ; ಏಕೆಂದರೆ ಕೆಲವು ಕ್ಷಣಗಳಿರುತ್ತವೆ, ಆಗ ನಾವಲ್ಲ, ಆದರೆ ಪ್ರೀತಿಸುವ ಮತ್ತು ನಮ್ಮಿಂದ ಪ್ರೀತಿಸಲ್ಪಡುವ ದೈವೀ ಏಕವಾದವನಿರುತ್ತಾನೆ, ಮತ್ತು ಈ ಅನಂತ ದೈವೀಪ್ರೇಮ ಹಾಗೂ ಪ್ರೀತಿಸುವವನ ಇಣುಕು ನೋಟ ಮಾನವ ಭಾವೋದ್ರೇಕವನ್ನೂ ಕೂಡ ಮೇಲಕ್ಕೆತ್ತಿ ಹಿಡಿಯಬಲ್ಲದು. ಈ ಕಾರಣದಿಂದಾಗಿ ದೇವನ ಪೂಜೆ, ಮೂರ್ತಿ ಪೂಜೆ, ಮಾನವ ಚುಂಬಕ ಇಲ್ಲವೆ ಆದರ್ಶ ಇಂತಹವುಗಳನ್ನು ಕೀಳಾಗಿ ಕಾಣಬಾರದು; ಏಕೆಂದರೆ ಈ ಹೆಜ್ಜೆಗಳ ಮೂಲಕ ಮನುಕುಲ ಆ ದಿವ್ಯಾನಂದವಿರುವ ಭಾವೋದ್ರೇಕದತ್ತ, ಅತ್ಯಾನಂದದತ್ತ ಚಲಿಸುತ್ತದೆ. ಆ ಹೆಜ್ಜೆಗಳು ದಿವ್ಯಾನಂದವನ್ನು ಸೀಮಿತಗೊಳಿಸುವುದರಲ್ಲಿಯೇ ನಮ್ಮ ಅಪರಿಪೂರ್ಣ ದರ್ಶನವನ್ನು ನಮಗಾಗಿ ಪ್ರತಿನಿಧಿಸುತ್ತವೆ, ಆಗ ಪ್ರಕೃತಿ ಇನ್ನೂ ನಮ್ಮ ಪಾದಗಳಿಗಾಗಿ ನಿಮ್ನ ಮಟ್ಟದ ಹೆಜ್ಜೆಗಳನ್ನು ಕತ್ತರಿಸಿಟ್ಟಿರುತ್ತದೆ, ಅವುಗಳು ನಮ್ಮ ಉಪಯೋಗಕ್ಕಾಗಿ ಇರುತ್ತವೆ, ನಮ್ಮ ಪ್ರಗತಿಯ ಹಂತಗಳನ್ನು ಪ್ರಕೃತಿ ಒಪ್ಪಿಕೊಳ್ಳುತ್ತದೆ. ಕೆಲವೊಂದು ಮೂರ್ತಿ ಪೂಜೆಗಳು ನಮ್ಮ ಭಾವನಾತ್ಮಕ ಸತ್ತೆಯ ಅಭಿವೃದ್ಧಿಗಾಗಿ ಅತ್ಯಗತ್ಯವಾಗಿರುತ್ತವೆ, ತಿಳಿದುಕೊಂಡ ಮನುಷ್ಯ, ಪೂಜೆ ಮಾಡುವವನ ಹೃದಯದಲ್ಲಿ ಆ ಮೂರ್ತಿ ಪ್ರತಿನಿಧಿಸುವ ದೈವೀ ನೈಜತೆಯನ್ನು ಇರಿಸುವವರೆಗೆ ಆ ಮೂರ್ತಿಯ ಪ್ರತೀಕವನ್ನು ಯಾವುದೇ ಸಮಯದಲ್ಲಿ ಅವಸರದಿಂದ ಚೂರು ಚೂರು ಮಾಡಬಾರದು. ಅಲ್ಲದೆ ಆ ಪ್ರತೀಕಗಳಿಗೆ ಈ

ಸಾಮರ್ಥ್ಯವಿರುತ್ತದೆ, ಏಕೆಂದರೆ ಅವುಗಳಲ್ಲಿ ಅವುಗಳ ರೂಪಗಳಿಗಿಂತ ಶ್ರೇಷ್ಠತರವಾದ, ವಿಶಿಷ್ಟವಾದ ಏನೋ ಒಂದಿರುತ್ತದೆ, ನಾವು ಪರಮೋಚ್ಚ ಪೂಜೆಯನ್ನು ಕೈಕೊಳ್ಳುವ ಮಟ್ಟ ತಲುಪಿದಾಗಲೂ ಕೂಡ ಅದು ಅಲ್ಲಿ ನೆಲೆಸಿರುತ್ತದೆ ಮತ್ತು ಅದರ ಮುಂದುವರಿಕೆ ಇಲ್ಲವೆ ಅದರ ಸರ್ವವ್ಯಾಪಿ ಇಡಿಯಾದುದರ ಭಾಗವಾಗಿರುವ ಹಾಗಿರುತ್ತದೆ. ನಮ್ಮ ಜ್ಞಾನ ನಮ್ಮಲ್ಲಿ ಇನ್ನೂ ಅಪರಿಪೂರ್ಣವಾಗಿರುತ್ತದೆ, ಪ್ರೇಮ ಪೂರ್ತಿಯಾಗಿರುವುದಿಲ್ಲ. ಎಲ್ಲ ರೂಪಗಳನ್ನು ಹಾಗೂ ಪ್ರಕಟಣೆಗಳನ್ನು ಮೀರಿ ಹೋಗುವ 'ತತ್'ನ್ನು ನಾವು ಅರಿತುಕೊಂಡಾಗಲೂ ಕೂಡ ನಾವು ಭಗವಂತನನ್ನು ಜೀವಿಯಲ್ಲಿ, ವಸ್ತುವಿನಲ್ಲಿ, ಮನುಷ್ಯನಲ್ಲಿ, ಮಾನವ ಕುಲದಲ್ಲಿ, ಪಶುವಿನಲ್ಲಿ, ಗಿಡದಲ್ಲಿ, ಹೂವಿನಲ್ಲಿ, ನಮ್ಮ ಕೈಗಳಿಂದಾಗುವ ಕಾರ್ಯದಲ್ಲಿ, ಇನ್ನು ಮುಂದೆ ಪ್ರಕೃತಿ ಭೌತಿಕ ಯಂತ್ರದ ಕ್ರಿಯೆಯಿಂದಾಗಿರದೆ, ಆದರೆ ವಿಶ್ವಂಭರ ದೈವೀ ಶಕ್ತಿಯ ಮುಖ ಹಾಗೂ ಸಾಮರ್ಥ್ಯವಾಗಿದೆ ಎಂದು ಕಂಡುಬರುವ ಪ್ರಕೃತಿ–ಶಕ್ತಿಯಲ್ಲಿ ನಾವು ಕಂಡುಕೊಳ್ಳುವುದನ್ನು ಒಪ್ಪಿಕೊಳ್ಳದಿದ್ದರೆ ನಮ್ಮ ಜ್ಞಾನ ನಮ್ಮಲ್ಲಿ ಇನ್ನೂ ಅಪರಿಪೂರ್ಣವಾಗಿರುತ್ತದೆ, ಏಕೆಂದರೆ ಈ ವಸ್ತು–ವಿಷಯಗಳಲ್ಲಿಯೂ ಕೂಡ ಸನಾತನನ ಸಾನ್ನಿಧ್ಯವಿರುತ್ತದೆ.

**CWSA, 23/159** **– ಶ್ರೀ ಅರವಿಂದರು**

*

ಓ ನನ್ನ ದೇವನೆ, ನಾನು ನಿನ್ನಲ್ಲಿ ಯಾವ ದೋಷವನ್ನೂ ಕಂಡುಕೊಳ್ಳದೆ ಇರುವುದರಿಂದ ಅವರು ನನ್ನನ್ನು ಹುಚ್ಚಳೆಂದು ಹೇಳುತ್ತಾರೆ, ಆದರೆ ನಾನು ದೈವೀಪ್ರೇಮದಿಂದ ನಿಜವಾಗಿ ಹುಚ್ಚಳಾಗಿದ್ದರೆ, ನನ್ನ ಚಿತ್ತಸ್ವಾಸ್ಥ್ಯವನ್ನು ಮರಳಿ ಪಡೆಯಲು ಬಯಸುವುದಿಲ್ಲ.

**CWM, 10/337** **– ಶ್ರೀಮಾತೆ**

*



“ಓ ಪರಮೋಚ್ಚ ಮತ್ತು ಏಕೈಕ ಅಂತರಂಗದ ಮಿತ್ರನೆ, ನಾವು ನಿನಗೆ ಹೇಳಬೇಕಾದುದನ್ನು ನೀನು ಮೊದಲೇ ತಿಳಿದುಕೊಂಡಿರುವಿ, ಏಕೆಂದರೆ ನೀನು ಅದರ ಮೂಲವಾಗಿರುವಿ!”

“ಓ ಪರಮೋಚ್ಚ ಹಾಗೂ ಏಕೈಕ ಸ್ನೇಹಿತನೆ, ನಾವಿರುವ ಹಾಗೆ ನಮ್ಮನ್ನು ಒಪ್ಪಿಕೊಳ್ಳುವಿ, ಪ್ರೀತಿಸುವಿ, ಅರ್ಥಮಾಡಿಕೊಳ್ಳುವಿ, ಏಕೆಂದರೆ ನಮ್ಮನ್ನು ನಿರ್ಮಾಣ ಮಾಡಿದವನು ನೀನೇ ಆಗಿರುವಿ!”

“ಓ ಪರಮೋಚ್ಚ ಹಾಗೂ ಏಕೈಕ ಮಾರ್ಗದರ್ಶಕನೆ, ನೀನು ನಮ್ಮ ಅತ್ಯುಚ್ಚ ಸಂಕಲ್ಪವನ್ನು ನಿರಾಕರಿಸುವುದಿಲ್ಲ, ಏಕೆಂದರೆ ನಮ್ಮಲ್ಲಿ ಸಂಕಲ್ಪ ಮಾಡುವವನು ನೀನೇ ಆಗಿರುವಿ!”

“ನಮಗೆ ಕಿವಿಗೊಡುವ, ನಮ್ಮನ್ನು ಅರ್ಥಮಾಡಿಕೊಳ್ಳುವ, ಪ್ರೀತಿಸುವ, ನಮಗೆ ಮಾರ್ಗದರ್ಶನ ಮಾಡುವ ಯಾರನ್ನಾಗಲಿ ನಿನ್ನಲ್ಲಿ ಅಲ್ಲದೆ ಬೇರೆಡೆಯೆಲ್ಲಿಯೋ ಅರಸುವುದು ಮೂರ್ಖತನ, ಏಕೆಂದರೆ, ಯಾವಾಗಲೂ, ನಮ್ಮ ಕರೆಗೆ ಓಗೊಡಲು ನೀನಲ್ಲಿರುವಿ, ನೀನೆಂದಿಗೂ ನಮಗೆ ಆಶಾಭಂಗ ಉಂಟು ಮಾಡುವುದಿಲ್ಲ!”

**CWM, 1/375** **– ಶ್ರೀಮಾತೆ**

*

# ವೇದನೆಯ ಮೂಲ

ವೇದನೆಗೆ ಒಳಗಾದವರು ಮಾತ್ರ ಇತರರ ವೇದನೆಯನ್ನು ತಿಳಿದುಕೊಳ್ಳ–ಬಲ್ಲರು; ಅದನ್ನು ತಿಳಿದುಕೊಂಡು, ಸಂಸರ್ಗದಲ್ಲಿ ಬಂದು ಶಮನಮಾಡಬಲ್ಲರು. ಓ ದೈವೀ ಸಮಾಧಾನ ನೀಡುವವನೆ, ಘನತೆವೆತ್ತ ಪೂರ್ಣಾಹುತಿಯೇ ಆದವನೆ, ನಾನು ತಿಳಿದುಕೊಂಡದ್ದೇನೆಂದರೆ ನಮ್ಮನ್ನು ಎಲ್ಲ ತೊಂದರೆಗಳಲ್ಲಿ ಪೋಷಿಸಿ–ಕೊಂಡು ಬರುವುದಕ್ಕಾಗಿ, ನಮ್ಮ ಎಲ್ಲ ನೋವಿನ ಬಾಧೆಗಳಿಗೆ ಸಾಂತ್ವನ ನೀಡುವುದಕ್ಕಾಗಿ ಪೃಥ್ವಿಯ ಹಾಗೂ ಮನುಷ್ಯನ ಎಲ್ಲ ವೇದನೆಗಳನ್ನು ನೀನು, ಯಾವುದನ್ನೂ ಹೊರತುಪಡಿಸದೆ ತಿಳಿದುಕೊಂಡಿರಬೇಕು.

ನಿನ್ನ ಪೂಜೆ ಕೈಕೊಳ್ಳುವವರೆಂದು ಹಕ್ಕು ಸಾಧಿಸುವವರ ಮಧ್ಯದಲ್ಲಿ ಕೆಲವರು ನಿನ್ನನ್ನು ಕ್ರೂರ ಹಿಂಸೆ ನೀಡುವವನೆಂದೂ, ನಿನ್ನಿಂದ ಸಹಿಸಿಕೊಳ್ಳಲಾಗುತ್ತಿರುವ ಇಲ್ಲವೆ ನಿನ್ನದೇ ಸಂಕಲ್ಪದಿಂದ ಸೃಷ್ಟಿಸಲಾದ ಚಿತ್ರಹಿಂಸೆಯನ್ನು ಸಾಕ್ಷಿಯಾಗಿ ನೋಡುವ, ಕನಿಕರವಿಲ್ಲದ ನ್ಯಾಯಾಧೀಶನೆಂದೂ ಭಾವಿಸುತ್ತಾರೆ, ಇದು ಹೇಗೆ?

ಇಲ್ಲ, ನಾನೀಗ ಈ ಎಲ್ಲ ವೇದನೆಗಳು ಭೌತದ್ರವ್ಯದ ಅಪರಿಪೂರ್ಣತೆಯಿಂದ ಬರುತ್ತವೆ ಎಂಬುದನ್ನು ಗ್ರಹಿಸುತ್ತಿದ್ದೇನೆ; ಅದು ತನ್ನ ಅಸ್ತವ್ಯಸ್ತತೆಯಲ್ಲಿ, ಒರಟುತನದಲ್ಲಿ ನಿನ್ನನ್ನು ಪ್ರಕಟಿಸಲು ಯೋಗ್ಯವಾಗಿಲ್ಲ. ಅದನ್ನು ಕುರಿತು ವೇದನೆಗೆ ಒಳಗಾಗುವವರಲ್ಲಿ, ಗೋಳಿಡುವವರಲ್ಲಿ ನೀನೇ ಮೊದಲಿಗನಾಗಿರುವಿ; ಅಸ್ತವ್ಯಸ್ತವಾದದ್ದನ್ನು ವ್ಯವಸ್ಥಿತವಾದದ್ದನ್ನಾಗಿ, ವೇದನೆಯನ್ನು ಸಂತೋಷವನ್ನಾಗಿ, ಅವ್ಯವಸ್ಥೆಯನ್ನು ಸಾಮರಸ್ಯದ್ದನ್ನಾಗಿ ಬದಲು ಮಾಡಲು ಉತ್ಸಾಹದ ಬಯಕೆ–ಯಿಂದ ಶ್ರಮಪಡುವವರಲ್ಲಿ, ಹೆಣಗುವವರಲ್ಲಿ ನೀನೇ ಮೊದಲಿಗನಾಗಿರುವಿ.

ವೇದನೆ ಅನಿವಾರ್ಯವಾದದ್ದಲ್ಲ, ಇಲ್ಲವೆ ಬಯಸುವಂತಹದಲ್ಲ, ಆದರೆ ಅದು ನಮಗೆ ಬಂದಾಗ ಎಷ್ಟೊಂದು ಸಹಾಯಕವಾಗಬಲ್ಲದು!

ನಮ್ಮ ಹೃದಯ ಒಡೆದು ಹೋಗುತ್ತಿದೆ ಎಂಬ ಭಾವನೆ ನಮಗೆ ಬಂದ ಪ್ರತಿಸಲ ನಮ್ಮ ಅಂತರಂಗದ ಆಳಾತಿ ಆಳದ ಬಾಗಿಲು ತೆರೆದುಕೊಳ್ಳುತ್ತದೆ, ಹೊಸ ಕ್ಷಿತಿಜಗಳನ್ನು, ಅಡಗಿದ್ದ ಹೆಚ್ಚು ಶ್ರೀಮಂತವಾದ ಸಂಪತ್ತುಗಳನ್ನು ಕೂಡ ತೆರೆದುತೋರಿಸುತ್ತದೆ, ಆ ಸಂಪತ್ತಿನ ಬಂಗಾರ ವರ್ಣದ ಒಳಹರಿವು ಅಳಿವಿನ ಅಂಚಿನಲ್ಲಿರುವ ಜೀವಿಗೆ ಮತ್ತೊಮ್ಮೆ ಹೆಚ್ಚು ಗಾಢವಾದ ಜೀವನವನ್ನು ತರುತ್ತದೆ.

ಮತ್ತು ಒಂದರ ನಂತರ ಒಂದರಂತೆ ಬರುವ ಈ ಅವರೋಹಣಗಳಿಂದ ನಾವು ನಿನ್ನನ್ನು ತೆರೆದುತೋರಿಸುವ ಪರದೆಯನ್ನು ತಲುಪುತ್ತೇವೆ, ಅದು ತೆರೆದುಕೊಂಡಾಗ ಇಡೀ ಸತ್ತೆಯಲ್ಲಿ ಒಳನುಗ್ಗಿ ಬರುವ ದೈವೀ ಜೀವನದ ಗಾಢತೆಯನ್ನು, ಅದನ್ನು ರಭಸದ ಪ್ರವಾಹದಿಂದ ಹೊರಸೂಸುವ ದೈವೀ ಪ್ರಕಾಶವನ್ನು, ಸತ್ತೆಯನ್ನು ಎಂದೆಂದಿಗೂ ಪರಿವರ್ತನೆಗೆ ಒಳಪಡಿಸುವ ದೈವೀಪ್ರೇಮದ ವೈಭವವನ್ನು ವರ್ಣನೆ ಮಾಡಿ ಹೇಳಲು ಹೇಗೆ ಸಾಧ್ಯವಾದೀತು!

**CWM, 2/21** **– ಶ್ರೀಮಾತೆ**

*

## ದೈವೀಪ್ರೇಮ ಅಧೋಲೋಕದ ಆಳಗಳನ್ನು ತಲುಪುತ್ತದೆ

ನನ್ನ ಮಗು ಇಲ್ಲಿ ಕೇಳು, ಇಂದು ನೀನು ಇಷ್ಟೊಂದು ಮುರಿದುಕೊಂಡು ಬಿದ್ದವನಾಗಿರುವಿ, ಎಷ್ಟೊಂದು ಪತನಗೊಂಡಿರುವಿ, ನಿನ್ನಲ್ಲಿ ಏನೂ ಉಳಿದಿಲ್ಲ, ನಿನ್ನ ದುಃಖವನ್ನು ಶಮನಗೊಳಿಸಲು ಹಾಗೂ ನಿನ್ನ ಗರ್ವವನ್ನು ಪೋಷಿಸಲು ಏನೂ ಇಲ್ಲ: ಹಿಂದೆಂದೂ ನೀನು ಇಷ್ಟೊಂದು ಶ್ರೇಷ್ಠನಾಗಿರಲಿಲ್ಲ! ಆಳಗಳಲ್ಲಿ ಜಾಗ್ರತ–ಗೊಳ್ಳುವವನು ಶಿಖರಗಳಿಗೆ ಎಷ್ಟೊಂದು ಹತ್ತಿರವಾಗಿರುತ್ತಾನೆ, ಏಕೆಂದರೆ ಅಧೋಲೋಕ ಹೆಚ್ಚು ಆಳವಾದಂತೆ ಎತ್ತರಗಳು ಹೆಚ್ಚು ಹೆಚ್ಚಾಗಿ ತಮ್ಮನ್ನು ತೆರೆದು ತೋರಿಸುವವು.

ಅಗ್ನಿ ಪರೀಕ್ಷೆ ಇಲ್ಲವೆ ದೋಷ ನಿನ್ನನ್ನು ಕೆಳಗೆಸೆದಿದೆ. ನೀನು ವೇದನೆಯ ಅಧೋಲೋಕದ ಆಳಗಳಲ್ಲಿ ಮುಳುಗಿ ಹೋಗಿದ್ದರೆ ದುಃಖಿಸಬೇಡ – ಏಕೆಂದರೆ ಅಲ್ಲಿಯೇ ನಿಜವಾಗಿ ದೈವೀಪ್ರೇಮ ಮತ್ತು ಪರಮೋಚ್ಚ ಆಶೀರ್ವಾದ ನಿನ್ನನ್ನು ತಲುಪಬಲ್ಲವು! ಏಕೆಂದರೆ ವೇದನೆಗಳನ್ನು ಪರಿಶುದ್ಧಗೊಳಿಸುವ ಮೂಸೆಯೊಳ–ಗಿಂದ ನೀನು ಹಾದು ಹೋಗಿರುವುದರಿಂದ ವೈಭವೋಪೇತ ಆರೋಹಣಗಳು ನಿನ್ನವಾಗಿವೆ.

ನೀನು ಕಾಡಿನಲ್ಲಿರುವಿ: ಆಗ ನಿಶ್ಚಲ ನೀರವತೆಯ ಧ್ವನಿಗಳನ್ನು ಕೇಳು, ಹೊಗಳುವ ಶಬ್ದಗಳು ಮತ್ತು ಬಾಹ್ಯ ಕರತಾಡನ ನಿನ್ನ ಕಿವಿಗಳಿಗೆ ಸಂತೋಷ ನೀಡಿವೆ. ಆದರೆ ನಿಶ್ಚಲ ನೀರವತೆಯ ಧ್ವನಿಗಳು ನಿನ್ನ ಆತ್ಮವನ್ನು ಸಂತೋಷ–ಪಡಿಸುತ್ತವೆ ಮತ್ತು ನಿನ್ನೊಳಗೆ ಆಳಗಳ ಪ್ರತಿಧ್ವನಿಗಳನ್ನು ಜಾಗ್ರತಗೊಳಿಸುತ್ತವೆ, ದೈವೀ ಸಾಮರಸ್ಯಗಳ ಮಂತ್ರಗಳನ್ನು ಪಠಿಸುತ್ತವೆ!

ನೀನು ರಾತ್ರಿಯ ಆಳಗಳಲ್ಲಿ ನಡೆಯುತ್ತಿರುವಿ, ಆಗ ರಾತ್ರಿಯ ಅಮೂಲ್ಯ ಸಂಪತ್ತುಗಳನ್ನು ಸಂಗ್ರಹಿಸು. ಪ್ರಜ್ವಲಿಸುವ ಸೂರ್ಯನ ಬೆಳಕಿನಲ್ಲಿ ಬುದ್ಧಿಮತ್ತೆಯ ಮಾರ್ಗಗಳು ಪ್ರಕಾಶಿತವಾಗಿರುತ್ತವೆ, ಆದರೆ ರಾತ್ರಿಯ ಶುಭ್ರ ಪ್ರಕಾಶಮಾನತೆಗಳಲ್ಲಿ ಪರಿಪೂರ್ಣತೆಯ ಮಾರ್ಗಗಳು ಹಾಗೂ ಆಧ್ಯಾತ್ಮಿಕ ಸಂಪತ್ತಿನ ರಹಸ್ಯ ಅವಿತುಕೊಂಡಿರುತ್ತವೆ, ನಿನ್ನಿಂದ ಎಲ್ಲವನ್ನೂ ಕಿತ್ತಿಕೊಳ್ಳಲಾಗುತ್ತಿದೆ, ಅದೇ ವಿಸ್ತಾರದತ್ತ ಕರೆದೊಯ್ಯುವ ಮಾರ್ಗ. ನಿನ್ನಲ್ಲಿ ಏನೇನೂ ಉಳಿಯದಂತಾದಾಗ ನಿನಗೆ ಎಲ್ಲವನ್ನೂ ಕೊಡಲಾಗುವುದು, ಅತ್ಯಂತ ಕೆಟ್ಟದ್ದಾದುದರಿಂದ ಅತ್ಯಂತ ಒಳ್ಳೆಯದು ಬರುತ್ತದೆ.

ಪೃಥ್ವಿಯಲ್ಲಿ ಬಿತ್ತಿದ ಪ್ರತಿಯೊಂದು ಕಾಳು ಸಹಸ್ರಾರು ಕಾಳುಗಳನ್ನು ಉತ್ಪಾದಿಸುತ್ತದೆ. ವೇದನೆಯ ಪ್ರತಿಯೊಂದು ರೆಕ್ಕೆಬಡಿತ ವೈಭವದತ್ತ ಹಾರಿ ಹೋಗುವುದಾಗಬಹುದು. ವಿರೋಧೀ ಶಕ್ತಿ ಮನುಷ್ಯನನ್ನು ಬಿಟ್ಟೂಬಿಡದೆ ಬೆಂಬತ್ತಿದಾಗ, ಅವನನ್ನು ನಾಶಮಾಡುವ ಪ್ರತಿಯೊಂದೂ ಕೇವಲ ಅವನನ್ನು ಹೆಚ್ಚು ಶ್ರೇಷ್ಠನನ್ನಾಗಿ ಮಾಡುತ್ತದೆ.

**CWM, 2/44–45** **– ಶ್ರೀಮಾತೆ**

*

## ಪ್ರೇಮದ ಅಭಿವ್ಯಕ್ತಿ ಎಂಬ ಔದಾರ್ಯ

ನಮ್ಮನ್ನೇ ಗಮನದಲ್ಲಿಟ್ಟುಕೊಂಡು ಪ್ರತಿಯೊಂದನ್ನೂ ಹೇಳುವ ಹವ್ಯಾಸವನ್ನು ಬಿಟ್ಟುಕೊಡುವುದರೊಂದಿಗೆ ಬೆಳೆಯುವಷ್ಟರ ಮಟ್ಟಿಗೆ ನಾವು ನಿಜವಾಗಿ ಪರಿಣಾಮಕಾರಿಯಾಗುವ ಔದಾರ್ಯವನ್ನು ಆಚರಿಸಬಲ್ಲೆವು, ಆ ಔದಾರ್ಯ ಪ್ರೇಮದೊಂದಿಗೆ ಕೂಡಿಕೊಂಡಿರುತ್ತದೆ.

ಅಲ್ಲದೆ ಎಲ್ಲ ಸದ್ಗುಣಗಳು ಸಮುದಾಯದಲ್ಲಿ ಭೇಟಿ ಮಾಡುವ ಒಂದು ಎತ್ತರ ಅಲ್ಲಿದೆ: ಪ್ರೇಮ, ಒಳ್ಳೆಯತನ, ಕರುಣೆ, ಸಹನಶೀಲತೆ, ಔದಾರ್ಯ ಇವೆಲ್ಲವೂ ಸಾರದಲ್ಲಿ ಒಂದೇ ಆಗಿರುತ್ತವೆ.

ಈ ದೃಷ್ಟಿಕೋನದಿಂದ ಔದಾರ್ಯವನ್ನು ವಾಸ್ತವಿಕ ಮತ್ತು ವ್ಯಾವಹಾರಿಕ ಬಾಹ್ಯ ಕ್ರಿಯೆ ಎಂದು ಪರಿಗಣಿಸಬಹುದು, ಆ ಕ್ರಿಯೆಗೆ ಪ್ರೇಮದ ಸದ್ಗುಣಗಳನ್ನು ಅನ್ವಯಿಸುವುದರ ಮೂಲಕ ಅದನ್ನು ನಿರ್ಧರಿಸಲಾಗಿರುತ್ತದೆ.

ಏಕೆಂದರೆ ಎಲ್ಲರಿಗೂ, ಯಾವಾಗಲೂ, ಹಂಚಿಕೊಡಬಹುದಾದ ಶಕ್ತಿಯೊಂ–ದಿದೆ. ಆದರೆ ಅದನ್ನು ಅತ್ಯಂತ ಅವ್ಯೆಯಕ್ತಿಕ ರೂಪದಲ್ಲಿ ಕೊಡಬೇಕಾಗುವುದು: ಇದು ತನ್ನೊಳಗೆ ಪ್ರಕಾಶ ಹಾಗೂ ಜೀವನಗಳನ್ನು ಒಳಗೊಂಡದ್ದು, ಎಂದರೆ ಬುದ್ಧಿಮತ್ತೆ, ಆರೋಗ್ಯ, ಅರಳಿಕೊಳ್ಳುವಿಕೆ ಇವುಗಳ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿರುತ್ತದೆ.

ಹೌದು, ಘನತೆವೆತ್ತ ಔದಾರ್ಯ ಅಲ್ಲಿದೆ, ಅದು ಸಂತೋಷಕರ ಹೃದಯ, ಪ್ರಶಾಂತ ಆತ್ಮ ಇವುಗಳಿಂದ ಮೇಲೆದ್ದು ಬರುತ್ತದೆ.

ಆಂತರಿಕ ಶಾಂತಿಯನ್ನು ಗೆದ್ದುಕೊಂಡ ಮನುಷ್ಯ, ಅವನು ಹೋದಲ್ಲೆಲ್ಲ, ವಿಮೋಚನೆ ನೀಡುವ ರಾಯಭಾರಿಯಾಗಿರುತ್ತಾನೆ, ಸಂತೋಷ ಹಾಗೂ ಭರವಸೆ ಇವುಗಳನ್ನು ಕೊಂಡೊಯ್ಯುತ್ತಾನೆ. ಬಡ ಹಾಗೂ ವೇದನೆಗೊಳಗಾದ ಮನುಕುಲಕ್ಕೆ ಇದಕ್ಕಿಂತಲೂ ಮಿಗಿಲಾಗಿ ಅವಶ್ಯವಾದದ್ದು ಏನಿದೆ?

ಹೌದು, ಕೆಲವು ಜನರಿರುತ್ತಾರೆ, ಅವರ ಯೋಚನೆಗಳು ಪ್ರೇಮದಿಂದ ತುಂಬಿಕೊಂಡಿರುತ್ತವೆ, ಅವರು ಪ್ರೇಮವನ್ನು ಹೊರಸೂಸುತ್ತಾರೆ, ಕೇವಲ ಅವರ ಸಾನ್ನಿಧ್ಯ ಬೇರೆ ಯಾವುದಕ್ಕಿಂತಲೂ ಹೆಚ್ಚು ಕ್ರಿಯಾಶೀಲವಾದ, ಹೆಚ್ಚು ನೈಜವಾದ ಔದಾರ್ಯವಾಗಿರುತ್ತದೆ. ಅವರು ಯಾವ ಶಬ್ದವನ್ನು ಉಚ್ಚರಿಸದಿದ್ದರೂ, ಯಾವ ಸಂಜ್ಞೆಯನ್ನು ಮಾಡದಿದ್ದರೂ ರೋಗಿಗಳು ರೋಗಮುಕ್ತರಾಗುತ್ತಾರೆ, ಪೀಡೆಗೊಳಗಾದವರು ಸಾಂತ್ವನ ಪಡೆಯುತ್ತಾರೆ, ಅಜ್ಞಾನಿಗಳು ಜ್ಞಾನೋದಯ ಪಡೆಯುತ್ತಾರೆ. ದುಷ್ಟರನ್ನು ಶಾಂತಗೊಳಿಸಲಾಗುತ್ತದೆ, ವೇದನೆಗೊಳಗಾದವರ ದುಃಖ ಶಮನ ಮಾಡಲಾಗುತ್ತದೆ ಮತ್ತು ಎಲ್ಲರೂ ಈ ಆಳವಾದ ಪರಿವರ್ತನೆಗೆ ಒಳಗಾಗುತ್ತಾರೆ, ಅದು ಅವರಿಗೆ ಹೊಸ ಕ್ಷಿತಿಜಗಳನ್ನು ತೆರೆದು ತೋರಿಸುತ್ತದೆ, ಅದು ಅವರಿಗೆ ಒಂದು ಹೆಜ್ಜೆ ಮುಂದಿರಿಸುವಂತೆ ಮಾಡುತ್ತದೆ, ಪ್ರಗತಿಯ ಅನಂತ ಪಥದಲ್ಲಿ ಅದು ನಿರ್ಧಾರಕ ಹೆಜ್ಜೆಯಾಗಿರುತ್ತದೆ.

ಪ್ರೇಮದ ಮೂಲಕ ತಮ್ಮನ್ನು ಎಲ್ಲರಿಗೆ ಕೊಟ್ಟುಕೊಳ್ಳುವ, ಎಲ್ಲರ ಸೇವಕರಾಗುವ ಈ ವ್ಯಕ್ತಿಗಳು ಪರಮೋಚ್ಚ ದೈವೀ ಔದಾರ್ಯದ ಜೀವಂತ ಸಂಕೇತಗಳಾಗಿರುತ್ತಾರೆ.

**CWM, 2/105–06** **– ಶ್ರೀಮಾತೆ**

*

# ಆಂತರಿಕ ಸಾಮೀಪ್ಯ

ದೈವೀ ಜೀವನದ ಬಗ್ಗೆ ಸತತ ಪ್ರಜ್ಞೆ ಹೊಂದಿದ ಜನರು ಬಹಳ ಅಪರೂಪಕ್ಕೆ ಕಂಡುಬರುತ್ತಾರೆ, ಆ ದೈವೀ ಜೀವನದ ಅದ್ಭುತ ಆಳಗಳನ್ನು ನಾವು ಸಿದ್ಧಿಸಿಕೊಳ್ಳದಿದ್ದಾಗಲೂ ಕೂಡ, ಅದಾಗಲೇ ಯೋಚನೆಯ ಪ್ರಾಂತದಲ್ಲಿ ಕಾಲ, ಸ್ಥಳಾವಕಾಶಗಳ ನಿಯಮಗಳಿಂದ ಪಾರಾಗುತ್ತೇವೆ.

ಯಾರೊಬ್ಬರನ್ನು ಕುರಿತು ಯೋಚಿಸುವುದೆಂದರೆ ಅವರ ಸಮೀಪ ಇರುವುದಾಗಿದೆ, ಮತ್ತು ಭೌತಿಕವಾಗಿ ಸಾವಿರಾರು ಕಿಲೋಮೀಟರ ದೂರದಿಂದ ಪ್ರತ್ಯೇಕಗೊಂಡ ಇಬ್ಬರಲ್ಲಿ ಒಬ್ಬರು ಇನ್ನೊಬ್ಬರನ್ನು ಕುರಿತು ಯೋಚಿಸಿದಾಗ ಅವರು ಒಂದು ನಿಜವಾದ ರೀತಿಯಲ್ಲಿ ಒಟ್ಟಿಗಿರುವುದನ್ನು ಕಂಡುಕೊಳ್ಳುತ್ತಾರೆ. ನಮ್ಮ ಯೋಚನೆಯನ್ನು ಸಾಕಷ್ಟು ಏಕಾಗ್ರಗೊಳಿಸಲು ಮತ್ತು ನಮ್ಮ ಯೋಚನೆಯಲ್ಲಿ ಸಾಕಷ್ಟು ಏಕಾಗ್ರತೆ ವಹಿಸಲು ಶಕ್ತರಾದರೆ ನಾವು ಯೋಚಿಸುವುದನ್ನು ಕುರಿತು ಸಮಗ್ರ ಅರಿವುಳ್ಳವರಾಗಬಹುದು, ಮತ್ತು ಮನುಷ್ಯನನ್ನು ಕುರಿತು ಯೋಚಿಸುತ್ತಿದ್ದರೆ ಕೆಲವೊಮ್ಮೆ ಅವನನ್ನು ನೋಡಬಹುದು ಇಲ್ಲವೆ ಅವನ ಧ್ವನಿಯನ್ನು ಕೇಳಬಹುದು – ಸಂದರ್ಭ ಯಾವುದೇ ಇರಲಿ ಅವನ ಯೋಚನೆಯನ್ನು ತಿಳಿದುಕೊಳ್ಳಬಹುದು.

ಹೀಗೆ ಇನ್ನು ಮುಂದೆ ಪ್ರತ್ಯೇಕತೆ ಅಸ್ತಿತ್ವದಲ್ಲಿರುವುದಿಲ್ಲ, ಅದು ಭ್ರಮಾತ್ಮಕವಾಗಿ ತೋರಿಬರುವಂತಹದು.

ಫ್ರಾನ್ಸದಲ್ಲಿ, ಅಮೇರಿಕಾದಲ್ಲಿ, ಪರ್ಶಿಯಾದಲ್ಲಿ ಇಲ್ಲವೆ ಚಾಯನಾದಲ್ಲಿ, ಹೀಗೆ ಯಾವ ದೇಶದಲ್ಲಿಯೇ ಆಗಲಿ ಇದ್ದವರಲ್ಲಿ ನಾವು ಯಾರನ್ನು ಕುರಿತು ಯೋಚಿಸುತ್ತೇವೆಯೋ, ಪ್ರೀತಿಸುತ್ತೇವೆಯೋ ಅವರಿಗೆ ನಾವು ಯಾವಾಗಲೂ ಹತ್ತಿರವಾಗಿರುತ್ತೇವೆ.

ವಿಶೇಷ ರೀತಿಯಲ್ಲಿ ಪ್ರಜ್ಞಾಪೂರ್ಣ ಹಾಗೂ ಕ್ರಿಯಾಶೀಲ ಯೋಚನೆಯ ಸಂಪರ್ಕಕ್ಕೆ ಬರುವುದನ್ನು ಬಯಸುವ ನಮ್ಮಂತಹರ ಎಲ್ಲ ಸಂದರ್ಭಗಳಲ್ಲಿ ಈ ವಾಸ್ತವತೆ ಇನ್ನೂ ಹೆಚ್ಚು ನಿಜವಾಗಿರುತ್ತದೆ, ಅದು ಅನಂತ ಪ್ರೇಮವನ್ನು ಇಟ್ಟುಕೊಳ್ಳುವ ಹಾಗೂ ಪ್ರಕಟಿಸುವ ಯೋಚನೆ, ಪ್ರೀತಿಸುವ ಹಾಗೂ ತಂದೆಯ–ದಂತಹ ಉತ್ಸುಕತೆಯೊಂದಿಗೆ ಇಡೀ ಪೃಥ್ವಿಯನ್ನು ಆವರಿಸುವ ಯೋಚನೆ ಆಗಿದ್ದು

ಅದಕ್ಕೆ ತಮ್ಮನ್ನು ಒಪ್ಪಿಸಿಕೊಂಡವರಿಗೆ ಸಹಾಯ ಮಾಡುವುದರಲ್ಲಿ ಸಂತೋಷ ಕಂಡುಕೊಳ್ಳುತ್ತದೆ. ಈ ಮಾನಸಿಕ ಸಂಸರ್ಗವನ್ನು ಅನುಭವಕ್ಕೆ ತಂದುಕೊಳ್ಳಿರಿ, ಆಗ ದುಃಖಕ್ಕೆ ಸ್ಥಾನವಿರುವುದಿಲ್ಲ ಎಂಬುದನ್ನು ಕಂಡುಕೊಳ್ಳುವಿರಿ.

**CWM, 2/114–15** **– ಶ್ರೀಮಾತೆ**

*

ನಿಮಗೆ ಏಕಾಕಿಯಾಗಿರುವ ಭಾವನೆ ಬರುತ್ತದೆ, ಏಕೆಂದರೆ ಪ್ರೀತಿಸಲ್ಪಡ–ಬೇಕಾದುದು ನಿಮ್ಮ ಆವಶ್ಯಕತೆಯಾಗಿರುತ್ತದೆ. ಯಾವುದೇ ಒತ್ತಾಯದ ಬೇಡಿಕೆ–ಯಿಲ್ಲದೆ ಪ್ರೀತಿಸುವ ಸಂತೋಷಕ್ಕಾಗಿಯೇ ಪ್ರೀತಿಸುವು (ಜಗತ್ತಿನಲ್ಲಿ ಅತ್ಯಂತ ಅದ್ಭುತವಾದ ಸಂತೋಷ) ದನ್ನು ಕಲಿತುಕೊಳ್ಳಿರಿ. ಮತ್ತು ನೀವು ಎಂದಿಗೂ ಏಕಾಕಿಯಾಗಿರುವ ಭಾವನೆ ತಂದುಕೊಳ್ಳುವುದಿಲ್ಲ.

**CWM, 14/141** **– ಶ್ರೀಮಾತೆ**

*

## ಪ್ರೇಮದ ರೀತಿ

ಭಗವಂತನ ಪ್ರೇಮ: ಸಮಗ್ರ ಜ್ಞಾನೋದಯದ ಕ್ಷಣದಲ್ಲಿ ನಾವು ಗ್ರಹಿಸಿದ ಎಲ್ಲ ವಿಷಯಗಳ ದೈವೀ ಸಾರದತ್ತ ಅಭೀಪ್ಸೆ, ನಂತರ ಈ ಸಾರಕ್ಕೆ ಈ ಸನಾತನ ನಿಯಮಕ್ಕೆ ಮುಡುಪಾಗಿರಿಸಿಕೊಳ್ಳುವಿಕೆ, ಮನುಷ್ಯ ತನ್ನ ಎಲ್ಲ ಕ್ರಿಯೆಗಳಲ್ಲಿ, ಪ್ರತಿಯೊಂದು ಕ್ಷಣ ಸಮಗ್ರ ಸ್ವ–ಅರ್ಪಣೆ ಮಾಡಿಕೊಳ್ಳುವಿಕೆ. ಸಂಪೂರ್ಣ ಶರಣಾಗತಿ: ಮನುಷ್ಯ ಈಗ ಕೇವಲ ಹೇಳಿದಂತೆ ಕೇಳುವ ಉಪಕರಣ, ಪರಮೋಚ್ಚ ಪ್ರಭುವಿನ ಎದುರಿನಲ್ಲಿ ವಿಶ್ವಾಸಾರ್ಹನಾದ ಸೇವಕ. ದೈವೀಪ್ರೇಮ ಎಷ್ಟೊಂದು ಸಂಪೂರ್ಣವಾಗಿರುತ್ತದೆಂದರೆ ಪರಿಪೂರ್ಣ ಭಗವಂತನಲ್ಲದ ಮತ್ತು ಅವನ ಮೇಲೆ ಪರಿಪೂರ್ಣ ಏಕಾಗ್ರತೆ ವಹಿಸಿಲ್ಲದ ಎಲ್ಲದರಿಂದ ಅದು ಕಳಚಿಕೊಳ್ಳುತ್ತದೆ. "ಅಲ್ಲದೆ ಅದಕ್ಕಿಂತ ಉಚ್ಚವಾದುದರತ್ತ ಮೇಲಕ್ಕೇರುವುದು ಅಸಾಧ್ಯವೇನಲ್ಲ, ಏಕೆಂದರೆ ಪ್ರೇಮವೇ ಸ್ವತಃ ಪ್ರೇಮಿಸುವವ ಹಾಗೂ ಪ್ರೇಮಪಾತ್ರ ಇವರ ನಡುವೆ ಒಂದು ಪರದೆಯಾಗಿರುತ್ತದೆ." ತಾದಾತ್ಮ್ಯ ಪಡೆಯುವಿಕೆ. ಮೂರನೆಯ ವಿಧಾನ – ಮನುಕುಲಕ್ಕಾಗಿ ಪ್ರೇಮ.

ಮನುಕುಲದ ಭವ್ಯ ವೇದನೆಯನ್ನು ಕುರಿತು ಗಾಢ ಗ್ರಹಿಕೆಯದಾದ ಸ್ಪಷ್ಟ ದರ್ಶನದ ಪರಿಣಾಮವೆಂದಾಗಿ ತನ್ನನ್ನು ಇಡಿಯಾಗಿ ಆ ವೇದನೆ ನಿಂತು ಹೋಗುವಂತೆ ಮಾಡಲು ಮುಡುಪಾಗಿರಿಕೊಳ್ಳುವುದಕ್ಕೆ ಮನುಷ್ಯನಲ್ಲಿ ನಿರ್ಧಾರ ಮೇಲೆದ್ದು ಬರುವುದು. ಇತರರಿಗೆ ಎಷ್ಟೇ ಅಲ್ಪ ಪ್ರಮಾಣದಲ್ಲಿಯೇ ಆಗಲಿ, ಸಹಾಯ ನೀಡುವುದಕ್ಕಾಗಿ ಮನುಷ್ಯ ತನ್ನ ಎಲ್ಲ ಯೋಚನೆಗಳನ್ನು, ಎಲ್ಲ ಚೈತನ್ಯಗಳನ್ನು, ಎಲ್ಲ ಚಟುವಟಿಕೆಗಳನ್ನು ಬಿಟ್ಟುಕೊಡುವ ಸ್ವ–ವಿಸ್ಮರಣೆ ಇರಬೇಕು.

"ನೋವಿನಿಂದ ಛಿದ್ರಗೊಂಡ ಜಗತ್ತಿನಲ್ಲಿ ನಿಮ್ಮ ಹೃದಯಗಳು ಕರುಣೆಯಿಂದ ಹೊರಹರಿದು ಮುಂದೆ ಸಾಗಿ ಹೋಗಬೇಕು, ಬೋಧಕರಾಗಬೇಕು, ಮತ್ತು ಅಜ್ಞಾನದ ಆಳಿಕೆ ನಡೆಯುತ್ತಿರುವ ಎಲ್ಲೆಡೆಯಲ್ಲಿ ದೀಪ ಬೆಳಗಿಸಬೇಕು." ಮನುಕುಲಕ್ಕೆ ಈ ಮುಡುಪಾಗಿರಿಸಿಕೊಳ್ಳುವಿಕೆ ನಾಲ್ಕು ಪ್ರಾಂತಗಳಲ್ಲಿ ಪ್ರಕಟ–ವಾಗುತ್ತದೆ; ಮನುಷ್ಯ ಇತರರಿಗೆ ನಾಲ್ಕು ರೀತಿಗಳಲ್ಲಿ ಕೊಡಬಹುದು: ಭೌತಿಕ ಕಾಣಿಕೆಗಳು. ಬೌದ್ಧಿಕ ಕಾಣಿಕೆಗಳು: ಜ್ಞಾನ. ಆಧ್ಯಾತ್ಮಿಕ ಕಾಣಿಕೆಗಳು: ಸಾಮರಸ್ಯ, ಸೌಂದರ್ಯ, ಲಯಬದ್ಧತೆ. ಆ ಮೂರು ಮಾರ್ಗಗಳನ್ನು ಅನುಸರಿಸಿದವರು, ಸನಾತನವಾದದ್ದರ ಬಗ್ಗೆ ಪ್ರಜ್ಞೆಯುಳ್ಳವರು, ತಮ್ಮೊಳಗೆ ಅಭಿವೃದ್ಧಿಯ ಎಲ್ಲ ವಿಧಾನಗಳನ್ನು ಸಮನ್ವಯಗೊಳಿಸಿಕೊಂಡವರು ಮಾತ್ರ ಕೊಡಬಹುದಾದ ಸಮಗ್ರ ಕಾಣಿಕೆ: ಉದಾಹರಣೆಯ ಕಾಣಿಕೆ. ಆ ಉದಾಹರಣೆ ಸ್ವ–ಪ್ರಜ್ಞೆಯುಳ್ಳದ್ದಲ್ಲ, ಅದನ್ನು ಮನುಷ್ಯ ಕೊಡುತ್ತಾನೆ, ಏಕೆಂದರೆ ಆ ಉದಾಹರಣೆ ಅವನಾಗಿರುತ್ತಾನೆ, ಸನಾತನ ದೈವೀ ಪ್ರಜ್ಞೆಯಲ್ಲಿ ಜೀವಿಸುತ್ತಿರುತ್ತಾನೆ.

**CWM, 2/130–31** **– ಶ್ರೀಮಾತೆ**

*

## ಪ್ರೇಮ ವಿಶ್ವಂಭರವಾದದದ್ದು ಹಾಗೂ ಸನಾತನವಾದದ್ದು

ಶ್ರೇಷ್ಠ ವಿಶ್ವಂಭರ ಶಕ್ತಿಗಳಲ್ಲಿ ಪ್ರೇಮವೂ ಒಂದು. ಅದು ತನ್ನ ಮೂಲಕವೇ ಅಸ್ತಿತ್ವದಲ್ಲಿರುತ್ತದೆ, ಅದರ ಚಲನೆ ಮುಕ್ತವಾಗಿರುತ್ತದೆ ಮತ್ತು ಯಾವ ವ್ಯಕ್ತಿಯಲ್ಲಿರುವುದೋ, ಯಾರ ಮೂಲಕ ಪ್ರಕಟವಾಗುವುದೋ ಅವರಿಂದ ಮುಕ್ತವಾಗಿರುತ್ತದೆ. ಅದು ಪ್ರಕಟಣೆಗೆ ಸಾಧ್ಯತೆ ಕಂಡುಕೊಂಡಲ್ಲಿ, ಗ್ರಹಿಕೆ ಇದ್ದಲ್ಲಿ, ಅದಕ್ಕೆ ಸ್ವಲ್ಪ ಮಟ್ಟಿಗಾದರೂ ತೆರೆದಿರಿಸುವಿಕೆ ಇದ್ದಲ್ಲಿ ಪ್ರಕಟವಾಗುತ್ತದೆ. ನೀವು

ಪ್ರೇಮ ಎಂದು ಕರೆಯುವುದು ಮತ್ತು ಅದು ವೈಯಕ್ತಿಕ ವಿಷಯ ಎಂದು ಯೋಚಿಸುವುದು ಈ ವಿಶ್ವಂಭರ ಶಕ್ತಿಯನ್ನು ಪ್ರಕಟಿಸುವುದಕ್ಕೆ ಅದನ್ನು ಗ್ರಹಿಸುವುದಕ್ಕೆ ಹಾಗೂ ಪ್ರಕಟಪಡಿಸುವುದಕ್ಕೆ ನಿಮ್ಮಲ್ಲಿರುವ ಕ್ಷಮತೆ ಮಾತ್ರವಾಗಿರುತ್ತದೆ. ಅದು ವಿಶ್ವಂಭರವಾಗಿರುವುದರಿಂದ ಅಪ್ರಜ್ಞೆಯ ಶಕ್ತಿಯಲ್ಲ, ಅದು ಪರಮೋಚ್ಚ ರೀತಿಯಲ್ಲಿ ಪ್ರಜ್ಞೆಯುಳ್ಳ ಸಾಮರ್ಥ್ಯವಾಗಿರುತ್ತದೆ. ಪ್ರಜ್ಞಾಪೂರ್ವಕವಾಗಿ ಅದು ಪೃಥ್ವಿಯ ಮೇಲೆ ತನ್ನ ಪ್ರಕಟಣೆಯನ್ನು ಹಾಗೂ ಸಿದ್ಧಿಯನ್ನು ಅರಸುತ್ತದೆ, ಪ್ರಜ್ಞಾಪೂರ್ವಕವಾಗಿ ಅದು ತನ್ನ ಉಪಕರಣಗಳನ್ನು ಆಯ್ದುಕೊಳ್ಳುತ್ತದೆ, ಉತ್ತರ ನೀಡುವ ಕ್ಷಮತೆಯಿದ್ದವರಲ್ಲಿ ಅದು ತನ್ನ ಕಂಪನಗಳನ್ನು ಜಾಗ್ರತಗೊಳಿಸುತ್ತದೆ, ಅದು ಅವರಲ್ಲಿ ತನ್ನ ಸನಾತನ ಗುರಿಯನ್ನು ಸಿದ್ಧಿಸಿಕೊಳ್ಳಲು ಪ್ರಯತ್ನಿಸುತ್ತದೆ, ಮತ್ತು ಉಪಕರಣ ಯೋಗ್ಯವಾಗಿಲ್ಲ ಎಂದು ಕಂಡುಬಂದರೆ ಅದನ್ನು ಬಿಟ್ಟುಕೊಡುತ್ತದೆ. ಮತ್ತು ಇತರ ಉಪಕರಣಗಳತ್ತ ದೃಷ್ಟಿ ಹಾಯಿಸುತ್ತದೆ. ಪುರುಷರು ಹಠಾತ್ತನೆ ಪ್ರೇಮದಲ್ಲಿ ಸಿಕ್ಕಿಹಾಕಿಕೊಂಡೆವು ಎಂದು ಯೋಚಿಸುತ್ತಾರೆ, ಅವರು ತಮ್ಮ ಪ್ರೇಮ ಬರುವುದನ್ನು, ಬೆಳೆಯುವುದನ್ನು ನೋಡುತ್ತಾರೆ ಮತ್ತು ನಂತರ ಅದು ಮಸುಕಾಗುತ್ತದೆ – ಇಲ್ಲವೆ ಅದು ಹೆಚ್ಚು ತಾಳಿಕೊಳ್ಳುವ ಚಲನೆಗೆ ವಿಶೇಷವಾದ ಯೋಗ್ಯತೆ ಹೊಂದಿದ ಕೆಲವರಲ್ಲಿ ಸ್ವಲ್ಪ ಹೆಚ್ಚಿನ ಕಾಲ ಉಳಿದುಕೊಳ್ಳಬಹುದು. ತಮ್ಮದೇ ವೈಯಕ್ತಿಕ ಅನುಭವ ಎಂಬ ಅರ್ಥದಲ್ಲಿ ಅದು ಒಂದು ಭ್ರಮೆಯಾಗಿತ್ತು. ಅದು ಎಂದೆಂದಿಗೂ ಉಳಿದುಕೊಳ್ಳುವ ವಿಶ್ವಂಭರ ಪ್ರೇಮದ ಸಾಗರದ ಒಂದು ಅಲೆಯಾಗಿತ್ತು.

ಪ್ರೇಮ ವಿಶ್ವಂಭರವಾದದ್ದು ಹಾಗೂ ಸನಾತನವಾದದ್ದು, ಅದು ಯಾವಾಗಲೂ ತನ್ನನ್ನು ಪ್ರಕಟಿಸುತ್ತದೆ, ಮತ್ತು ಸಾರದಲ್ಲಿ ಒಂದೇ ರೀತಿಯ–ದಾಗಿರುತ್ತದೆ. ಅದು ಒಂದು ದೈವೀ ಶಕ್ತಿ. ಅದರ ತೋರಿಕೆಯ ಕಾರ್ಯದಲ್ಲಿ ನಾವು ನೋಡುವ ವಿರೂಪಗೊಳಿಸುವಿಕೆಗಳು ಉಪಕರಣಗಳಿಗೆ ಸೇರಿರುತ್ತವೆ. ಪ್ರೇಮ ಕೇವಲ ಮಾನವ ಸತ್ತೆಗಳಲ್ಲಷ್ಟೇ ಪ್ರಕಟವಾಗುವುದಿಲ್ಲ, ಅದರ ಚಲನೆ ಸಸ್ಯದಲ್ಲಿ, ಬಹುಶಃ ಕಲ್ಲಿನಲ್ಲೂ ಕೂಡ ಇದೆ, ಪಶುಗಳಲ್ಲಿ ಅದರ ಸಾನ್ನಿಧ್ಯವನ್ನು ಶೋಧಿಸುವುದು ಸುಲಭವಾದದ್ದು. ಈ ಶ್ರೇಷ್ಠ ಹಾಗೂ ದೈವಿಕವಾದ ಸಾಮರ್ಥ್ಯದ ವಿರೂಪಗೊಳಿಸುವಿಕೆಗಳು ಮಬ್ಬುತನದಿಂದ ಅಜ್ಞಾನದಿಂದ ಹಾಗೂ ಸೀಮಿತ ಉಪಕರಣದ ಸ್ವಾರ್ಥದಿಂದ ಬರುತ್ತವೆ.

**CWM, 3/69–70** **– ಶ್ರೀಮಾತೆ**

*

## ಪ್ರೇಮಕ್ಕೆ ಆಸೆಗಳಿರುವುದಿಲ್ಲ

ಸನಾತನ ಶಕ್ತಿಯಾದ ದೈವೀಪ್ರೇಮಕ್ಕೆ ಯಾವ ಅಂಟಿಕೊಳ್ಳುವಿಕೆಯಾಗಲಿ, ಆಸೆಯಾಗಲಿ, ವಶವರ್ತಿಮಾಡಿಕೊಳ್ಳುವುದಕ್ಕೆ ಹಸಿವಾಗಲಿ ಇರುವುದಿಲ್ಲ. ಅದರ ಪರಿಶುದ್ಧ ಚಲನೆಯಲ್ಲಿ ಅದು ಆತ್ಮ ಪರಮಾತ್ಮನೊಡನೆ ಏಕತೆ ಪಡೆಯುವು–ದಾಗಿರುತ್ತದೆ, ಉಳಿದೆಲ್ಲ ವಿಷಯಗಳತ್ತ ಲಕ್ಷ್ಯಗೊಡದೆ ಪರಿಪೂರ್ಣ ಅರಸುವಿಕೆ–ಯಾಗಿರುತ್ತದೆ. ದೈವೀಪ್ರೇಮ ತನ್ನನ್ನು ಕೊಟ್ಟುಕೊಳ್ಳುತ್ತದೆ, ಪ್ರತಿಯಾಗಿ ಏನನ್ನೂ ಬೇಡುವುದಿಲ್ಲ. ಮಾನವ ಸತ್ತೆಗಳು ಅದನ್ನು ಏನನ್ನಾಗಿ ಮಾಡಿವೆ ಎಂಬುದನ್ನು ಕುರಿತು ಹೇಳುವ ಆವಶ್ಯಕತೆ ನಮಗಿಲ್ಲ, ಅವರು ಅದನ್ನು ಕುರೂಪದ್ದನ್ನಾಗಿ, ಅಸಹ್ಯ ಹುಟ್ಟಿಸುವ ವಿಷಯವನ್ನಾಗಿ ಮಾಡಿದ್ದಾರೆ. ಮತ್ತು ಹಾಗಿದ್ದಾಗ್ಯೂ ಮಾನವ ಸತ್ತೆಗಳಲ್ಲಿ ದೈವೀಪ್ರೇಮದ ಮೊದಲ ಸಂಪರ್ಕ ತನ್ನ ಪರಿಶುದ್ಧ ದ್ರವ್ಯದ ವಿಶಿಷ್ಟವಾದ ಏನೋ ಒಂದನ್ನು ಕೆಳಗಿಳಿಸಿ ತರುತ್ತದೆ; ಅವರು ಒಂದು ಕ್ಷಣಕಾಲ ತಮ್ಮನ್ನು ತಾವೇ ಮರೆತು ಕ್ಷಮತೆಯುಳ್ಳವರಾಗುತ್ತಾರೆ, ಒಂದು ಕ್ಷಣಕಾಲದ ಅದರ ದೈವೀ ಸ್ಪರ್ಶ ಸೊಗಸಾದದ್ದು ಹಾಗೂ ಸುಂದರವಾದದ್ದನ್ನು ಜಾಗ್ರತಗೊಳಿಸುತ್ತದೆ, ಭವ್ಯವಾದದ್ದನ್ನಾಗಿ ಮಾಡುತ್ತದೆ, ಆದರೆ ನಂತರ ಮಾನವ ಸ್ವಭಾವ ಮೇಲ್ಮೈಗೆ ಬರುತ್ತದೆ, ಅದರ ಅಶುದ್ಧ ಬೇಡಿಕೆಗಳಿಂದ ತುಂಬಿಕೊಂಡಿರುತ್ತದೆ, ಪ್ರತಿಯಾಗಿ ಏನನ್ನೋ ಕೇಳುತ್ತದೆ, ಅದು ಕೊಟ್ಟಿದ್ದಕ್ಕೆ ಬದಲಾಗಿ ಬೇರೊಂದನ್ನು ಬಯಸುತ್ತದೆ, ತನ್ನದೇ ನಿಮ್ನ ಮಟ್ಟದ ತೃಪ್ತಿಗಳಿಗಾಗಿ ಗಲಭೆ ಮಾಡುತ್ತದೆ, ದೈವಿಕವಾದದ್ದನ್ನು ವಿರೂಪಗೊಳಿಸುತ್ತದೆ, ಹೊಲಸು ಮಾಡುತ್ತದೆ.

**CWM, 3/70** – ಶ್ರೀಮಾತೆ

*

## ದೈವೀಪ್ರೇಮವನ್ನು ಪ್ರಕಟಿಸುವುದು

ದೈವೀಪ್ರೇಮವನ್ನು ಪ್ರಕಟಿಸಲು ನೀವು ದೈವೀಪ್ರೇಮವನ್ನು ಗ್ರಹಿಸಲು ಕ್ಷಮತೆಯುಳ್ಳವರಾಗಿರಬೇಕು, ಏಕೆಂದರೆ ತಮ್ಮ ಸ್ವಭಾವದಿಂದ ಅದರ ಸಹಜ ಚಲನೆಗೆ ತೆರೆದಿಟ್ಟುಕೊಂಡವರು ಮಾತ್ರ ಅದನ್ನು ಪ್ರಕಟಿಸಬಲ್ಲರು. ಅವರ ತೆರೆದಿರಿಸಿಕೊಳ್ಳುವಿಕೆ ಹೆಚ್ಚು ವಿಶಾಲವಾದದ್ದು ಹಾಗೂ ಹೆಚ್ಚು ಸ್ಪಷ್ಟವಾದದ್ದು ಆಗಿದ್ದರೆ ದೈವೀಪ್ರೇಮವನ್ನು ಅದರ ಮೂಲ ಪರಿಶುದ್ಧತೆಯೊಂದಿಗೆ ಹೆಚ್ಚಿನ ರೀತಿಯಲ್ಲಿ ಪ್ರಕಟಿಸುತ್ತಾರೆ. ಅದು ಹೆಚ್ಚಿನ ರೀತಿಯಲ್ಲಿ ನಿಮ್ನ ಮಾನವ

ಭಾವನೆಗಳೊಂದಿಗೆ ಮಿಶ್ರಣಕ್ಕೊಳಗಾದಂತೆ ವಿರೂಪಗೊಳ್ಳುವಿಕೆಯೂ ಕೂಡ ಹೆಚ್ಚಾಗುತ್ತದೆ. ದೈವೀಪ್ರೇಮದ ಸಾರಕ್ಕೆ ಹಾಗೂ ಅದರ ಸತ್ಯಕ್ಕೆ ತೆರೆದಿರಿಸಿಕೊಳ್ಳದೇ ಇದ್ದವನು ಭಗವಂತನನ್ನು ಸಮೀಪಿಸಲಾರನು. ಜ್ಞಾನದ ಮೂಲಕ ಅರಸುವವರು ಒಂದು ಹಂತಕ್ಕೆ ಬಂದು ನಿಲ್ಲುತ್ತಾರೆ, ಅದರಾಚೆಗೆ ಅವರು ಇನ್ನೂ ದೂರ ಸಾಗಿ ಹೋಗಬೇಕಾದರೆ, ಅವರು ಅದೇ ಕಾಲಕ್ಕೆ ಪ್ರೇಮದಲ್ಲಿ ಪ್ರವೇಶಿಸುವ ನಿರ್ಬಂಧಕ್ಕೊಳಗಾಗುತ್ತಾರೆ ಮತ್ತು ಅವೆರಡೂ ಒಂದೇ ಆಗಿವೆ ಎಂಬ ಭಾವನೆ ತಂದುಕೊಳ್ಳುತ್ತಾರೆ, ಜ್ಞಾನ ದೈವೀ ಏಕತೆಯ ಪ್ರಕಾಶ, ಪ್ರೇಮ ಜ್ಞಾನದ ಹೃದಯವೇ ಆಗಿದೆ. ...

ಇಲ್ಲಿ ಭಗವಂತನನ್ನು ತೆರೆದು ತೋರಿಸಲು ಮತ್ತು ಪಾರ್ಥಿವ ಜೀವನವನ್ನು ಪರಿವರ್ತನೆಗೆ ಒಳಪಡಿಸಲು ಈ ಜಗತ್ತಿನ ಮೇಲೆ ಬಂದವರಲ್ಲಿ ಕೆಲವರಿದ್ದಾರೆ, ಅವರು ದೈವೀಪ್ರೇಮವನ್ನು ಹೆಚ್ಚಿನ ಪೂರ್ಣತೆಯೊಂದಿಗೆ ಪ್ರಕಟಿಸಿದ್ದರು. ಕೆಲವರಲ್ಲಿ ಪ್ರಕಟಣೆಯ ಪರಿಶುದ್ಧತೆ ಎಷ್ಟೊಂದು ಶ್ರೇಷ್ಠವಾಗಿದೆ ಎಂದರೆ ಅವರನ್ನು ಇಡೀ ಮನುಕುಲ ತಪ್ಪಾಗಿ ತಿಳಿದುಕೊಂಡಿತ್ತು ಮತ್ತು ಅಲ್ಲಿ ದೈವೀಪ್ರೇಮ ಇದ್ದಾಗಲೂ ಕೂಡ ಅವರು ಕಠಿಣ ಹೃದಯದವರು, ಪ್ರೀತಿಸದವರು ಎಂದು ಅವರನ್ನು ದೂಷಿಸಲಾಗಿತ್ತು.

ಆದರೆ ಅದು ಅವರಲ್ಲಿ ದೈವಿಕವಾದದ್ದು, ಅದರ ದ್ರವ್ಯದಲ್ಲಿರುವಂತೆ ರೂಪದಲ್ಲಿ ಮಾನವನದಾಗಿರುವುದಿಲ್ಲ. ಪುರುಷ ಪ್ರೇಮ ಕುರಿತು ಮಾತನಾಡಿದಾಗ ಅವನು ಅದನ್ನು ಭಾವೋನ್ಮಾದದ, ಮನಕರಗುವ ದೌರ್ಬಲ್ಯಗಳೊಂದಿಗೆ ಜೋಡಿಸುತ್ತಾನೆ. ಆದರೆ ಸ್ವ–ವಿಸ್ಮರಣೆಯ ದೈವೀ ಗಾಢತೆ, ತನ್ನನ್ನು ಇಡಿಯಾಗಿ ಹೊರಚೆಲ್ಲಿಕೊಡುವ ಕ್ಷಮತೆ, ಯಾವುದೇ ಕಟ್ಟುನಿಟ್ಟಿನ್ನಿರಿಸದೆ, ಕಾದಿರಿಸಿಕೊಳ್ಳದೆ ಇರುವುದು, ಕಾಣಿಕೆಯ ರೂಪದಲ್ಲಿ ಕೊಡುವುದು, ಪ್ರತಿಯಾಗಿ ಏನನ್ನೂ ಬೇಡದೆ ಇರುವುದು ಇದೆಲ್ಲ ಮಾನವ ಸತ್ತೆಗಳಿಗೆ ಅತಿ ಸ್ವಲ್ಪ ತಿಳಿದಿರುತ್ತದೆ. ಮತ್ತು ಅದು ಅಲ್ಲಿ ದುರ್ಬಲ ಭಾವೋನ್ಮಾದದೊಂದಿಗೆ ಮಿಶ್ರಣಗೊಳ್ಳದೆ ಇದ್ದಾಗ ಅದನ್ನು ಅವರು ಕಠಿಣ ಹೃದಯದ್ದು, ಭಾವಶೂನ್ಯವಾದದ್ದು ಎಂದು ಕಂಡುಕೊಳ್ಳುತ್ತಾರೆ. ಅವರು ಅದರಲ್ಲಿರುವ ಅತ್ಯುಚ್ಚ ಹಾಗೂ ಅತಿ ಗಾಢವಾದ ಪ್ರೇಮದ ಸಾಮರ್ಥ್ಯವನ್ನು ಗುರುತಿಸಲಾರರು.

**CWM, 3/71** **– ಶ್ರೀಮಾತೆ**

*

## ಅವಶ್ಯವಾದದ್ದು ಪರಿವರ್ತನೆ, ಆದರೆ ದಮನವಲ್ಲ

ಭೌತಿಕ ಪೃಥ್ವಿಯ ಮೇಲೆ ಪ್ರಕಟವಾಗುವ ದೈವೀಪ್ರೇಮವನ್ನು ಕುರಿತು ನಾನು ಮಾತನಾಡುತ್ತಿದ್ದೇನೆ, ಆದರೆ ಅದು ಅವತಾರ ತಾಳಬೇಕಾದರೆ ಮಾನವರ ವಿರೂಪಗೊಳಿಸುವಿಕೆಗಳಿಗೆ ಒಳಗಾಗದೆ ಪರಿಶುದ್ಧವಾಗಿರಬೇಕು. ಎಲ್ಲ ಪ್ರಕಟಣೆ–ಯಲ್ಲಿ ಇರುವ ಹಾಗೆ ಪ್ರಾಣಿಕ ಅತ್ಯಗತ್ಯದ್ದಾದ ಕಾರ್ಯಸಾಧಕ–ಕಾರಣ (agent). ಆದರೆ ಯಾವಾಗಲೂ ಸಂಭವಿಸಿದ ಹಾಗೆ, ವಿರೋಧೀ ಸಾಮರ್ಥ್ಯಗಳು ಈ ಅತ್ಯಂತ ಹೆಚ್ಚಿನ ಮೌಲ್ಯವಿರುವ ವಿಷಯದ ಮೇಲೆ ತಮ್ಮ ಹಿಡಿತವನ್ನು ಸಾಧಿಸಿವೆ. ಪ್ರಾಣಿಕದ ಚೈತನ್ಯ ಮಬ್ಬಾದ, ಸೂಕ್ಷ್ಮಗ್ರಾಹಿಯಲ್ಲದ ಭೌತದ್ರವ್ಯದಲ್ಲಿ ಪ್ರವೇಶಿಸುತ್ತದೆ ಮತ್ತು ಅದನ್ನು ಸಂವೇದನಾಶೀಲವಾದದ್ದನ್ನಾಗಿ ಹಾಗೂ ಜೀವಂತವಾದದ್ದನ್ನಾಗಿ ಮಾಡುತ್ತದೆ. ಆದರೆ ವಿರೋಧೀ ಶಕ್ತಿಗಳು ಅದನ್ನು ವಿರೂಪಗೊಳಿಸಿವೆ; ಅವು ಅದನ್ನು ಹಿಂಸೆಯ, ಸ್ವಾರ್ಥದ, ಆಸೆಯ ಮತ್ತು ಪ್ರತಿಯೊಂದು ಬಗೆಯ ಕುರೂಪದ ಕ್ಷೇತ್ರವನ್ನಾಗಿ ಮಾಡಿವೆ, ಮತ್ತು ದೈವೀ ಕಾರ್ಯದಲ್ಲಿ ಭಾಗವಹಿಸದಂತೆ ತಡೆಹಿಡಿದಿವೆ. ಕೈಕೊಳ್ಳಬೇಕಾದ ಒಂದು ಕಾರ್ಯವೆಂದರೆ ಅದನ್ನು ಬದಲು ಮಾಡಬೇಕು. ಏಕೆಂದರೆ ಅದಿಲ್ಲದೆ ಎಲ್ಲಿಯೂ ಯಾವ ಗಾಢತೆ ಇರಲು ಸಾಧ್ಯವಾಗುವುದಿಲ್ಲ. ಪ್ರಾಣಿಕ ಅದರ ಸ್ವಭಾವದಲ್ಲಿ ನಮ್ಮಲ್ಲಿ ತನ್ನನ್ನು ಕೊಟ್ಟುಬಿಡುವಂತಹದಾಗಿದೆ. ಅದು ಯಾವಾಗಲೂ ಪ್ರಚೋದನೆಯನ್ನು ಮತ್ತು ತೆಗೆದುಕೊಳ್ಳಲು ಬಲವನ್ನು ಹೊಂದಿದೆ ಎಂಬ ಕಾರಣದಿಂದಾಗಿ ಅದು ತನ್ನನ್ನು ಗರಿಷ್ಠ ಮಿತಿಯಲ್ಲಿ ಕೊಟ್ಟುಬಿಡುವ ಕ್ಷಮತೆಯನ್ನೂ ಹೊಂದಿದೆ. ಹೇಗೆ ವಶಪಡಿಸಿಕೊಳ್ಳಬೇಕು ಎಂಬುದನ್ನು ಅದು ತಿಳಿದಿದೆ ಎಂಬ ಕಾರಣಕ್ಕಾಗಿ ಅದು ತನ್ನನ್ನು ಯಾವ ಕಾದಿರಿಸಿಕೊಳ್ಳುವಿಕೆ ಇಲ್ಲದೆ ಹೇಗೆ ಬಿಟ್ಟುಕೊಡಬೇಕು ಎಂಬುದನ್ನು ತಿಳಿದಿದೆ. ನಿಜವಾದ ಪ್ರಾಣಿಕ ಚಲನೆ ಅತ್ಯಂತ ಸುಂದರವಾದ ಹಾಗೂ ಭವ್ಯವಾದ ಚಲನೆಗಳಲ್ಲಿ ಒಂದು ಚಲನೆ; ಆದರೆ ಅದನ್ನು ತಿರುಚಲಾಗಿದೆ ಮತ್ತು ಅತ್ಯಂತ ಕುರೂಪದ್ದು, ಅತ್ಯಂತ ವಿರೂಪಗೊಂಡದ್ದು, ಅತ್ಯಂತ ಅಸಹ್ಯವಾದದ್ದು ಆಗುವಂತೆ ಅದಕ್ಕೆ ತಿರುವು ಕೊಡಲಾಗಿದೆ. ಪ್ರೇಮ ಕುರಿತು ಇರುವ ಮಾನವರ ಕತೆಗಳಲ್ಲಿ ಪರಿಶುದ್ಧ ಪ್ರೇಮ ಅಣು ಮಾತ್ರದಷ್ಟಾದರೂ ಪ್ರವೇಶಿಸಿದಾಗ ಮತ್ತು ಬಹಳಷ್ಟು ವಿರೂಪಗೊಳ್ಳದೆ ಪ್ರಕಟವಾಗಲು ಅದಕ್ಕೆ ಅನುವು ಮಾಡಿಕೊಟ್ಟಾಗ, ನಾವು ನಿಜವಾದ ಹಾಗೂ ಸುಂದರವಾದ ವಿಷಯವನ್ನು ಕಂಡುಕೊಳ್ಳುತ್ತೇವೆ. ಆ ಚಲನೆ ಉಳಿದುಕೊಳ್ಳದೆ ಹೋದರೆ ಅದಕ್ಕೆ ಕಾರಣ ಅದು ತನ್ನದೇ ಗುರಿ ಹಾಗೂ

ಅರಸುವಿಕೆಯ ಬಗ್ಗೆ ಅರಿವುಳ್ಳದ್ದಾಗಿರುವುದಿಲ್ಲ. ಅದು ಅರಸುತ್ತಿರುವುದು ಒಂದು ಸತ್ತೆ ಇನ್ನೊಂದು ಸತ್ತೆಯೊಡನೆ ಏಕತೆ ಪಡೆಯುವುದಲ್ಲ, ಆದರೆ ಎಲ್ಲ ಸತ್ತೆಗಳು ಭಗವಂತನಲ್ಲಿ ಏಕತೆ ಪಡೆಯುವುದಾಗಿದೆ ಎಂಬ ಜ್ಞಾನ ಅದಕ್ಕಿರುವುದಿಲ್ಲ.

**CWM, 3/73** **– ಶ್ರೀಮಾತೆ**

*

## ದೈವೀಪ್ರೇಮದ ಶ್ರೇಷ್ಠ ಯಜ್ಞಾಹುತಿ

ದೈವೀಪ್ರೇಮ ಸನಾತನ ದೈವೀ ಪ್ರಜ್ಞೆಯ ಪರಮೋಚ್ಚ ಶಕ್ತಿ, ಅದನ್ನು ಆ ಶಕ್ತಿ ಮಬ್ಬಾದ, ಅಂಧಕಾರದಲ್ಲಿದ್ದ ಜಗತ್ತಿನತ್ತ ಕೆಳಗೆ ಕಳಿಸಿಕೊಟ್ಟಿತು, ಅದರಿಂದಾಗಿ ಆ ಜಗತ್ತನ್ನು ಹಾಗೂ ಅದರ ಸತ್ತೆಗಳನ್ನು ಭಗವಂತನತ್ತ ಮರಳಿ ತರುವಂತಾಗುತ್ತಿತ್ತು. ಭೌತಿಕ ಜಗತ್ತು ಅದರ ಅಂಧಕಾರದಲ್ಲಿ ಭಗವಂತನನ್ನು ಮರೆತುಬಿಟ್ಟಿತು. ದೈವೀಪ್ರೇಮ ಅಂಧಕಾರದಲ್ಲಿ ಬಂದಿತು ಮತ್ತು ನಿದ್ರೆಯಲ್ಲಿದ್ದ ಎಲ್ಲವನ್ನೂ ಎಚ್ಚರಿಸಿತು, ಮುದ್ರೆ ಹಾಕಿಸಿಕೊಂಡ ರೀತಿಯಲ್ಲಿದ್ದ ಕಿವಿಗಳಲ್ಲಿ ಪಿಸುಗುಟ್ಟಿ ಅವುಗಳನ್ನು ತೆರೆದಿರಿಸುತ್ತ "ಎಚ್ಚರಗೊಳ್ಳುವುದಕ್ಕೆ, ಜೀವಿಸುವುದಕ್ಕೆ ಯೋಗ್ಯವಾದ ಏನೋ ಒಂದಿದೆ, ಅದು ದೈವೀಪ್ರೇಮ" ಎಂದು ಹೇಳಿತು. ದೈವೀಪ್ರೇಮಕ್ಕೆ ಎಚ್ಚತ್ತುಕೊಳ್ಳುವುದರೊಂದಿಗೆ ಭಗವಂತನತ್ತ ಮರಳಿ ಬರುವ ಸಾಧ್ಯತೆಯೊಂದು ಜಗತ್ತಿನಲ್ಲಿ ಪ್ರವೇಶಿಸಿತು. ಭಗವಂತನತ್ತ ಇರುವ ಪ್ರೇಮದ ಮೂಲಕ ಸೃಷ್ಟಿ ಮೇಲ್ಗಡೆಗೆ ಚಲಿಸುತ್ತದೆ, ಮತ್ತು ಉತ್ತರ ನೀಡುವ ರೀತಿಯಲ್ಲಿ ದೈವೀಪ್ರೇಮ ಹಾಗೂ ದೈವೀ ಕೃಪೆ ಕೆಳಗಡೆ ವಾಲಿಕೊಳ್ಳುತ್ತವೆ. ದೈವೀಪ್ರೇಮ ಅದರ ಪರಿಶುದ್ಧ ಸೌಂದರ್ಯದಲ್ಲಿ ಅಸ್ತಿತ್ವದಲ್ಲಿರಲಾರದು, ಅದು ತನ್ನ ಸಹಜ ಸಾಮರ್ಥ್ಯವನ್ನು, ಮತ್ತು ಗಾಢ ಸಂತೋಷವನ್ನು ಧರಿಸಿಕೊಂಡಿರಲಾರದು, ಅದಕ್ಕಾಗಿ ಪರಸ್ಪರರಲ್ಲಿ ವಿನಿಮಯದ ಆವಶ್ಯಕತೆ ಇರುತ್ತದೆ, ಪೃಥ್ವಿಯ ಮತ್ತು ಪರಮೋಚ್ಚನ ನಡುವೆ, ಭಗವಂತನಿಂದ ಬರುವ ಈ ದೈವೀಪ್ರೇಮದ ಚಲನೆ ಮತ್ತು ಸೃಷ್ಟಿಯಿಂದ ಭಗವಂತನೆಡೆಗಿರುವ ಚಲನೆ ಇವುಗಳಲ್ಲಿ ಬೆಸುಗೆ ಉಂಟಾಗಬೇಕಾಗುವುದು. ಭಗವಂತನ ದೈವೀಪ್ರೇಮ ಕೆಳಗಿಳಿದು ಬಂದು ಪ್ರಾಣ ಎಚ್ಚತ್ತುಕೊಳ್ಳುವಂತೆ ಮಾಡುವವರೆಗೆ ಈ ಜಗತ್ತು ಮೃತ ದ್ರವ್ಯವಾಗಿತ್ತು. ಎಂದೆಂದಿನಿಂದ ಈ ಸೃಷ್ಟಿ ಪ್ರಾಣದ ದೈವೀ ಮೂಲವನ್ನು ಅರಸುತ್ತ ಹೊರಟಿದೆ, ಆದರೆ ಅದರ ಶೋಧದಲ್ಲಿ ಪ್ರತಿಯೊಂದು ಬಗೆಯ ತಪ್ಪಾದ ತಿರುವು, ತಪ್ಪಾದ ಮಾರ್ಗಗಳನ್ನು ಅನುಸರಿಸಿದೆ;

ಅಂಧಕಾರದಲ್ಲಿ ಅದು ಅತ್ತ ಇತ್ತ ಅಲೆದಾಡಿದೆ. ಈ ಸೃಷ್ಟಿಯ ಮೊತ್ತ ತನ್ನ ಮಾರ್ಗದಲ್ಲಿ ಅಪರಿಚಿತವಾದದ್ದನ್ನು ಅನುಸರಿಸುತ್ತಿದೆ, ಆದರೆ ಅದು ಅರಸಿದ್ದರ ಬಗ್ಗೆ ಅಜ್ಞಾನದಿಂದಿದೆ. ಅದು ತಲುಪಿದ ಗರಿಷ್ಠ ಮಿತಿ ಎಂದರೆ ಮಾನವ ಸತ್ತೆಗಳಿಗೆ ಯಾವುದು ಅತ್ಯುಚ್ಚ ರೂಪದಲ್ಲಿ ಅತ್ಯಂತ ಪರಿಶುದ್ಧ, ಅತ್ಯಂತ ನಿರಪೇಕ್ಷ ಬಗೆಯ–ದಾಗಿದೆಯೋ, ಮಗುವಿನ ಬಗ್ಗೆ ಮಾತೆಯದಿರುವ ಪ್ರೇಮ ಎಂತಹದಿರುವುದೋ ಅದಾಗಿದೆ. ಪ್ರೇಮದ ಈ ಮಾನವ ಚಲನೆ, ಇನ್ನೂ ಕಂಡಿರದ ಬೇರೆ ಏನೋ ಒಂದನ್ನು ರಹಸ್ಯವಾಗಿ ಅರಸುತ್ತಿದೆ, ಅದನ್ನು ಎಲ್ಲಿ ಕಂಡುಕೊಳ್ಳಬೇಕು ಎಂಬುದು ಅದಕ್ಕೆ ತಿಳಿದಿಲ್ಲ, ಅದೇನಿರುವುದು ಎಂಬುದನ್ನೂ ಕೂಡ ಅದು ಅರಿತಿಲ್ಲ. ಪರಿಶುದ್ಧವಾದ ಹಾಗೂ ಮಾನವ ರೂಪದಲ್ಲಿ ಪ್ರಕಟವಾದ ಎಲ್ಲದರಿಂದ ಸ್ವತಂತ್ರವಾದ ದೈವೀಪ್ರೇಮಕ್ಕೆ ಮನುಷ್ಯನ ಪ್ರಜ್ಞೆ ಎಚ್ಚತ್ತುಕೊಂಡಾಗ ಅವನು ತನ್ನ ಹೃದಯ ಎಲ್ಲ ಕಾಲದಲ್ಲಿ ಏನನ್ನು ಬಯಸುತ್ತಿತ್ತು ಎಂಬುದನ್ನು ತಿಳಿದುಕೊಳ್ಳುತ್ತಾನೆ. ಅದು ಆತ್ಮದ ಅಭೀಪ್ಸೆ ಪ್ರಾರಂಭಗೊಳ್ಳುವಿಕೆ, ಅದು ಭಗವಂತನೊಡನೆ ಏಕತೆ ಪಡೆಯುವುದಕ್ಕಾಗಿ ಪ್ರಜ್ಞೆಯ ಎಚ್ಚತ್ತುಕೊಳ್ಳುವಿಕೆಯನ್ನು ಹಾಗೂ ಅದರ ಹಾತೊರೆತವನ್ನು ತರುತ್ತದೆ.

**CWM, 3/74** **– ಶ್ರೀಮಾತೆ**

*

ಜಗತ್ತಿನಲ್ಲಿ ಭಗವಂತನ ಪ್ರೇಮದ ಪ್ರಕಟಣೆ ಅತ್ಯಂತ ಶ್ರೇಷ್ಠ ಯಜ್ಞಾಹುತಿ–ಯಾಗಿತ್ತು, ಪರಮೋಚ್ಚ ಸ್ವ–ಅರ್ಪಣೆಯಾಗಿತ್ತು. ಪರಿಪೂರ್ಣ ದೈವೀ ಪ್ರಜ್ಞೆ ಭೌತದ್ರವ್ಯದ ಅಪ್ರಜ್ಞೆಯಲ್ಲಿ ವಿಲೀನಗೊಳ್ಳುವುದನ್ನು, ಅಪ್ರಜ್ಞೆಯನ್ನು ಹೀರಿಕೊಳ್ಳು–ವುದನ್ನು ಒಪ್ಪಿಕೊಂಡಿತು, ಅದರಿಂದಾಗಿ ಆ ಪ್ರಜ್ಞೆಯ ಮಬ್ಬಾದ ಆಳಗಳಲ್ಲಿ ಪ್ರಜ್ಞೆ ಎಚ್ಚತ್ತುಕೊಳ್ಳುವಂತಾಯಿತು, ಮತ್ತು ಸ್ವಲ್ಪ, ಸ್ವಲ್ಪವಾಗಿ ದೈವೀ ಸಾಮರ್ಥ್ಯ ಅದರಲ್ಲಿ ಎದ್ದು ಬರುವಂತಾಯಿತು ಮತ್ತು ಪ್ರಕಟವಾದ ಈ ವಿಶ್ವ ದೈವೀ ಪ್ರಜ್ಞೆ ಹಾಗೂ ದೈವೀಪ್ರೇಮ ಇವುಗಳ ಅಭಿವ್ಯಕ್ತಿಯಾಗುವಂತಾಯಿತು. ಅದರ ಪರಮೋಚ್ಚ ದೈವತ್ವ, ಅನಂತ ಜ್ಞಾನ, ಪರಿಪೂರ್ಣ ಪ್ರಜ್ಞೆ ಇವುಗಳ ಸ್ಥಿತಿಯಲ್ಲಿ ಕೊರತೆ ಕಂಡುಕೊಂಡು ಅಪ್ರಜ್ಞೆಯೊಡನೆ ಏಕಗೊಳ್ಳುವುದು, ಅಜ್ಞಾನ ಹಾಗೂ ಅಂಧಕಾರಗಳಿರುವ ಜಗತ್ತಿನಲ್ಲಿ ವಾಸಿಸುವುದು ಇದೆಲ್ಲದಕ್ಕೆ ಕಾರಣ ಪರಮೋಚ್ಚ ಪ್ರೇಮವಾಗಿತ್ತು. ಆದಾಗ್ಯೂ ಬಹುಶಃ ಯಾರೂ ಅದನ್ನು ಪ್ರೇಮವೆಂದು

ಕರೆಯಲಾರರು, ಏಕೆಂದರೆ ಅದು ಮೇಲ್ಮೈಯಲ್ಲಿರುವ ಭಾವುಕತೆಯ ಹೊದಿಕೆಯನ್ನು ಹೊಂದಿರುವುದಿಲ್ಲ, ಅದು ಕೈಕೊಂಡದ್ದಕ್ಕೆ ಪ್ರತಿಯಾಗಿ ವಿನಿಮಯ ರೂಪದಲ್ಲಿ ಏನನ್ನೂ ಒತ್ತಾಯದಿಂದ ಬೇಡುವುದಿಲ್ಲ, ಅದರ ತ್ಯಾಗದ ಯಾವ ಪ್ರದರ್ಶನವೂ ಇರುವುದಿಲ್ಲ. ಜಗತ್ತಿನಲ್ಲಿರುವ ಪ್ರೇಮದ ಶಕ್ತಿ ಈ ದೈವೀ ಚಲನೆಯನ್ನು ಅದರ ಪರಿಶುದ್ಧತೆಯಲ್ಲಿ ಸ್ವೀಕರಿಸಿ ಅದನ್ನು ಅಭಿವ್ಯಕ್ತಗೊಳಿಸಲು ಕ್ಷಮತೆ ಇರುವ ಪ್ರಜ್ಞೆಯಿರುವವರನ್ನು ಪ್ರಯತ್ನಪಟ್ಟು ಅರಸುತ್ತಿದೆ. ಪ್ರೇಮದತ್ತ ಹೊರಳಿರುವ ಎಲ್ಲ ಸತ್ತೆಗಳ ಕುಲ, ಈ ಪ್ರತಿರೋಧಿಸಲಾಗದ ಮುಂದೂಡಿಕೆ, ಜಗತ್ತಿನ ಹೃದಯದಲ್ಲಿ ಹಾಗೂ ಎಲ್ಲರ ಹೃದಯಗಳಲ್ಲಿ ಹಾತೊರೆತ ಹಾಗೂ ಅರಸುವಿಕೆ ಮಾನವನ ಹಿಂದಿರುವ ಇದೆಲ್ಲ ದೈವೀಪ್ರೇಮದ ಪ್ರಚೋದನೆಯಾಗಿದೆ. ಅದು, ಯಾವಾಗಲೂ, ಲಕ್ಷಾನುಗಟ್ಟಲೆ ಇರುವ ಉಪಕರಣಗಳನ್ನು ಸ್ಪರ್ಶಿಸುತ್ತದೆ, ಯಾವಾಗಲೂ ಪ್ರಯತ್ನಿಸುತ್ತದೆ, ಯಾವಾಗಲೂ ವಿಫಲವಾಗುತ್ತದೆ. ಆದರೆ ಸತತ ಉಂಟಾಗುವ ಈ ಸ್ಪರ್ಶ ಈ ಉಪಕರಣಗಳನ್ನು ತಯಾರು ಮಾಡುತ್ತದೆ ಮತ್ತು ಹಠಾತ್ತನೆ ಒಂದು ದಿನ ಅವರಲ್ಲಿ ಸ್ವ–ಅರ್ಪಣೆಯ ಕ್ಷಮತೆ ಮತ್ತು ಪ್ರೀತಿಸುವ ಕ್ಷಮತೆ ಎಚ್ಚತ್ತುಕೊಳ್ಳುವವು.

**CWM, 3/71–72** **– ಶ್ರೀಮಾತೆ**

*

## ಪ್ರೇಮದ ಹಂತಗಳು

ಮೊದಲ ಹಂತ: ಮನುಷ್ಯ ತನ್ನನ್ನು ಪ್ರೀತಿಸಿದಾಗ ಅದಕ್ಕೆ ಪ್ರತಿಯಾಗಿ ಪ್ರೀತಿಸುತ್ತಾನೆ.

ಎರಡನೆಯ ಹಂತ: ಮನುಷ್ಯ ಸ್ವಯಂ ಪ್ರೇರಣೆಯಿಂದ ಪ್ರೀತಿಸುತ್ತಾನೆ, ಆದರೆ ಪ್ರತಿಯಾಗಿ ತನ್ನನ್ನು ಪ್ರೀತಿಸಲೆಂದು ಬಯಸುತ್ತಾನೆ.

ಮೂರನೆಯ ಹಂತ: ತನ್ನನ್ನು ಪ್ರೀತಿಸದಿದ್ದರೂ ಅವನು ಪ್ರೀತಿಸುತ್ತಾನೆ, ಅದರೆ ಇನ್ನೂ ತನ್ನ ಪ್ರೇಮವನ್ನು ಒಪ್ಪಿಕೊಳ್ಳಲಿ ಎಂದು ಬಯಸುತ್ತಾನೆ.

ಕೊನೆಯ ಹಂತ: ಮನುಷ್ಯನ ಪ್ರೇಮ ಪರಿಶುದ್ಧವಾಗಿರುತ್ತದೆ, ಸರಳವಾಗಿರುತ್ತದೆ, ಪ್ರೀತಿಸುವುದರ ಹೊರತಾಗಿ ಬೇರಾವ ಆವಶ್ಯಕತೆ ಇರುವುದಿಲ್ಲ.

ಪ್ರೇಮವೊಂದಿದೆ, ಅದನ್ನು ಹೆಚ್ಚು ಗ್ರಹಣಶೀಲತೆಯೊಂದಿಗೆ, ಬೆಳೆಯುತ್ತಿರುವ ಏಕತೆಯೊಂದಿಗೆ ಕೂಡಿಕೊಂಡಿರುವ ಭಾವೋದ್ರೇಕದಿಂದ ಭಗವಂತನತ್ತ ಹೊರಳಿಸಲಾಗಿರುತ್ತದೆ. ಅದು ಭಗವಂತನಿಂದ ಸ್ವೀಕರಿಸಿದ್ದನ್ನು ಇತರರ ಮೇಲೆ ಸುರಿಯುತ್ತದೆ, ಆದರೆ ನಿಜವಾಗಿ ಏನನ್ನೂ ಒತ್ತಾಯದಿಂದ ಪ್ರತಿಯಾಗಿ ಕೇಳುವುದಿಲ್ಲ. ನೀವು ಅದನ್ನು ಹೊಂದುವ ಕ್ಷಮತೆಯುಳ್ಳವರಾದರೆ, ಆಗ ಅದು ಪ್ರೀತಿಸುವುದಕ್ಕೆ ಅತ್ಯುಚ್ಚ ಮತ್ತು ಅತ್ಯಂತ ತೃಪ್ತಿ ನೀಡುವ ರೀತಿ.

**CWM, 14/122** **– ಶ್ರೀಮಾತೆ**

*



## ದೈವೀಪ್ರೇಮಕ್ಕಾಗಿ ಭೌತಿಕದಲ್ಲಿ ಅಭೀಪ್ಸೆ

ಇಲ್ಲೊಂದು ಹೂವಿದೆ, ಅದನ್ನು "ದೈವೀಪ್ರೇಮಕ್ಕಾಗಿ ಭೌತಿಕದಲ್ಲಿ ಅಭೀಪ್ಸೆ" ಎಂದು ನಾವು ಕರೆದಿದ್ದೇವೆ. ಭೌತಿಕ ಎಂದರೆ ಅದರರ್ಥ ಭೌತಿಕ ಪ್ರಜ್ಞೆ, ಅದು ಹೊರಗಡೆ ಸಾಗಿ ಹೋಗುವ ಅತ್ಯಂತ ಸಾಧಾರಣ ಪ್ರಜ್ಞೆ, ಬಹಳಷ್ಟು ಜನರ ಸಾಮಾನ್ಯ ಪ್ರಜ್ಞೆ, ಅದು ಸುಖಸೌಲಭ್ಯ, ಒಳ್ಳೆಯ ಆಹಾರ, ಒಳ್ಳೆಯ ವಸ್ತ್ರ, ಸಂತೋಷಕರ ಸಂಬಂಧಗಳು ಇತ್ಯಾದಿಗಳಿಗೆ ಬಹಳ ಬೆಲೆ ಕೊಡುತ್ತದೆ, ಉಚ್ಚತರ ವಿಷಯಗಳಿಗಾಗಿ ಅಭೀಪ್ಸೆಪಡುವುದಿಲ್ಲ. ಭಗವಂತನ ಪ್ರೇಮಕ್ಕಾಗಿ ಭೌತಿಕದಲ್ಲಿ

ಅಭೀಪ್ಸೆ ಸೂಚಿಸುವುದೇನೆಂದರೆ ಅದು ಭಗವಂತ ತನ್ನನ್ನು ಪ್ರೀತಿಸುತ್ತಾನೆ ಎಂಬುದರ ಭಾವನೆ ತಂದುಕೊಳ್ಳುವುದರ ಹೊರತಾಗಿ ಬೇರೆ ಏನನ್ನೂ ಕೇಳುವುದಿಲ್ಲ. ಅದರ ಸರ್ವಸಾಮಾನ್ಯ ತೃಪ್ತಿಗಳು ತೀರಾ ಸಾಕಾಗದಂತಹವು ಎಂಬುದರ ಅರಿವನ್ನು ತಂದುಕೊಳ್ಳುತ್ತದೆ. ಆದರೆ ಅಲ್ಲಿ ರಾಜೀ ಮಾಡಿಕೊಳ್ಳುವಿಕೆ ಇರಬಾರದು: ಭೌತಿಕಕ್ಕೆ ದೈವೀಪ್ರೇಮ ಬೇಕಾಗಿದ್ದರೆ, ಅದನ್ನು ಮಾತ್ರ ಬಯಸಬೇಕು ಮತ್ತು "ನಾನು ಭಗವಂತನ ಪ್ರೇಮವನ್ನು ಹೊಂದುವೆ ಮತ್ತು ಅದೇ ವೇಳೆಗೆ ನನ್ನ ಆಸಕ್ತಿಗಳನ್ನು, ಆವಶ್ಯಕತೆಗಳನ್ನು ಮತ್ತು ಸಂತೋಷ–ಪಡೆಯುವಿಕೆಗಳನ್ನು ಕಾಪಾಡಿಕೊಂಡು ಬರುತ್ತೇನೆ" ಎಂದು ಹೇಳಬಾರದು.

ಅಭೀಪ್ಸೆಯ ಮೂಲಸ್ಥಾನ ಚೈತ್ಯ ಕೇಂದ್ರ, ಅಲ್ಲಿಂದ ಅದು ಸತ್ತೆಯ ಒಂದು ಭಾಗದಲ್ಲಿ ಇಲ್ಲವೆ ಇನ್ನೊಂದು ಭಾಗದಲ್ಲಿ ಹೊರಸೂಸುತ್ತದೆ ಇಲ್ಲವೆ ಪ್ರಕಟವಾಗುತ್ತದೆ. ಭೌತಿಕದಲ್ಲಿಯ ಅಭೀಪ್ಸೆ ಕುರಿತು ನಾನು ಮಾತನಾಡಿದಾಗ ಅದರರ್ಥ ನಿಮ್ಮಲ್ಲಿ ಭೌತಿಕ ಸುಖಸೌಲಭ್ಯ ಹಾಗೂ ಒಳ್ಳೆಯ ಜೀವನ ಕುರಿತು ಯಾವುದು ಹಂಬಲಿಸುತ್ತಿದೆಯೋ ಅದು ತನ್ನಿಂದಲೇ, ನಿಮ್ಮ ಸ್ವಭಾವದ ಉಚ್ಚತರ ಭಾಗಗಳಿಂದ ಒತ್ತಾಯಕ್ಕೊಳಗಾಗದೆ ಭಗವಂತನ ದೈವೀಪ್ರೇಮವನ್ನು ಬೇಡಬೇಕು. ಸ್ವಾಭಾವಿಕವಾಗಿ ನಿಮ್ಮ ಉಚ್ಚತರ ಭಾಗಗಳಿಂದ ನೀವು ಅದಕ್ಕೆ ಪ್ರಕಾಶವನ್ನು ತೋರಿಸಬೇಕಾಗುತ್ತದೆ, ನಿಶ್ಚಿತವಾಗಿ ಇದನ್ನು ಪಟ್ಟು ಹಿಡಿದು ಕೈಕೊಳ್ಳಬೇಕು, ಹಾಗಿಲ್ಲದಿದ್ದರೆ ಭೌತಿಕ ತನ್ನಿಂದಲೇ ಎಂದೂ ಕಲಿತುಕೊಳ್ಳಲಾರದು. ಅದು ತಾನಾಗಿಯೇ ಕಲಿತುಕೊಳ್ಳುವುದಕ್ಕೆ ಪ್ರಕೃತಿಯ ಯುಗ ಯುಗಾಂತರಗಳ ಸರ್ವಸಾಮಾನ್ಯ ಸುತ್ತು ಅವಶ್ಯವಾಗುತ್ತದೆ. ನಿಜವಾಗಿ ಪ್ರಕೃತಿಯ ಸುತ್ತಿನ ಉದ್ದೇಶ ಅದಕ್ಕೆ ಸಾಧ್ಯವಾಗಬಹುದಾದ ಎಲ್ಲ ತೃಪ್ತಿಗಳನ್ನು ತೋರಿಸಿಕೊಡುವುದಾಗಿರುತ್ತದೆ ಮತ್ತು ಅವುಗಳನ್ನು ಬಳಸಿ ಮುಗಿಸುವುದರ ಮೂಲಕ ಅವುಗಳಲ್ಲಿ ಯಾವುದೂ ಅದನ್ನು ನಿಜವಾಗಿ ತೃಪ್ತಿಪಡಿಸಲಾರದು ಎಂದು ಮತ್ತು ಅರಸುತ್ತಿರುವುದರ ತಳದಲ್ಲಿ ದೈವಿಕವಾದ ತೃಪ್ತಿಯಿದೆ ಎಂದು ಅದಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆ.

ಯೋಗದಲ್ಲಿ ಪ್ರಕೃತಿಯ ಈ ನಿಧಾನ ಗತಿಯನ್ನು ತೀವ್ರಗೊಳಿಸುತ್ತೇವೆ ಮತ್ತು ಸತ್ಯವನ್ನು ನೋಡಲಿ, ಅದನ್ನು ಗುರುತಿಸುವುದನ್ನು ಬಯಸುವುದನ್ನು ಕಲಿತುಕೊಳ್ಳಲಿ ಎಂದು ಭೌತಿಕ ಪ್ರಜ್ಞೆಯ ಮೇಲೆ ಒತ್ತಡ ತರುತ್ತೇವೆ. ಆದರೆ ಅದಕ್ಕೆ ಸತ್ಯವನ್ನು ತೋರಿಸಿಕೊಡುವುದು ಹೇಗೆ? ಸರಿ, ಅದು ಕತ್ತಲಿದ್ದ ಕೋಣೆಯಲ್ಲಿ

ದೀಪ ತಂದ ಹಾಗಿರುತ್ತದೆ. ನಿಮ್ಮ ಹೆಚ್ಚು ಸುಸಂಸ್ಕೃತಗೊಂಡ ಭಾಗಗಳ ಅಂತರ್ಬೋಧೆ ಹಾಗೂ ಅಭೀಪ್ಸೆಗಳಿಂದ ನಿಮ್ಮ ಭೌತಿಕ ಪ್ರಜ್ಞೆಯ ಅಂಧಕಾರದ ಮೇಲೆ ಪ್ರಕಾಶ ಬೀರಬೇಕು ಮತ್ತು ನಿಮ್ಮ, ಸಾಧಾರಣ ವಿಷಯಗಳಿಗಾಗಿ ಭೌತಿಕ ಪ್ರಜ್ಞೆಯ ಹಸಿವು ಎಷ್ಟು ವ್ಯರ್ಥವಾದದ್ದು ಮತ್ತು ತೃಪ್ತಿಕರವಲ್ಲದ್ದು ಎಂಬುದರ ಬಗ್ಗೆ ಅರಿವು ತಂದುಕೊಳ್ಳುವವರೆಗೆ ಮತ್ತು ಸ್ವಯಂಪ್ರೇರಿತವಾಗಿ ದೈವೀ ಸತ್ಯದತ್ತ ಹೊರಳುವವರೆಗೆ ಅದನ್ನು ಹಾಗೆ ಕೈಕೊಳ್ಳುತ್ತ ಇರಬೇಕು. ಅದು ಹೊರಳಿಕೊಂಡಾಗ ನಿಮ್ಮ ಇಡೀ ಜೀವನ ಬದಲಾಗುತ್ತದೆ – ಅನುಭವ ಸುಸ್ಪಷ್ಟವಾಗಿರುತ್ತದೆ.

**CWM, 3/130–31** – ಶ್ರೀಮಾತೆ

*



## ದೈವೀಪ್ರೇಮಕ್ಕಾಗಿ ಭೌತಿಕದಲ್ಲಿ ಅಭೀಪ್ಸೆ

ವೈವಿಧ್ಯವಾದದ್ದು, ದಿವ್ಯಾನಂದದ್ದು, ತೃಪ್ತಿಪಡಿಸಲು ಕಠಿಣವಾದದ್ದು

ಶ್ರೀಮಾತೆಯವರು ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು, ವಿವರಣೆಯನ್ನು ಕೊಟ್ಟಿದ್ದಾರೆ

Botanical name: Russelia equisetiformis

*

## ಪ್ರೇಮಕ್ಕೆ ಪ್ರತಿಯಾಗಿ ಪ್ರೇಮವನ್ನು ಕೊಡಬೇಕು

ಜಗತ್ತು ಬದಲಾಗಲೆಂದು ದ್ವೇಷಕ್ಕೆ ಪ್ರತಿಯಾಗಿ ಪ್ರೇಮವನ್ನು ಕೊಡಬೇಕು ಎಂಬುದಿದ್ದರೆ ಪ್ರೇಮಕ್ಕೆ ಪ್ರೇಮವನ್ನು ಪ್ರತಿಯಾಗಿ ಕೊಡುವುದು ಹೆಚ್ಚು ಸ್ವಾಭಾವಿಕವಾಗಿರುವುದಿಲ್ಲವೆ?

ಜನರು ಅವರಿರುವ ಹಾಗೆ ಅವರ ಜೀವನ, ಕ್ರಿಯೆ ಮತ್ತು ಹೃದಯಗಳನ್ನು, ಪರಿಗಣಿಸಿದಾಗ ಮನುಷ್ಯ ಆಶ್ಚರ್ಯಪಡುವುದಕ್ಕೆ ಪ್ರತಿಯೊಂದು ಹಕ್ಕನ್ನು ಹೊಂದಿರುತ್ತಾನೆ, ದ್ವೇಷ, ತಿರಸ್ಕಾರ ಇಲ್ಲವೆ ಅತಿ ಹೆಚ್ಚು ಒಳ್ಳೆಯದೆನಿಸಬಹುದಾದ ನಿರಾಸಕ್ತಿ ಇವುಗಳನ್ನು ದೈವೀ ಕೃಪೆ ಜಗತ್ತಿನ ಮೇಲೆ ಸುರಿಸುವ ದೈವೀಪ್ರೇಮದ ಭವ್ಯತೆಗೆ ಪ್ರತಿಯಾಗಿ ಕೊಡಲಾಗುತ್ತದೆ, ಏಕೆಂದರೆ ಜಗತ್ತನ್ನು ದಿವ್ಯಾನಂದದತ್ತ ಕರೆದೊಯ್ಯಲು ಪ್ರತಿಯೊಂದು ಕ್ಷಣ ಕಾರ್ಯ ಕೈಕೊಳ್ಳುತ್ತಿರುವ ದಿವ್ಯ ಪ್ರೇಮದ ಈ ಭವ್ಯತೆ ಮಾನವ ಹೃದಯದಲ್ಲಿ ಇಷ್ಟೊಂದು ಬಡ ಪ್ರತಿಕ್ರಿಯೆ ಕಂಡುಕೊಳ್ಳುತ್ತದೆ. ಆದರೆ ದುಷ್ಟರು, ಕೊರತೆ ಇದ್ದವರು, ವಿಕಾರಗೊಂಡವರು ಇವರೆಲ್ಲರಿಗಾಗಿ, ಯಶಸ್ವಿಯಾಗದಿದ್ದವರು ಹಾಗೂ ವಿಫಲರಾದವರು ಇವರ ಬಗ್ಗೆ ಜನರಲ್ಲಿ ಅನುಕಂಪವಿರುತ್ತದೆ. – ನಿಜವಾಗಿ ಅದು ದುಷ್ಟತನಕ್ಕೆ, ವಿಫಲತೆಗೆ ಪ್ರೋತ್ಸಾಹ ನೀಡುವುದಾಗಿದೆ.

ಸಮಸ್ಯೆಯ ಈ ಮುಖ ಕುರಿತು ಮನುಷ್ಯ ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಯೋಚಿಸಿದರೆ ಬಹುಶಃ ಅವನು ದ್ವೇಷಕ್ಕೆ ಪ್ರತಿಯಾಗಿ ಪ್ರೇಮವನ್ನು ಕೊಡುವುದರ ಆವಶ್ಯಕತೆಯ ಮೇಲೆ ಒತ್ತನ್ನು ಕಡಿಮೆ ಮಾಡಬಹುದಾಗಿದೆ, ಏಕೆಂದರೆ ಮಾನವ ಹೃದಯ ತನ್ನಲ್ಲಿ ಸುರಿಸಲಾಗುತ್ತಿರುವ ದೈವೀಪ್ರೇಮಕ್ಕೆ, ಅರ್ಥಮಾಡಿಕೊಳ್ಳುವ ಹಾಗೂ ಗುರುತಿಸುವ ಪ್ರೇಮದ ಸ್ವಯಂಪ್ರೇರಿತ ಕೃತಜ್ಞತೆಯಿಂದ ಪ್ರತ್ಯುತ್ತರ ನೀಡಿದರೆ ಆಗ ಜಗತ್ತಿನಲ್ಲಿ ವಿಷಯಗಳು ತೀವ್ರಗತಿಯಿಂದ ಬದಲಾಗುವವು.

**CWM, 3/186–87** **– ಶ್ರೀಮಾತೆ**

*

## ದೈವೀಪ್ರೇಮವನ್ನು ಕಂಡುಕೊಳ್ಳುವುದು

ಒಂದು ದಿನ ಎಚ್ಚತ್ತುಗೊಂಡು ಒಂದು ವಿಶಿಷ್ಟ ಚಿತ್ತ ಸ್ಥಿತಿಯಲ್ಲಿ "ಅಹಾ! ದೈವೀಪ್ರೇಮದ ಬಗ್ಗೆ ಪ್ರಜ್ಞೆಯುಳ್ಳವನಾಗಲು ಹಾಗೂ ಅದನ್ನು ಪ್ರಕಟಿಸಲು ನಾನು ಉತ್ಸುಕತೆಯಿಂದ ಬಯಸುತ್ತೇನೆ" ಎಂದು ಹೇಳಿದರೆ ಸಾಕಾಗುತ್ತದೆ ಎಂದು

ನಂಬುವ ಜನರಿದ್ದಾರೆ. ಮನುಷ್ಯ ತನ್ನೊಳಗೆ ಮಾನವ ಸಹಜ ಗುಣದ ಅಲ್ಪ ಅಲುಗಾಡುವಿಕೆಯನ್ನು ಎಷ್ಟೊಂದು ಸಲ ಭಾವನೆಗೆ ತಂದುಕೊಳ್ಳುತ್ತಾನೆ ಎಂಬುದು ಮತ್ತು ದೈವೀಪ್ರೇಮ ತನ್ನ ಉಪಯೋಗಕ್ಕೆ ಬರುವಂತಿದ್ದರೆ ಶ್ರೇಷ್ಠ ಸಂಗತಿಗಳನ್ನು ಸಿದ್ಧಿಸಿಕೊಳ್ಳಬಹುದು ಎಂದು ಕಲ್ಪನೆ ಮಾಡಿಕೊಳ್ಳುತ್ತಾನೆ ಎಂಬುದು ನನಗೆ ತಿಳಿಯದು ಮತ್ತು ಅವನು "ನಾನು ದೈವೀಪ್ರೇಮವನ್ನು ಕಂಡುಕೊಳ್ಳಲು ಪ್ರಯತ್ನ ಮಾಡುವವನಿದ್ದೇನೆ, ಪರಿಣಾಮ ಏನಾಗುವುದು ಎಂಬುದನ್ನು ನೋಡುವಾ" ಎಂದು ಹೇಳುತ್ತಾನೆ. ಇದು ಸಾಧ್ಯವಾಗಬಹುದಾದ ಅತ್ಯಂತ ಕೆಟ್ಟ ರೀತಿ. ಏಕೆಂದರೆ ಸಿದ್ಧಿಯ ಪ್ರಾರಂಭವನ್ನು ಸ್ಪರ್ಶಿಸುವುದರ ಮೊದಲೇ ನೀವು ಪರಿಣಾಮವನ್ನು ಹಾಳುಮಾಡಿರುತ್ತೀರಿ. ನಿಮ್ಮ ಶೋಧವನ್ನು ಅಭೀಪ್ಸೆಯ ಪರಿಶುದ್ಧತೆಯಿಂದ, ಶರಣಾಗತಿಯಿಂದ ಕೈಗೆತ್ತಿಕೊಳ್ಳಬೇಕಾಗುತ್ತದೆ, ಅವುಗಳನ್ನು ದೊರಕಿಸುವುದು ಅದಾಗಲೇ ಕಠಿಣವಾಗಿರುತ್ತದೆ. ಈ ದೈವೀಪ್ರೇಮಕ್ಕೆ ಅಭೀಪ್ಸೆ ಪಡುವುದಕ್ಕಾಗಿ ನೀವು ನಿಮ್ಮ ಮೇಲೆ ಬಹಳಷ್ಟು ಕಾರ್ಯಕೈಕೊಂಡಿರಬೇಕಾಗುತ್ತದೆ. ನೀವು ನಿಮ್ಮತ್ತ ಬಹಳ ನೇರವಾಗಿ, ನಿಷ್ಕಾಪಟ್ಯದಿಂದ ನೋಡಿದಾಗ ಕಂಡುಕೊಳ್ಳುವುದೇನೆಂದರೆ ದೈವೀಪ್ರೇಮವನ್ನು ಕುರಿತು ಯೋಚಿಸತೊಡಗಿದ ಕೂಡಲೆ ಯಾವಾಗಲೂ ಅಲ್ಲಿ ಸುತ್ತು ಹೊಡೆಯುತ್ತಿರುವ ಚಿಕ್ಕ ಆಂತರಿಕ ಕೋಲಾಹಲವಿರುವುದಾಗಿದೆ. ನಿಮ್ಮಲ್ಲಿ ಅಭೀಪ್ಸೆ ಪಡುತ್ತಿರುವುದೆಲ್ಲ ಕೆಲವೊಂದು ವಿಶಿಷ್ಟ ಕಂಪನಗಳನ್ನು ಬಯಸುತ್ತದೆ. ದೈವೀಪ್ರೇಮ ಕುರಿತು ನೀವು ಕಲ್ಪನೆ ಮಾಡಿಕೊಳ್ಳುವುದರಿಂದ ಪ್ರಾಣಿಕ ಸಾರವನ್ನು, ಪ್ರಾಣಿಕ ಕಂಪನವನ್ನು ಪ್ರತ್ಯೇಕಗೊಳಿಸುವುದು ನೀವು ಯೋಗದ ಮಾರ್ಗದಲ್ಲಿ ಸಾಕಷ್ಟು ಪ್ರಗತಿ ಸಾಧಿಸದೆ ಇದ್ದರೆ, ಬಹುಮಟ್ಟಿಗೆ ಅಸಾಧ್ಯವಾಗುವುದು. ನಾನು ಹೇಳುತ್ತಿರುವುದು ಮಾನವ ಸತ್ತೆಗಳ ತತ್ಪರ (assiduous) ಅನುಭವದ ಆಧಾರ ಪಡೆದಿದೆ. ಸರಿ ನಿಮಗಾಗಿ, ನೀವಿರುವ ಸ್ಥಿತಿಯಲ್ಲಿ, ನೀವಿರುವ ಹಾಗೆ ನಿಮಗೆ ಪರಿಶುದ್ಧ ದೈವೀಪ್ರೇಮದ ಸಂಪರ್ಕ ಉಂಟಾದರೆ, ಅದು ನಿಮಗೆ ಹಿಮಕ್ಕಿಂತ ಹೆಚ್ಚು ತಣ್ಣಗಾಗಿರುವ ಹಾಗೆ ಇಲ್ಲವೆ ಎಷ್ಟೊಂದು ದೂರದಲ್ಲಿ, ಎಷ್ಟೊಂದು ಎತ್ತರದ ಮೇಲೆ ಇರುವಂತೆ ತೋರಿಬರುತ್ತದೆಂದರೆ ಅಲ್ಲಿ ನೀವು ಉಸಿರಾಡಿಸಲೂ ಶಕ್ತರಾಗದ ಹಾಗಿರುತ್ತದೆ, ಅದು ಪರ್ವತದ ಶಿಖರದ ಹಾಗಿದ್ದು ಅಲ್ಲಿ ನೀವು ಹಿಮಗಡ್ಡೆಯಾಗುತ್ತಿರುವ ಭಾವನೆ ತಂದುಕೊಳ್ಳುತ್ತೀರಿ, ಉಸಿರಾಟ ಅಲ್ಲಿ ಬಹಳ ಕಷ್ಟಕರವಾಗುತ್ತದೆ, ನೀವು ಸಾಮಾನ್ಯವಾಗಿ ಭಾವನೆ ತಂದುಕೊಳ್ಳುವುದರಿಂದ ಅದು ಬಹಳ ದೂರದಲ್ಲಿರುತ್ತದೆ. ಚೈತ್ಯಾತ್ಮಿಕ ಇಲ್ಲವೆ ಪ್ರಾಣಿಕ ಕಂಪನಗಳ ಹೊದಿಕೆಗೆ ದೈವೀಪ್ರೇಮ ಒಳಗಾಗದಿದ್ದರೆ ಮಾನವಸತ್ತೆಗೆ ಗ್ರಹಿಸುವುದು ಕಠಿಣವಾಗುತ್ತದೆ.

ದೈವೀಕೃಪೆಯ ಭಾವನೆ ಮನುಷ್ಯನಿಗೆ ಬರಬಲ್ಲದು, ಅದು ಬಹಳ ದೂರದಲ್ಲಿರುವ, ಎತ್ತರದಲ್ಲಿರುವ, ಪರಿಶುದ್ಧವಾಗಿರುವ, ಅವ್ಯೈಯಕ್ತಿಕವಾಗಿರುವ ಏನೋ ಒಂದು, ... ಮನುಷ್ಯ ದೈವೀಕೃಪೆಯ ಭಾವನೆ ತಂದುಕೊಳ್ಳಬಹುದು, ಆದರೆ ದೈವೀಪ್ರೇಮದ ಬಗ್ಗೆ ಬಹಳ ಕಷ್ಟಪಟ್ಟು ಭಾವನೆ ತಂದುಕೊಳ್ಳುತ್ತಾನೆ.

**CWM, 4/244–45** **– ಶ್ರೀಮಾತೆ**

*

ದೈವೀಪ್ರೇಮಕ್ಕಾಗಿ ದಾಹವಿದೆ, ಅದನ್ನು ಯಾವ ಮಾನವ ಸಂಬಂಧವೂ ತಣ್ಣಗಾಗಿಸಲಾರದು.

ಕೇವಲ ಭಗವಂತನ ಪ್ರೇಮ ಆ ದಾಹವನ್ನು ತೃಪ್ತಿಪಡಿಸಬಲ್ಲದು.

*

ಪ್ರೇಮದ ಹಕ್ಕುಗಳನ್ನು ಕುರಿತು ಜನರು ಮಾತನಾಡುತ್ತಾರೆ, ಆದರೆ ಪ್ರೇಮದ ಏಕೈಕ ಹಕ್ಕು ಸ್ವ–ಅರ್ಪಣೆಯಾಗಿರುತ್ತದೆ.

*

ಸ್ವ–ಅರ್ಪಣೆ ಇಲ್ಲದೆ ಪ್ರೇಮ ಎಂಬುದಿಲ್ಲ. ಸ್ವಾರ್ಥ ಹಾಗೂ ಒತ್ತಾಯದ ಬೇಡಿಕೆಗಳಿರುವ ಮಾನವ ಪ್ರೇಮದಲ್ಲಿ ಸ್ವ–ಅರ್ಪಣೆ ಅಪರೂಪಕ್ಕೆ ಕಂಡುಬರುತ್ತದೆ.

**CWM, 14/121** **– ಶ್ರೀಮಾತೆ**

*

## ನಿಜವಾದ ಪ್ರೇಮ ಮತ್ತು ಮನುಕುಲ

"ನೀನು ನನ್ನನ್ನು ಪ್ರೀತಿಸಿದರೆ ನಾನು ನಿನ್ನನ್ನು ಪ್ರೀತಿಸುವೆ, ನೀನು ನನ್ನನ್ನು ಪ್ರೀತಿಸದಿದ್ದರೆ ನಾನು ನಿನ್ನನ್ನು ಪ್ರೀತಿಸುವುದಿಲ್ಲ." ಇದು ಕೇವಲ ಪ್ರೇಮ ಕುರಿತಾದ ಅತ್ಯಂತ ಮಾನವ ರೀತಿಯ ಅಭಿವ್ಯಕ್ತಿ. ಅದು ಇನ್ನೂ ಮುಂದೆ ಸಾಗಿ ಹೋಗುತ್ತದೆ. ಜನರು ಭಗವಂತನೊಂದಿಗಿರುವ ತಮ್ಮ ಸಂಬಂಧಕ್ಕೆ ಅದನ್ನು ಅನ್ವಯಿಸುತ್ತಾರೆ. ಅವರು ಭಗವಂತನಿಗೆ ಹೇಳುತ್ತಾರೆ: " ನಾನು ಬಯಸಿದ್ದನ್ನು ನೀನು ಕೈಕೊಂಡರೆ ಆಗ ನೀನು ನನ್ನನ್ನು ಪ್ರೀತಿಸುವಿ ಎಂದು ಹೇಳುವೆ, ಆದರೆ ನಾನು ಬಯಸಿದ್ದನ್ನು ನೀನು ಕೈಕೊಳ್ಳದಿದ್ದರೆ ಆಗ ನೀನು ನನ್ನನ್ನು ಪ್ರೀತಿಸುತ್ತಿರುವುದಿಲ್ಲ ಮತ್ತು ನಿಶ್ಚಿತವಾಗಿ ನಾನು ನಿನ್ನನ್ನು ಪ್ರೀತಿಸುವುದಿಲ್ಲ." ಅದಿರುವುದು ಹಾಗೆ. ಅದರರ್ಥ ಅದು ವ್ಯವಹಾರ ರೂಪದ್ದಾಗುತ್ತದೆ.

ಮತ್ತು ಇನ್ನೂ ಹೆಚ್ಚು ಒಳ್ಳೆಯದೆಂದರೆ ಮನುಷ್ಯ ತನ್ನನ್ನು ಪ್ರೀತಿಸಲಾಗುತ್ತಿದೆಯೋ ಇಲ್ಲವೋ ಎಂಬುದನ್ನು ತನಗೆ ಕೇಳಿಕೊಳ್ಳಬಾರದು, ಅವನು ಅದಕ್ಕೆ ಪರಿಪೂರ್ಣವಾಗಿ ಉದಾಸೀನನಾಗಿರಬೇಕು. ಮತ್ತು ಅದು ನಿಜವಾದ ಪ್ರೇಮವಾಗಲು ಪ್ರಾರಂಭಿಸುತ್ತದೆ: ಮನುಷ್ಯ ಪ್ರೀತಿಸುತ್ತಾನೆ ಏಕೆಂದರೆ ಅವನು ಪ್ರೀತಿಸುತ್ತಾನೆ, ಅವನು ತನ್ನ ಪ್ರೇಮಕ್ಕೆ ಪ್ರತಿಯಾಗಿ ಪ್ರೇಮಕ್ಕೆ ಪ್ರತ್ಯುತ್ತರ ದೊರಕಿಸುತ್ತಾನೆ ಎಂಬ ಕಾರಣಕ್ಕಾಗಿ ಅಲ್ಲ, ಇಲ್ಲವೆ ಆ ಬೇರೆ ವ್ಯಕ್ತಿ ನಿಮ್ಮನ್ನು ಪ್ರೀತಿಸುತ್ತಾನೆ ಎಂಬ ಕಾರಣಕ್ಕಾಗಿಯೂ ಅಲ್ಲ. ಆ ಎಲ್ಲ ನಿಬಂಧನೆಗಳು – ಅದು ಪ್ರೇಮವಲ್ಲ. ಪ್ರೀತಿಸದೆ ಇರಲಾರ ಎಂಬ ಕಾರಣಕ್ಕಾಗಿ ಮನುಷ್ಯ ಪ್ರೀತಿಸುತ್ತಾನೆ. ಏನು ಸಂಭವಿಸಲಿದೆ ಎಂಬುದರ ಬಗ್ಗೆ ಮನುಷ್ಯ ಚಿಂತೆ ಮಾಡುವುದಿಲ್ಲ. ಮನುಷ್ಯ ತನ್ನ ಪ್ರೇಮದ ಭಾವನೆಯಿಂದ ತೃಪ್ತಿಯಿಂದಿರುತ್ತಾನೆ. ಮನುಷ್ಯ ಪ್ರೀತಿಸುತ್ತಾನೆ, ಏಕೆಂದರೆ ಅವನು ಪ್ರೀತಿಸುತ್ತಾನೆ.

ಉಳಿದದ್ದೆಲ್ಲ ಚೌಕಾಸಿ ಮಾಡುವುದಾಗಿರುತ್ತದೆ, ಅದು ಪ್ರೇಮವಲ್ಲ. ಅಲ್ಲದೆ ಒಂದು ವಿಷಯ ನಿಶ್ಚಿತ: ಮನುಷ್ಯ ನಿಜವಾದ ಪ್ರೇಮದ ಅನುಭವ ಪಡೆದಾಗ ಅವನು ನಂತರ ಅದನ್ನು ಕುರಿತು ಪ್ರಶ್ನಿಸುವುದಿಲ್ಲ.

ಈ ಪ್ರಶ್ನೆಯನ್ನು ಕೇಳುವುದು ಒಟ್ಟಿನಲ್ಲಿ ಬಾಲಿಶ, ಹಾಸ್ಯಾಸ್ಪದವಾದದ್ದು, ಪ್ರಾಮುಖ್ಯತೆಯಿಲ್ಲದ್ದು ಎಂದು ತೋರಿಬರುತ್ತದೆ. ನಿಜವಾದ ಪ್ರೇಮದ ಅನುಭವ ಪಡೆದ ತತ್‌ಕ್ಷಣ ಮನುಷ್ಯನಿಗೆ ಸಂಪೂರ್ಣವಾಗಿ ವಿಸ್ತಾರಗೊಂಡ ಸಂತೋಷ–ವಿರುತ್ತದೆ, ಮತ್ತು ಅವನಿಗೆ ಯಾವುದೇ ಬಗೆಯ ಪ್ರತ್ಯುತ್ತರದ ಆವಶ್ಯಕತೆ ಇರುವುದಿಲ್ಲ. ಮನುಷ್ಯ ಪ್ರೇಮವಾಗಿರುತ್ತಾನೆ, ಅಷ್ಟೇ, ಮತ್ತು ಮನುಷ್ಯನಿಗೆ ಪ್ರೇಮದಿಂದ ದೊರಕುವ ತೃಪ್ತಿಯ ವೈಶಾಲ್ಯವಿರುತ್ತದೆ. ಅಲ್ಲಿ ಯಾವುದೇ ಬಗೆಯ ಪರಸ್ಪರತೆ ಇರುವುದಿಲ್ಲ.

ನಾನು ಹೇಳುವುದೇನೆಂದರೆ ಎಲ್ಲಿಯವರೆಗೆ ಈ ಲೆಕ್ಕಾಚಾರ ಮನಸ್ಸಿನಲ್ಲಿ, ಇಲ್ಲವೆ ಭಾವನೆಗಳಲ್ಲಿ ಇಲ್ಲವೆ ಸಂವೇದನೆಯಲ್ಲಿ ಇರುತ್ತದೆಯೋ, ಹೆಚ್ಚು ಕಡಿಮೆ ಅಂಗೀಕಾರ ಮಾಡಿದ ಲೆಕ್ಕಾಚಾರವಿರುತ್ತದೆಯೋ ಅಲ್ಲಿಯವರೆಗೆ ಅದು ಚೌಕಾಶಿಯಾಗಿರುತ್ತದೆ, ಪ್ರೇಮವಲ್ಲ.

ಜನರು ಪ್ರೇಮವೆಂದು ಕರೆಯುವುದರಿಂದ ನಿಜವಾದ ಪ್ರೇಮಕ್ಕೆ ಸಾಗಿ ಹೋಗುವ ಮಾರ್ಗ ಬಹಳ ದೀರ್ಘವಾಗಿರುತ್ತದೆ.

**CWM, 5/237–38** **– ಶ್ರೀಮಾತೆ**

*

## ಸ್ವಾರ್ಥರಹಿತ, ಲೆಕ್ಕಾಚಾರ ಮಾಡದ ಚೈತ್ಯಸತ್ತೆಯ ಚಲನೆ

ಸ್ವಾರ್ಥರಹಿತ ಚಲನೆ, ಲೆಕ್ಕಾಚಾರ ಮಾಡದೆ ಇರುವುದು ಇದೆಲ್ಲ ಜಗತ್ತಿನಲ್ಲಿ ಚೈತ್ಯಸತ್ತೆಯ ಪ್ರಜ್ಞೆಯ ಅತ್ಯಂತ ಸುಂದರ ರೂಪಗಳಿಗೆ ಸೇರಿರುತ್ತದೆ. ಆದರೆ ಮನುಷ್ಯ ಉಚ್ಚತರವಾದ ಮಾನಸಿಕ ಚಲನೆಯ ರೂಪದಲ್ಲಿ ಮೇಲಕ್ಕೇರುತ್ತ ಹೋದಾಗ ಅದು ಹೆಚ್ಚು ಅಪರೂಪದ್ದಾಗುತ್ತದೆ.

ಏಕೆಂದರೆ ಬುದ್ಧಿಮತ್ತೆಯೊಂದಿಗೆ ಎಲ್ಲ ಕೌಶಲ ಹಾಗೂ ಚಾತುರ್ಯ ಬರುತ್ತವೆ, ಭ್ರಷ್ಟಾಚಾರ ಹಾಗೂ ಲೆಕ್ಕಾಚಾರಗಳೂ ಬರುತ್ತವೆ. ಉದಾಹರಣೆಗೆ ಗುಲಾಬಿ ಹೂವೊಂದು ಅರಳಿಕೊಳ್ಳುತ್ತದೆ, ಅದನ್ನು ಎಷ್ಟೊಂದು ಸ್ವಯಂ-ಪ್ರೇರಣೆಯಿಂದ ಕೈಕೊಳ್ಳುತ್ತದೆ, ಅದು ಸುಂದರವಾಗಿರುವುದಕ್ಕಾಗಿರುತ್ತದೆ, ಮಧುರ ವಾಸನೆ ಬೀರುವುದಕ್ಕಾಗಿರುತ್ತದೆ, ಜೀವಿಸುವ ಎಲ್ಲ ಸಂತೋಷವನ್ನು ಅಭಿವ್ಯಕ್ತ-ಪಡಿಸುತ್ತದೆ ಮತ್ತು ಅದು ಲೆಕ್ಕಾಚಾರ ಮಾಡುವುದಿಲ್ಲ, ಅದರಿಂದ ಗಳಿಸಬಹುದಾದ ಯಾವ ಲಾಭವೂ ಇರುವುದಿಲ್ಲ, ಅದನ್ನು ಅದು ಸ್ವಯಂಪ್ರೇರಣೆಯಿಂದ ಸತ್ತೆಯ ಸಂತೋಷ ಹಾಗೂ ಜೀವಿಸುವ ಸಂತೋಷಗಳಲ್ಲಿ ಹಾಗೆ ಮಾಡುತ್ತದೆ. ಮಾನವ ಸತ್ತೆಯನ್ನು ಕುರಿತು ಯೋಚಿಸೋಣ, ಸರಿ, ಅತಿ ಕಡಿಮೆ ಉದಾಹರಣೆಗಳ ಹೊರತಾಗಿ ಮನುಷ್ಯನ ಮನಸ್ಸು ಕ್ರಿಯಾಶೀಲವಾದ ತತ್ಕ್ಷಣ ಅವನು ಒಂದಿಷ್ಟು ಅನುಕೂಲತೆಯನ್ನು ತನ್ನ ಸೌಂದರ್ಯ ಹಾಗೂ ಚಾತುರ್ಯಗಳ ಮೂಲಕ ಪಡೆಯಲು ಪ್ರಯತ್ನಿಸುತ್ತಾನೆ, ಅದು ತನಗೆ ಏನನ್ನಾದರೂ ತಂದುಕೊಡಲಿ ಎಂದು ಬಯಸುತ್ತಾನೆ, ಅದು ಜನರ ಹೊಗಳಿಕೆಯಾಗಿರಬಹುದು ಇಲ್ಲವೆ ಇನ್ನೂ ಹೆಚ್ಚು ಕೊಳಕಾದ ಲಾಭಗಳಾಗಿರಬಹುದು. ಪರಿಣಾಮವಾಗಿ ಚೈತ್ಯದ ದೃಷ್ಟಿಕೋನದಿಂದ ಗುಲಾಬಿ ಹೂವು ಮನುಷ್ಯರಿಗಿಂತ ಹೆಚ್ಚು ಒಳ್ಳೆಯದು.

ಒಂದು ಉಚ್ಚತರ ಮೆಟ್ಟಲಿನ ಮೇಲೇರಿ ಹೋಗಿ ಪ್ರಜ್ಞಾಪೂರ್ವಕವಾಗಿ ಗುಲಾಬಿ ಹೂವು ಪ್ರಜ್ಞಾರಹಿತವಾಗಿ ಮಾಡಿದ್ದನ್ನು ಕೈಕೊಂಡಾಗ ಮಾತ್ರ ಅದು ಇನ್ನೂ ಹೆಚ್ಚು ಸುಂದರವಾಗಿರುತ್ತದೆ. ಆದರೆ ಅದು ಅದೇ ವಿಷಯವಾಗಿರಬೇಕು, ಸ್ವಯಂಪ್ರೇರಣೆಯಿಂದ ಸೌಂದರ್ಯದ ಅರಳಿಕೊಳ್ಳುವಿಕೆ ಇರಬೇಕು, ಲೆಕ್ಕಾಚಾರ ಮಾಡದೆ ಇರಬೇಕು ಸರಳವಾಗಿ ಸತ್ತೆಯ ಸಂತೋಷಕ್ಕಾಗಿ ಇರಬೇಕು. ಕೆಲವೊಮ್ಮೆ ಚಿಕ್ಕ ಮಕ್ಕಳಲ್ಲಿ ಇದಿರುತ್ತದೆ (ಕೆಲವೊಮ್ಮೆ, ಯಾವಾಗಲೂ ಅಲ್ಲ). ದುರ್ದೈವವಶಾತ್ ತಂದೆ ತಾಯಂದಿರ ಪ್ರಭಾವ ಹಾಗೂ ವಾತಾವರಣ ಇವುಗಳಡಿಯಲ್ಲಿ, ಅವರು ಇನ್ನೂ ಚಿಕ್ಕವರಾಗಿದ್ದಾಗಲೇ ಲೆಕ್ಕಾಚಾರ ಮಾಡುವುದನ್ನು ಕಲಿತುಕೊಳ್ಳುತ್ತಾರೆ.

ತನ್ನಲ್ಲಿರುವುದರಿಂದ, ತಾನು ಕೈಕೊಳ್ಳುವುದರಿಂದ ಲಾಭ ಪಡೆಯುವ ಈ ಬಗೆಯ ಇಚ್ಛೆ ನಿಜವಾಗಿ ಜಗತ್ತಿನಲ್ಲಿ ಅತ್ಯಂತ ಹೀನವಾದ ವಿಷಯಗಳಲ್ಲಿ ಒಂದು. ಅದು ವಿಸ್ತಾರವಾಗಿ ಹರಡಿಕೊಂಡ ವಿಷಯಗಳಲ್ಲಿ ಒಂದು, ಅದು ಎಷ್ಟೊಂದು ವಿಸ್ತಾರವಾಗಿಬಿಟ್ಟಿದೆಯೆಂದರೆ ಅದು ಮನುಷ್ಯನಲ್ಲಿ ಬಹುಮಟ್ಟಿಗೆ ಸ್ವಯಂ–ಪ್ರೇರಿತವಾದದ್ದು ಎನಿಸುವ ಹಾಗಿದೆ. ಲೆಕ್ಕಾಚಾರ ಮಾಡುವುದನ್ನು ಹಾಗೂ ಲಾಭ ಪಡೆಯುವುದನ್ನು ಕುರಿತು ಇರುವ ಇಚ್ಛೆಗಿಂತ ಹೆಚ್ಚಾಗಿ ಬೇರಾವುದೂ ಭಗವಂತನಿಗೆ ತನ್ನ ಬೆನ್ನು ತಿರುಗಿಸಲಾರದು.

**CWM, 6/101–02** **– ಶ್ರೀಮಾತೆ**

*

## ಪ್ರೇಮದ ಗುಣಲಕ್ಷಣ

**ಪ್ರಶ್ನೆ :** *ನಿಜವಾಗಿ ಹೇಗೆ ಪ್ರೀತಿಸಬೇಕು ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಸ್ವಭಾವವನ್ನು ಪರಿವರ್ತನೆಗೊಳಿಸಬೇಕಾಗುವುದೆ?*

**ಶ್ರೀಮಾತೆ :** ಪ್ರೇಮದ ಗುಣಲಕ್ಷಣ ನಿಮ್ಮ ಪ್ರಜ್ಞೆ ಪರಿವರ್ತನೆಗೆ ಒಳಗಾಗುವ ಪ್ರಮಾಣದಲ್ಲಿರುತ್ತದೆ. ನನಗೆ ಅರ್ಥವಾಗುತ್ತಿಲ್ಲ. ಅದು ಬಾಲಿಶ ಎನಿಸುವಷ್ಟು ಸರಳವಾಗಿದೆ. ನಿಮ್ಮಲ್ಲಿ ಪಶುವಿನ ಪ್ರಜ್ಞೆ ಇದ್ದರೆ ನೀವು ಪಶುಗಳ ಹಾಗೆ ಪ್ರೀತಿಸುತ್ತೀರಿ. ಗಣ್ಯಸತ್ತೆಯ ಪ್ರಜ್ಞೆ ಇದ್ದರೆ ನೀವು ಗಣ್ಯಮನುಷ್ಯನ ಹಾಗೆ ಪ್ರೀತಿಸುತ್ತೀರಿ ಮತ್ತು ನಿಮ್ಮಲ್ಲಿ ದೇವನ ಪ್ರಜ್ಞೆ ಇದ್ದರೆ ನೀವು ದೇವನ ಹಾಗೆ ಪ್ರೀತಿಸುತ್ತೀರಿ ಅದು ಸರಳವಾಗಿದೆ! ಅದನ್ನು ಕುರಿತಾಗಿಯೇ ನಾನು ಹೇಳಿದ್ದೆ. ಮತ್ತು ಹಾಗಾಗಿ ಪ್ರಗತಿಗಾಗಿ ಹಾಗೂ ಆಂತರಿಕ ಪರಿವರ್ತನೆಗಾಗಿ ಪ್ರಯತ್ನ ಮಾಡುವುದರ ಮೂಲಕ, ಅಭೀಪ್ಸೆಯ ಮೂಲಕ, ಅಭಿವೃದ್ಧಿಯ ಮೂಲಕ ನೀವು ಒಂದು ಪ್ರಜ್ಞೆಯಿಂದ ಇನ್ನೊಂದು ಪ್ರಜ್ಞೆಯತ್ತ ಸಾಗಿ ಹೋಗುತ್ತೀರಿ ಮತ್ತು ನಿಮ್ಮ ಪ್ರಜ್ಞೆ ಹೆಚ್ಚು ವಿಸ್ತಾರವಾಗುತ್ತ ಹೋಗುತ್ತದೆ, ಸರಿ ನಿಮ್ಮ ಅನುಭವಕ್ಕೆ ಬರುವ ಪ್ರೇಮ ವಿಸ್ತರಿಸುತ್ತ ಹೋಗುವುದು. ಅದು ಬಹಳ ಸ್ಪಷ್ಟವಾಗಿದೆ!

ನೀವು ಅತ್ಯಂತ ಪರಿಶುದ್ಧವಾದ ನೀರನ್ನು ತೆಗೆದುಕೊಳ್ಳಿರಿ, ಸ್ಫಟಿಕದ ಬಂಡೆಗಳಿಂದ ಹರಿದು ಬಂದ ನೀರನ್ನು ಸಾಕಷ್ಟು ದೊಡ್ಡ ಕಲಶದಲ್ಲಿ ಸಂಗ್ರಹಿಸಬೇಕು, ನಂತರ ಈ ಕಲಶದಲ್ಲಿ ಕಡಿಮೆ ಇಲ್ಲವೆ ಹೆಚ್ಚಿನ ಪ್ರಮಾಣದಲ್ಲಿ ಮಣ್ಣಿದೆ. ನೀವು ಆ ನೀರು ಕೆಳಗೆ ಬಂದ ನೀರೇ ಎಂದು ಹೇಳಲಾರಿರಿ, ಆದಾಗ್ಯೂ

ಅದು ಅದೇ ನೀರು, ಕೆಳಗೆ ಹರಿದು ಬಂದದ್ದು, ಇನ್ನೂ ಅದೇ ನೀರು ಅಲ್ಲಿದೆ, ಕೇವಲ ನೀವು ನಿಮ್ಮ ಕಲಶದಲ್ಲಿ ಎಷ್ಟೊಂದು ವಸ್ತುಗಳೊಡನೆ ಆ ನೀರನ್ನು ಮಿಶ್ರಣಗೊಳಿಸಿರುತ್ತೀರಿ ಎಂದರೆ ಆ ನೀರು ಮೊದಲಿನ ಹೋಲಿಕೆಯನ್ನು ಕಳೆದುಕೊಂಡಿರುತ್ತದೆ! ಸರಿ, ಪ್ರೇಮ, ಅದರ ಸಾರದಲ್ಲಿ ಪರಿಪೂರ್ಣವಾಗಿ ಪರಿಶುದ್ಧವಾದದ್ದು ಹರಳು ರೂಪದ್ದು, ಪರಿಪೂರ್ಣವಾದ ವಿಷಯ. ಮಾನವ ಪ್ರಜ್ಞೆಯಲ್ಲಿ ಸುಮಾರಾಗಿ ಅಸಾಧಾರಣ ರೀತಿಯಲ್ಲಿ ಕೀಳಾಗಿದ್ದದರೊಂದಿಗೆ ಮಿಶ್ರಣಗೊಂಡಿರುತ್ತದೆ. ಹಾಗಾಗಿ ಕೀಳಾಗಿದ್ದುದರ ಮೊತ್ತದ ಪ್ರಮಾಣದಲ್ಲಿ ಅದು ಹೆಚ್ಚು ಹೆಚ್ಚಾಗಿ ಕೀಳಾಗುತ್ತ ಹೋಗುತ್ತದೆ.

**CWM, 6/102–03** **– ಶ್ರೀಮಾತೆ**

*

## ಪ್ರೇಮವನ್ನು ತಿಳಿದುಕೊಳ್ಳುವುದಕ್ಕಾಗಿ ಮನುಷ್ಯ ಭಗವಂತನನ್ನು ಪ್ರೀತಿಸಬೇಕು

ಇನ್ನೊಬ್ಬರನ್ನು ಪ್ರೀತಿಸುವುದೇ? ಅದು ಅಸಾಧ್ಯವಾದದ್ದು ಎಂದು ನಾನು ಅಲ್ಲಿ ಹೇಳಿದ್ದೇನೆ. ಪ್ರೇಮ ಎಂದರೆ ಏನು ಎಂದು ಮನುಷ್ಯ ತಿಳಿದುಕೊಳ್ಳಬೇಕಾದರೆ ಅವನು ಭಗವಂತನನ್ನು ಪ್ರೀತಿಸಬೇಕು ಎಂದು ನಾನು ಅಲ್ಲಿ ಹೇಳಿದ್ದೇನೆ. ಆಗ ಪ್ರೇಮ ಎಂದರೆ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅದೃಷ್ಟವಿರುತ್ತದೆ. ಮನುಷ್ಯ ತಾನು ಪ್ರೀತಿಸುವುದಕ್ಕೆ ಸದೃಶವಾಗಿ ಬೆಳೆಯುತ್ತಾನೆ ಎಂದು ನಾನು ಹೇಳಿದ್ದೆ. ಹಾಗಾಗಿ ಮನುಷ್ಯ ಭಗವಂತನನ್ನೂ ಪ್ರೀತಿಸಿದರೆ, ಕ್ರಮೇಣ, ಪ್ರೀತಿಸುವ ಈ ಪ್ರಯತ್ನದ ಮೂಲಕ, ಅವನು ಹೆಚ್ಚು ಹೆಚ್ಚಾಗಿ ಭಗವಂತನಿರುವ ಹಾಗೆ ಬೆಳೆಯುತ್ತಾನೆ, ಆಗ ಅವನು ದೈವೀಪ್ರೇಮದೊಂದಿಗೆ ಗುರುತಿಸಿಕೊಳ್ಳಬಹುದು ಮತ್ತು ಅದು ಏನಿದೆ ಎಂಬುದನ್ನು ತಿಳಿದುಕೊಳ್ಳಬಹುದು, ಹಾಗಿಲ್ಲದಿದ್ದರೆ ಅವನು ಅದನ್ನು ತಿಳಿದುಕೊಳ್ಳಲಾರ. ಅನಿವಾರ್ಯವಾಗಿ, ಇಬ್ಬರು ಮಾನವ ಸತ್ತೆಗಳ ನಡುವಿರುವ ಪ್ರೇಮ ಯಾವಾಗಲೂ ಅಜ್ಞಾನದಿಂದ ಮಾಡಿದ್ದಾಗಿರುತ್ತದೆ, ಅರ್ಥಮಾಡಿಕೊಳ್ಳುವುದರಲ್ಲಿ ಕೊರತೆ ಇರುತ್ತದೆ, ದೌರ್ಬಲ್ಯವಿರುತ್ತದೆ ಮತ್ತು ಭಯಾನಕ ರೀತಿಯ ಪ್ರತ್ಯೇಕತೆಯ ಭಾವವಿರುತ್ತದೆ. ಅದು ಮನುಷ್ಯ ಅನನ್ಯ ದೈವೀ ಭವ್ಯತೆಯ ಸಾನ್ನಿಧ್ಯದಲ್ಲಿ ಪ್ರವೇಶಿಸಲು ಬಯಸಿದಂತಿದೆ, ಮತ್ತು ಅವನು ಕೈಕೊಂಡ ಮೊದಲ ಕಾರ್ಯ ಒಂದು ಪರದೆಯನ್ನು, ಎರಡು ಪರದೆಗಳನ್ನು, ಮೂರು ಪರದೆಗಳನ್ನು ಹೀಗೆ ಹಲವಾರು ಪರದೆಗಳನ್ನು ತನ್ನ ಹಾಗೂ ಆ ದೈವೀ

ಭವ್ಯತೆಯ ನಡುವೆ ಇರಿಸಿದಂತಿರುತ್ತದೆ ಮತ್ತು ಅವನು ಪ್ರೇಮದ ಬಗ್ಗೆ ಅಸ್ಪಷ್ಟ ಕಲ್ಪನೆ ಪಡೆಯುವುದರಿಂದ ಅವನಿಗೆ ಆಶ್ಚರ್ಯವಾಗುತ್ತದೆ, ಅದು ನಿಜವಾದ ಆ ವಿಷಯ ಆಗಿರುವುದಿಲ್ಲ. ಮೊದಲು ಕೈಕೊಳ್ಳಬೇಕಾದ ಕಾರ್ಯವೆಂದರೆ ಆ ಪರದೆಗಳನ್ನು ತೆಗೆದು ಹಾಕುವುದಾಗಿದೆ, ಅವುಗಳನ್ನು ದೂರದಲ್ಲಿರಿಸುವುದಾಗಿದೆ, ಆದ್ಯಂತ ಸಾಗಿ ಹೋಗಿ ತನ್ನನ್ನು ದೈವೀ ಭವ್ಯತೆಯ ಸಾನ್ನಿಧ್ಯದಲ್ಲಿ ಕಂಡುಕೊಳ್ಳುವುದಾಗಿದೆ. ನಿಮ್ಮ ಹಾಗೂ ಅದರ ನಡುವೆ ಪರದೆ ಇರಿಸುತ್ತ ಹೋದರೆ ನೀವು ಅದನ್ನೆಂದಿಗೂ ನೋಡಲಾರಿರಿ. ನಿಮಗೆ "ಓಹ್, ಅಲ್ಲಿ ಏನೋ ಒಂದಿದೆ" ಎಂಬ ಒಂದು ಬಗೆಯ ಅಸ್ಪಷ್ಟ ಕಲ್ಪನೆ ಬರಬಹುದು, ಆದರೆ ನಿಮಗೆ ದೊರಕುವುದು ಅದಿಷ್ಟೇ. ಸ್ವಾಭಾವಿಕವಾಗಿ, ಆ ದೈವೀ ಭವ್ಯತೆ ಕುರಿತು ಎಳ್ಳಷ್ಟೂ ಕಾಳಜಿ ವಹಿಸದ ಜನರಿರುತ್ತಾರೆ, ಅವರು ಅದಕ್ಕೆ ತಮ್ಮ ಬೆನ್ನು ತಿರುಗಿಸುತ್ತಾರೆ, ತಮ್ಮ ಸಹಜ ಗುಣದ ಪ್ರಕಾರ ಜೀವಿಸುತ್ತಾರೆ, ಅವರು ಪಶುಗಳಿದ್ದ ಹಾಗೆ, ಅಲ್ಪ ರೀತಿಯಲ್ಲಿ ಪರಿಪೂರ್ಣಗೊಂಡವರು. ಅವರನ್ನು ಕುರಿತು ಮಾತನಾಡುವುದು ಬೇಡ. ಅವರಿಗೆ ಇಷ್ಟವಾದದ್ದನ್ನು ಅವರು ಕೈಕೊಳ್ಳಲು ಅವರನ್ನು ಬಿಟ್ಟುಕೊಡಬೇಕು, ಅದು ಎಳ್ಳಷ್ಟೂ ಮಹತ್ವದ್ದಲ್ಲ. ಅವರ ಪರಿಣಾಮ ನಮ್ಮ ಮೇಲಾಗುವುದಿಲ್ಲ. ಈ ವಿಷಯಗಳನ್ನು ಅವರಿಗಾಗಿ ನಾನು ಬರೆದಿಲ್ಲ.

**CWM, 5/101–02** **– ಶ್ರೀಮಾತೆ**

*

ದೇವನ ಪ್ರೇಮಕ್ಕೆ ಮುಂದಿನ ಅತಿ ಶ್ರೇಷ್ಠ ಅತ್ಯಾನಂದ, ಮಾನವರಲ್ಲಿ ದೇವನ ಆನಂದವಾಗಿರುತ್ತದೆ, ಅಲ್ಲಿಯೂ ಕೂಡ ಮನುಷ್ಯನಿಗೆ ಅನೇಕ ರೀತಿಯಲ್ಲಿ ದೊರಕುವ ಆನಂದವಿರುತ್ತದೆ.

**– ಶ್ರೀಮಾತೆ**

*

## ಪ್ರೀತಿಸುವುದಕ್ಕೆ ಸರಳವಾಗಿ ಸಂತೋಷದಿಂದಿರುವುದು

ಆದ್ದರಿಂದ ಪ್ರೇಮ ಬಂದಾಗ, ಅದು ಯಾವುದೇ ರೂಪದಲ್ಲಿರಲಿ ಅನುಸರಿಸಬೇಕಾದ ಅತ್ಯಂತ ಒಳ್ಳೆಯ ರೀತಿ ಅದರ ಬಾಹ್ಯ ರೂಪದಲ್ಲಿ ಸೀಳಿಕೊಂಡು ಹೋಗಲು ಪ್ರಯತ್ನ ಮಾಡುವುದಾಗಿದೆ, ಹಿಂದಿರುವ, ಅದರ ಸಾರವನ್ನು ಕೊಡುವ ದೈವೀ ತತ್ವವನ್ನು ಕಂಡುಕೊಳ್ಳುವುದಾಗಿದೆ. ಸ್ವಾಭಾವಿಕವಾಗಿ, ಅದು ಮೋಹಜಾಲಗಳಿಂದ, ತೊಂದರೆಗಳಿಂದ ತುಂಬಿಕೊಂಡಿರುತ್ತದೆ, ಆದರೆ

ಅದು ಹೆಚ್ಚು ಪರಿಣಾಮಕಾರಿಯಾದದ್ದು. ಎಂದರೆ ಪ್ರೀತಿಸುವುದನ್ನು ನಿಲ್ಲಿಸಿಬಿಡುವುದರ ಬದಲಾಗಿ ಮನುಷ್ಯ ತಪ್ಪಾಗಿ ಪ್ರೀತಿಸುವುದನ್ನು ನಿಲ್ಲಿಸಬೇಕು ಮತ್ತು ಸರಿಯಾಗಿ ಪ್ರೀತಿಸುವುದನ್ನು ಬಯಸಬೇಕು.

ಉದಾಹರಣೆಗೆ ಇಬ್ಬರು ಮಾನವ ಸತ್ತೆಗಳ ನಡುವಿರುವ ಪ್ರೇಮ, ಎಲ್ಲ ರೂಪಗಳಲ್ಲಿ ಇರುವ ಪ್ರೇಮ: ತಂದೆ–ತಾಯಿ ಹಾಗೂ ಮಕ್ಕಳ ನಡುವಿರುವ ಪ್ರೇಮ, ಸಹೋದರ–ಸಹೋದರಿಯರ ನಡುವಿರುವ ಪ್ರೇಮ, ಮಿತ್ರರ ನಡುವಿರುವ ಪ್ರೇಮ, ಪ್ರೇಮಿಗಳ ನಡುವಿರುವ ಪ್ರೇಮ ಇದೆಲ್ಲ ಅಜ್ಞಾನದಿಂದ ಕಳಂಕಿತವಾಗಿರುತ್ತದೆ, ಅದರಲ್ಲಿ ಸ್ವಾರ್ಥ ಹಾಗೂ ಮನುಷ್ಯನ ಸರ್ವಸಾಧಾರಣ ಕುಂದುಕೊರತೆಗಳು ಇರುತ್ತವೆ; ಹಾಗಾಗಿ ಪ್ರೀತಿಸುವುದನ್ನು ಸಂಪೂರ್ಣವಾಗಿ ಬಿಟ್ಟುಕೊಡುವುದರ ಬದಲಾಗಿ – ಶ್ರೀ ಅರವಿಂದರು ಹೇಳಿದ ಹಾಗೆ ಅದು ಬಹಳ ಕಠಿಣವಾದದ್ದು, ಅದು ಕೇವಲ ಹೃದಯವನ್ನು ಬರಡಾಗಿರಿಸುತ್ತದೆ ಮತ್ತು ಯಾವ ಗುರಿಗೂ ಸಹಾಯಕವಾಗುವುದಿಲ್ಲ – ಮನುಷ್ಯ ಹೆಚ್ಚು ಒಳ್ಳೆಯ ರೀತಿಯಲ್ಲಿ ಹೇಗೆ ಪ್ರೀತಿಸಬೇಕು ಎಂಬುದನ್ನು ಕಲಿತುಕೊಳ್ಳಬೇಕು: ಭಕ್ತಿಯಿಂದ, ಸ್ವ–ಅರ್ಪಣೆಯಿಂದ, ಸ್ವ–ಹಿತ ತ್ಯಾಗದಿಂದ ಪ್ರೀತಿಸಬೇಕು, ಪ್ರೇಮದ ವಿರುದ್ಧ ಹೋರಾಡಬಾರದು, ಆದರೆ ಅದರ ವಿರೂಪಗೊಂಡ ರೂಪಗಳ ವಿರುದ್ಧ ಹೋರಾಡಬೇಕು: ಏಕಸ್ವಾಧೀನ ಪಡೆಯುವ, ಆಸಕ್ತಿಯ, ವಶಪಡಿಸಿಕೊಳ್ಳುವಿಕೆಯ, ಅಸೂಯೆಯ ಮತ್ತು ಈ ಮುಖ್ಯ ಚಲನೆಗಳ ಜೊತೆಗೆ ಬರುವ ಎಲ್ಲ ರೂಪಗಳ ವಿರುದ್ಧ ಹೋರಾಡಬೇಕು. ವಶಪಡಿಸಿಕೊಳ್ಳುವಿಕೆಯ, ಪ್ರಾಬಲ್ಯ ಮೆರೆಸುವ ಇಚ್ಛೆ ಇಲ್ಲದೆ ಇರುವುದು. ತನ್ನ ಸಂಕಲ್ಪವನ್ನು, ಲಹರಿಗಳನ್ನು, ಆಸೆಗಳನ್ನು ಇತರರ ಮೇಲೆ ಹೇರಲು ಬಯಸದೆ ಇರುವುದು, ತೆಗೆದುಕೊಳ್ಳಲು, ಸ್ವೀಕರಿಸಲು ಬಯಸದೆ ಕೊಡುವುದನ್ನು ಬಯಸುವುದು, ಇತರರ ಪ್ರತಿಕ್ರಿಯೆಯನ್ನು ಒತ್ತಾಯದಿಂದ ಬೇಡದೆ ಇರುವುದು, ಆದರೆ ತನ್ನದೇ ಪ್ರೇಮದಿಂದ ತೃಪ್ತಿಯಿಂದಿರುವುದು, ತನ್ನದೇ ವೈಯಕ್ತಿಕ ಪ್ರಯೋಜನವನ್ನು, ಸಂತೋಷವನ್ನು ಮತ್ತು ವೈಯಕ್ತಿಕ ಆಸೆಯ ನೆರವೇರಿಕೆಯನ್ನು ಅರಸದೆ ಇರುವುದು, ಆದರೆ ತನ್ನ ಪ್ರೇಮವನ್ನು ಮತ್ತು ಒಲವನ್ನು ಕೊಡುವುದರಿಂದ ತೃಪ್ತಿಪಡೆಯಬೇಕು, ಮತ್ತು ಯಾವುದೇ ಪ್ರತಿಕ್ರಿಯೆಯನ್ನು ಕೇಳಬಾರದು. ಕೇವಲ ಪ್ರೀತಿಸುವುದರಿಂದ ಸಂತುಷ್ಟರಾಗಬೇಕು ಹೆಚ್ಚಿನದೇನೂ ಇಲ್ಲ.

ನೀವದನ್ನು ಕೈಕೊಂಡರೆ ಭವ್ಯ ಹೆಜ್ಜೆಯೊಂದನ್ನು ಮುಂದಿರಿಸಿರುತ್ತೀರಿ, ಮತ್ತು ಈ ಮನೋಭಾವದ ಮೂಲಕ ಕ್ರಮೇಣ ಭಾವನೆಯಲ್ಲಿಯೇ ಸ್ವತಃ ಇನ್ನೂ ಹೆಚ್ಚು

ದೂರ ಮುನ್ನಡೆ ಸಾಧಿಸುವಿರಿ ಮತ್ತು ಒಂದು ದಿನ ಪ್ರೇಮ ವೈಯಕ್ತಿಕವಾದದ್ದಲ್ಲ ಎಂಬ ಅರಿವನ್ನು ಪಡೆಯುವಿರಿ, ಅದು ವಿಶ್ವಂಭರ ದೈವೀ ಭಾವನೆ, ಅದು ನಿಮ್ಮ ಮೂಲಕ ಹೆಚ್ಚು ಕಡಿಮೆ ಸೊಗಸಾಗಿ ಪ್ರಕಟವಾಗುತ್ತದೆ, ಆದರೆ ಅದು ಸಾರದಲ್ಲಿ ದೈವಿಕವಾದ ಏನೋ ಒಂದು.

**CWM, 8/301–02** **– ಶ್ರೀಮಾತೆ**

*

## ಸ್ವಾರ್ಥಿಯಾಗಿರುವುದನ್ನು ನಿಲ್ಲಿಸಬೇಕಾದುದು ಮೊದಲ ಹೆಜ್ಜೆ

ಮೊದಲ ಹೆಜ್ಜೆ ಸ್ವಾರ್ಥಿಯಾಗಿರುವುದನ್ನು ನಿಲ್ಲಿಸುವುದಾಗಿದೆ. ಪ್ರತಿಯೊಬ್ಬ–ನಿಗೂ ಎಂದರೆ ಯೋಗ ಕೈಕೊಳ್ಳುವವರಿಗಷ್ಟೇ ಅಲ್ಲ, ಆದರೆ ಸರ್ವಸಾಮಾನ್ಯ ಜೀವನದಲ್ಲಿ ಕೂಡ ವಿಷಯ ಅದೇ ಆಗಿದೆ. ಹೇಗೆ ಪ್ರೀತಿಸಬೇಕು ಎಂಬುದನ್ನು ತಿಳಿದುಕೊಳ್ಳಲು ಬಯಸುವ ಮನುಷ್ಯ ಮೊಟ್ಟಮೊದಲಿಗೆ ಸ್ವಾರ್ಥಿಯಾಗಿ ತನ್ನನ್ನೇ ಪ್ರೀತಿಸಬಾರದು, ಅವನು ಪ್ರೀತಿಸುವ ವಿಷಯಕ್ಕೆ ಪ್ರತಿಯಾಗಿ ಏನನ್ನೂ ಒತ್ತಾಯದಿಂದ ಕೇಳದೆ ಪ್ರೀತಿಸಬೇಕು, ತನ್ನನ್ನು ಕೊಟ್ಟುಕೊಳ್ಳಬೇಕು. ತನ್ನ ಮೇಲೆ ಜಯ ಸಾಧಿಸುವುದಕ್ಕೆ ಮತ್ತು ಒಟ್ಟಿನಲ್ಲಿ ಒರಟಾಗಿರುವ ಜೀವನ ನಡೆಸದೆ ಇರುವುದಕ್ಕೆ ಇದು ಪ್ರಾಥಮಿಕ ಶಿಸ್ತುಪಾಲನೆ.

ಯೋಗವನ್ನು ಕುರಿತು ಹೇಳುವುದಾದರೆ ನಾವು ಬೇರೆ ಇನ್ನೊಂದು ವಿಷಯವನ್ನು ಅದಕ್ಕೆ ಅಧಿಕವಾಗಿ ಸೇರಿಸಬಹುದು, ಅದು ನಾನು ಪ್ರಾರಂಭದಲ್ಲೇ ಹೇಳಿದ ಹಾಗೆ ಈ ಸೀಮಿತ ಮಾನವ ರೀತಿಯ ಪ್ರೇಮವನ್ನು ಸೀಳಿಕೊಂಡು ಹೋಗುವುದಕ್ಕೆ ಮತ್ತು ಅದರ ಹಿಂದಿರುವ ದೈವೀಪ್ರೇಮದ ತತ್ವವನ್ನು ಶೋಧಿಸುವುದಕ್ಕಾಗಿ ಸಂಕಲ್ಪ ಮಾಡುವುದಾಗಿದೆ. ಆಗ ಮನುಷ್ಯ ಪರಿಣಾಮವನ್ನು ಕಂಡುಕೊಳ್ಳುವುದು ಖಚಿತ. ಮನುಷ್ಯ ತನ್ನ ಹೃದಯವನ್ನು ಬರಡಾಗಿಸುವು–ದಕ್ಕಿಂತ ಎಲ್ಲ ರೀತಿಯಲ್ಲಿ ಹೆಚ್ಚು ಒಳ್ಳೆಯದು, ಅದು ಬಹುಶಃ ಸ್ವಲ್ಪ ಹೆಚ್ಚು ಕಠಿಣವಾದದ್ದು, ಆದರೆ ಅಹಂಮನ್ಯತೆಯಿಂದ ಇತರರು ವೇದನೆಗೆ ಒಳಗಾಗುವಂತೆ ಮಾಡುವುದಕ್ಕಿಂತ ಅದು ಪ್ರತಿಯೊಂದು ರೀತಿಯಲ್ಲಿ ಒಳ್ಳೆಯದು, ಅವರು ತಮ್ಮದೇ ಚಲನೆಯಲ್ಲಿ ಅಚಂಚಲರಾಗಿರುವಂತೆ ಮನುಷ್ಯ ಅವರನ್ನು ಬಿಟ್ಟುಕೊಡಬಹುದು, ಕೇವಲ ತನ್ನ ಸಂಕಲ್ಪವನ್ನು ಇತರರ ಮೇಲೆ ಹೇರದೆ ತನ್ನನ್ನು ಪರಿವರ್ತನೆಗೊಳಿಸಿ–ಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅದು ಸಾಮಾನ್ಯ ಜೀವನದಲ್ಲಿಯೂ ಕೂಡ

ಉಚ್ಚತರವಾದ ಹಾಗೂ ಸ್ವಲ್ಪ ಸಾಮರಸ್ಯದಿಂದಿರುವ ಏನೋ ಒಂದರತ್ತ ಇಡುವ ಹೆಜ್ಜೆ.

**CWM, 8/302** **– ಶ್ರೀಮಾತೆ**

*

ತನ್ನನ್ನು ಕೊಟ್ಟುಕೊಳ್ಳುವುದು, ಒತ್ತಾಯದ ಬೇಡಿಕೆಯನ್ನಿರಿಸುವುದರಿಂದ ಮುಕ್ತವಾಗಿರುವುದು, ಅಧೀನವಾಗುವುದು ಹಾಗೂ ಶರಣಾಗತಿಯಿಂದ ತುಂಬಿ– ಕೊಂಡಿರುವುದು, ಯಾವುದೇ ಹಕ್ಕನ್ನು ಸಾಧಿಸದೆ ಇರುವುದು, ಯಾವುದೇ ನಿಬಂಧನೆಯನ್ನು ಇರಿಸದಿರುವುದು, ಅಸೂಯೆ ಇಲ್ಲವೆ ಗರ್ವ ಇಲ್ಲವೆ ಕ್ರೋಧ ಇವುಗಳ ಹಿಂಸೆಯೊಂದಿಗೆ ಲೋಲನಾಗದೆ ಇರುವುದು ಇದೆಲ್ಲ ಭಗವಂತನಿಗೆ ನಿಜವಾದ ಪ್ರೇಮ ತೋರಿಸುವುದಾಗಿದೆ– ಏಕೆಂದರೆ ಈ ವಿಷಯಗಳು ಆ ಪ್ರೇಮದ ಸ್ವಭಾವದಲ್ಲಿರುವುದಿಲ್ಲ.

**CWM,** **– ಶ್ರೀಮಾತೆ**

*

## ನಿಜವಾದ ಪ್ರೇಮ ಮತ್ತು ಪ್ರೇಮ ಕುರಿತು ಮಾನವನ ಭಾವನೆಗಳು

ಈ ಎಲ್ಲ ಭಾವನೆಗಳಿಗೆ – ಅವುಗಳನ್ನು ಏನೆಂದು ಕರೆಯಬೇಕು? – ಒಂದು ಪ್ರಕಾರದ ಕಂಪನವಿರುತ್ತದೆ, ತಿರುಳಿನಲ್ಲಿ ಸಾರಭೂತವಾದ ಏನೋ ಒಂದು ಪದರುಗಳನ್ನು ಆವರಿಸಿದ ಹಾಗಿರುತ್ತದೆ. ಅತ್ಯಂತ ಕೇಂದ್ರದಲ್ಲಿರುವ ಕಂಪನ ಅದೇ ಬಗೆಯದಾಗಿರುತ್ತದೆ ಮತ್ತು ಅದು ತನ್ನನ್ನು ಅಭಿವ್ಯಕ್ತಗೊಳಿಸಲು ವಿಸ್ತರಿಕೊಳ್ಳುತ್ತಿದ್ದ ಹಾಗೆ ವಿರೂಪಕ್ಕೊಳಗಾಗುತ್ತದೆ. ಪ್ರೇಮದೊಂದಿಗೆ ಇದು ಬಹಳ ಸ್ಪಷ್ಟವಾದದ್ದು. ಅದು ಬಾಹ್ಯದಲ್ಲಿ, ಬಹಳಷ್ಟು ಸಂದರ್ಭಗಳಲ್ಲಿ ಆಂತರಿಕ ಕಂಪನದಿಂದ ಬಹಳ ಭಿನ್ನ ಸ್ವಭಾವವುಳ್ಳ ಏನೋ ಒಂದಾಗಿರುತ್ತದೆ, ಏಕೆಂದರೆ ಅದು ತನ್ನನ್ನು ತನ್ನೊಳಗೇ ಎಳೆದುಕೊಳ್ಳುವ ಸುಕ್ಕುಗಟ್ಟುವ ಮತ್ತು ವಿಷಯಗಳನ್ನು ಅಹಂಕಾರದಿಂದ ವಶವರ್ತಿ ಮಾಡಿಕೊಳ್ಳುವ ಚಲನೆಯಿಂದ ತನ್ನತ್ತ ಎಳೆದುಕೊಳ್ಳುವ ಏನೋ ಒಂದು. ನಿಮ್ಮನ್ನು ಪ್ರೀತಿಸಬೇಕಾಗಿರುತ್ತದೆ. ನೀವು "ಆ ವ್ಯಕ್ತಿಯನ್ನು ಪ್ರೀತಿಸುತ್ತೇನೆ" ಎಂದು ಹೇಳುತ್ತೀರಿ, ಆದರೆ ಅದೇ ವೇಳೆಗೆ ಅಲ್ಲಿ "ನನ್ನನ್ನು ಪ್ರೀತಿಸಬೇಕು" ಎಂಬ ಭಾವನೆಯ ಬಯಕೆ ಜೀವಿಸುತ್ತಿರುತ್ತದೆ ಮತ್ತು ಹಾಗಾಗಿ ಈ ವಿರೂಪಗೊಳ್ಳುವಿಕೆ, ಬಹುಮಟ್ಟಿಗೆ, ದ್ವೇಷದಿಂದಾಗುವ ವಿರೂಪಗೊಳ್ಳುವಷ್ಟೇ ಭವ್ಯವಾಗಿರುತ್ತದೆ, ಈ

ದ್ವೇಷ ನೀವು ಪ್ರೀತಿಸುವುದನ್ನು ಹಾಳು ಮಾಡುವುದರಲ್ಲಿರುತ್ತದೆ, ನೀವು ಅದರ (ಆ ಪ್ರೇಮದ) ಬಂಧನಕ್ಕೆ ಒಳಗಾಗಲು ಬಯಸುವುದಿಲ್ಲ. ನೀವು ಪ್ರೀತಿಸಿದ್ದರಿಂದ ನಿಮಗೆ ಬೇಕಾದುದನ್ನು ದೊರಕಿಸಲು ಸಾಧ್ಯವಾಗುತ್ತಿಲ್ಲ ಎಂಬ ಕಾರಣದಿಂದಾಗಿ ಅದರಿಂದ ಮುಕ್ತವಾಗಿರಲು ಅದನ್ನು ನಾಶಪಡಿಸಲು ಬಯಸುತ್ತೀರಿ, ಇನ್ನೊಂದು ಸಂದರ್ಭದಲ್ಲಿ ಆಂತರಿಕ ಕ್ರೋಧದಿಂದ ಬಹುಮಟ್ಟಿಗೆ ಸುಕ್ಕುಗಟ್ಟಿ ಹೋಗುತ್ತೀರಿ, ಏಕೆಂದರೆ ನೀವು ಪ್ರೀತಿಸಿದ್ದನ್ನು ದೊರಕಿಸಲಾಗಿರುವುದಿಲ್ಲ, ಹೀರಿಕೊಳ್ಳಲಾಗಿ–ರುವುದಿಲ್ಲ. ನಿಜ ಹೇಳುವುದಾದರೆ (ನಗುತ್ತ) ಆಳವಾದ ಸತ್ಯದ ದೃಷ್ಟಿಕೋನದಿಂದ ಇವೆರಡು ರೀತಿಗಳಲ್ಲಿ ಬಹಳ ವ್ಯತ್ಯಾಸವಿರುವುದಿಲ್ಲ! ಕೇಂದ್ರದಲ್ಲಿರುವ ಕಂಪನ ಪರಿಶುದ್ಧವಾಗಿ ಉಳಿದುಕೊಂಡಾಗ ಮಾತ್ರ ಮತ್ತು ತನ್ನನ್ನು ತನ್ನ ಪ್ರಾರಂಭದ ಪರಿಶುದ್ಧತೆಯೊಂದಿಗೆ ಅಭಿವ್ಯಕ್ತಗೊಳಿಸುತ್ತಿದ್ದಾಗ ಮಾತ್ರ – ಅದು ಒಂದು ಬಗೆಯ ತೆರೆದುಕೊಳ್ಳುವಿಕೆಯಾಗಿರುತ್ತದೆ, ಅದನ್ನು ಏನೆಂದು ಕರೆಯಬೇಕು? – ಅದು ಹೊರಸೂಸುತ್ತಿರುವ ಏನೋ ಒಂದು, ತನ್ನ ಭವ್ಯತೆಯನ್ನು ಹರಡಿಕೊಳ್ಳುತ್ತಿರುವ ಒಂದು ಕಂಪನ; ಅದು ಅರಳಿಕೊಳ್ಳುವಿಕೆ, ಹೌದು ಹೊರಸೂಸುತ್ತಿರುವ ಅರಳಿಕೊಳ್ಳುವಿಕೆ – ಆಗ ಅದು ನಿಜವಾಗಿ ಉಳಿದುಕೊಳ್ಳುತ್ತದೆ. ಪ್ರಾಪಂಚಿಕ ರೀತಿಯಲ್ಲಿ ಅದನ್ನು ಸ್ವ–ಕೊಟ್ಟುಕೊಳ್ಳುವಿಕೆ, ಸ್ವ–ವಿಸ್ಮರಣೆ, ಆತ್ಮದ ಔದಾರ್ಯ ಎಂದು ತರ್ಜುಮೆ ಮಾಡಬಹುದು. ಮತ್ತು ಅದೊಂದೇ ನಿಜವಾದ ಚಲನೆ. ಆದರೆ ಪ್ರೇಮ ಎಂದು ಸಾಮಾನ್ಯವಾಗಿ ಕರೆಯಲಾಗುವುದು, ದ್ವೇಷವಿರುವ ಹಾಗೆ, ಕೇಂದ್ರದಿಂದ ಬಹಳ ದೂರವಿರುತ್ತದೆ. ಮನುಷ್ಯ ಕೇವಲ ಹಿಂದೆಗೆಯುತ್ತಾನೆ, ಸುಕ್ಕುಗಟ್ಟಿಸಿಕೊಳ್ಳುತ್ತಾನೆ ಮತ್ತು ಕಠಿಣ ಹೃದಯದವನಾಗುತ್ತಾನೆ, ಮತ್ತು ಇನ್ನೊಂದು ಅದಕ್ಕೆ ಹೊಡೆತ ಕೊಡುತ್ತದೆ. ಇದೇ ಅಲ್ಲಿರುವ ಎಲ್ಲ ವ್ಯತ್ಯಾಸವನ್ನು ಉಂಟುಮಾಡುತ್ತದೆ.

**CWM, 10/214–15** **– ಶ್ರೀಮಾತೆ**

*

## ದೈವೀಪ್ರೇಮ ಯಾವಾಗಲೂ ಅಲ್ಲಿರುತ್ತದೆ

ದೈವೀಪ್ರೇಮ ತನ್ನ ಎಲ್ಲ ಗಾಢತೆಯೊಂದಿಗೆ, ಅಗಾಧ ಸಾಮರ್ಥ್ಯ–ದಿಂದೊಡಗೂಡಿ, ಯಾವಾಗಲೂ, ಅಲ್ಲಿರುತ್ತದೆ. ಆದರೆ ಶೇಕಡಾ 90ರಷ್ಟು ಜನರು ಅದರ ಬಗ್ಗೆ ಯಾವ ಭಾವನೆಯನ್ನೂ ತಂದುಕೊಳ್ಳುವುದಿಲ್ಲ. ಅದರ ಬಗ್ಗೆ ಅವರು ಭಾವನೆ ತಂದುಕೊಳ್ಳುವುದು, ಪ್ರತ್ಯೇಕವಾಗಿ, ಅವರಿರುವ ಪ್ರಮಾಣದಲ್ಲಿರುತ್ತದೆ,

ಅದು ಸ್ವೀಕರಿಸುವ ಕ್ಷಮತೆಗನುಗುಣವಾಗಿರುತ್ತದೆ. ಉದಾಹರಣೆಗೆ ದೈವೀ ಪ್ರೇಮದಿಂದ ಕಂಪಿಸುತ್ತಿರುವ ವಾತಾವರಣದಲ್ಲಿ ಜಳಕ ಮಾಡುತ್ತಿದ್ದೀರಿ ಎಂದು ಕಲ್ಪಿಸಿಕೊಳ್ಳಿರಿ – ನಿಮಗೆ ಅದರ ಬಗ್ಗೆ ಕಿಂಚಿತ್ತೂ ಅರಿವಿರುವುದಿಲ್ಲ. ಕೆಲವೊಮ್ಮೆ, ಬಹಳ ಅಪರೂಪಕ್ಕೆ, ಕೆಲವು ಸೆಕೆಂಡುಗಳ ಕಾಲ ಅಲ್ಲಿ ಹಠಾತ್ತನೆ ಏನೋ ಒಂದರ ಭಾವನೆ ಇರುತ್ತದೆ.

ಆಗ ನೀವು ಹೇಳುತ್ತೀರಿ "ದೈವೀಪ್ರೇಮ ನನಗೆ ಬಂದಿತು!" ಎಂದು, ಎಂತಹ ಮೋಜಿನ ವಿಷಯ! ಕೇವಲ ನೀವು ಒಂದು ಇಲ್ಲವೆ ಇನ್ನೊಂದು ಕಾರಣಕ್ಕಾಗಿ ಸ್ವಲ್ಪ ತೆರೆದಿರಿಸಿಕೊಂಡಿದ್ದೀರಿ, ಹಾಗಾಗಿ ನಿಮಗೆ ಅದರ ಭಾವನೆ ಬಂದಿತು. ಅದು ಯಾವಾಗಲೂ ದೈವೀ ಪ್ರಜ್ಞೆಯ ರೂಪದಲ್ಲಿ ಅಲ್ಲಿದೆ. ಅದು ಅದೇ ವಿಷಯ, ಎಲ್ಲ ಕಾಲದಲ್ಲಿ ಅದು ಅಲ್ಲಿದೆ, ಅದರ ಪೂರ್ತಿ ಗಾಢತೆಯೊಂದಿಗಿದೆ, ಆದರೆ ಮನುಷ್ಯ ಅದರ ಬಗ್ಗೆ ಅರಿವು ತಂದುಕೊಂಡಿರುವುದಿಲ್ಲ. ಇಲ್ಲವೆ ಆಗೊಮ್ಮೆ ಈಗೊಮ್ಮೆ: ಮನುಷ್ಯ ಒಳ್ಳೆಯ ಸ್ಥಿತಿಯಲ್ಲಿರುತ್ತಾನೆ, ಹಾಗಾಗಿ ಏನನ್ನೋ ಭಾವನೆಗೆ ತಂದುಕೊಳ್ಳುತ್ತಾನೆ ಮತ್ತು "ಓಹ್ ದೈವೀ ಪ್ರಜ್ಞೆ, ದೈವೀ ನಿಯಮ ನನ್ನತ್ತ ಹೊರಳಿವೆ" ಎಂದು ಹೇಳುತ್ತಾನೆ. ಅದು ಹಾಗಿರುವುದಿಲ್ಲವೇ ಇಲ್ಲ. ಮನುಷ್ಯನಲ್ಲಿ ಟಾಚನಿ (pin)ಯ ತಲೆಯ ಗಾತ್ರದಷ್ಟು ಅತಿ ಚಿಕ್ಕ ತೆರೆದಿರಿಸಿಕೊಳ್ಳುವಿಕೆ ಇರುತ್ತದೆ ಮತ್ತು ಸ್ವಾಭಾವಿಕವಾಗಿ, ಆ ಶಕ್ತಿ ರಭಸದಿಂದ ಒಳಗೆ ನುಗ್ಗುತ್ತದೆ. ಏಕೆಂದರೆ ಅದು ಕ್ರಿಯಾಶೀಲ ವಾತಾವರಣವಿದ್ದ ಹಾಗಿರುತ್ತದೆ; ಸ್ವೀಕರಿಸುವ ಸಾಧ್ಯತೆ ಕಂಡುಬಂದ ಕೂಡಲೆ ಅದನ್ನು ಸ್ವೀಕರಿಸಲಾಗುವುದು. ಆದರೆ ಇದು ಎಲ್ಲ ದೈವಿಕ ವಿಷಯಗಳಿಗೆ ಅದೇ ರೀತಿಯದಾಗಿರುತ್ತದೆ. ಅವು ಅಲ್ಲಿರುತ್ತವೆ, ಕೇವಲ ಮನುಷ್ಯ ಅವುಗಳನ್ನು ಸ್ವೀಕರಿಸುವುದಿಲ್ಲ, ಏಕೆಂದರೆ ಅವನು ಮುಚ್ಚಿಹಾಕಿಕೊಂಡಿರುತ್ತಾನೆ, ಅಡಚಣೆಗೊಳ–ಗಾಗಿರುತ್ತಾನೆ, ಬಹಳಷ್ಟು ಸಮಯದಲ್ಲಿ ಮನುಷ್ಯ ಇತರ ವಿಷಯಗಳೊಂದಿಗೆ ವ್ಯವಹರಿಸುತ್ತ ಇರುತ್ತಾನೆ. ಬಹಳಷ್ಟು ಸಮಯದಲ್ಲಿ ಮನುಷ್ಯ ತನ್ನನ್ನು ತನ್ನಲ್ಲೇ ತುಂಬಿಕೊಂಡಿರುತ್ತಾನೆ, ಬೇರೆ ಯಾವುದಕ್ಕೂ ಸ್ಥಾನವಿರುವುದಿಲ್ಲ. ಮನುಷ್ಯ ಬಹಳ ಕ್ರಿಯಾಶೀಲವಾಗಿ (ನಗುತ್ತ) ಬೇರೆ ವಿಷಯಗಳಲ್ಲಿ ಆಸಕ್ತನಾಗಿರುತ್ತಾನೆ, ಮನುಷ್ಯ ವಿಷಯಗಳಿಂದ ತುಂಬಿಕೊಂಡಿರುತ್ತಾನೆ, ಭಗವಂತನಿಗಾಗಿ ಸ್ಥಳವಿರುವುದಿಲ್ಲ. ಆದರೆ ಭಗವಂತ ಅಲ್ಲಿರುತ್ತಾನೆ.

**CWM, 6/135–36** **– ಶ್ರೀಮಾತೆ**

*

# ಜೀವನದಲ್ಲಿ ವಿಪತ್ತುಗಳು ಮತ್ತು ದೈವೀಪ್ರೇಮ

ದೈವೀ ಪರಿಪೂರ್ಣತೆಗಾಗಿ ಅಭೀಪ್ಸೆಪಡುವವರು, ಭಗವಂತ ತನ್ನ ಅನಂತ ಪ್ರೇಮ ಹಾಗೂ ಕೃಪೆಗಳ ಮೂಲಕ ನಮ್ಮೊಡನೆ ವ್ಯವಹರಿಸುವ ವಿಪತ್ತುಗಳು, ನಾವು ಪ್ರಗತಿ ಸಾಧಿಸುವುದಕ್ಕೆ ಅತ್ಯಂತ ಸುನಿಶ್ಚಿತತೆ ಮತ್ತು ತೀವ್ರಗತಿ ಇರುವ ಮಾರ್ಗವಾಗಿರುತ್ತದೆ ಎಂದು ತಿಳಿದುಕೊಂಡಿರುತ್ತಾರೆ ಮತ್ತು ವಿಪತ್ತುಗಳು ಹೆಚ್ಚು ಕಠಿಣವಾದ ಹಾಗೆ ಅವರು ದೈವೀಪ್ರೇಮದ ಶ್ರೇಷ್ಠತೆಯನ್ನು ಭಾವನೆಗೆ ತಂದುಕೊಳ್ಳುತ್ತಾರೆ.

ಸಾಮಾನ್ಯ ಜನರು, ತದ್ವಿರುದ್ಧವಾಗಿ, ತಮಗೆ ಸುಲಭ, ಹರ್ಷದಾಯಕ ಮತ್ತು ಯಶಸ್ವಿ ಜೀವನವನ್ನು ಕೊಡು ಎಂದು ಭಗವಂತನನ್ನು ಕೇಳುತ್ತಾರೆ, ಪ್ರತಿಯೊಂದು ವೈಯಕ್ತಿಕ ತೃಪ್ತಿಯಲ್ಲಿ ಅವರು ದೈವೀ ಕರುಣೆಯ ಕುರುಹನ್ನು ಕಂಡುಕೊಳ್ಳುತ್ತಾರೆ, ಆದರೆ, ತದ್ವಿರುದ್ಧವಾಗಿ, ಅವರು ಜೀವನದಲ್ಲಿ ಅಸಂತೋಷವನ್ನು ಹಾಗೂ ದುರ್ದೈವವನ್ನು ಭೇಟಿ ಮಾಡಿದರೆ ದೂರುತ್ತಾರೆ ಮತ್ತು ಭಗವಂತನಿಗೆ "ನೀನು ನನ್ನನ್ನು ಪ್ರೀತಿಸುತ್ತಿಲ್ಲ" ಎಂದು ಹೇಳುತ್ತಾರೆ.

ಈ ಒರಟು ಹಾಗೂ ಅಜ್ಞಾನಿ ಮನೋಭಾವಕ್ಕೆ ವಿರುದ್ಧವಾಗಿ ಶ್ರೀ ಅರವಿಂದರು "ಹೊಡೆತ ಕೊಡು, ಬಲವತ್ತರವಾದ ಹೊಡೆತ ಕೊಡು, ಅದರಿಂದಾಗಿ ನಿನ್ನ ಪ್ರೇಮದ ಗಾಢತೆಯ ಭಾವನೆಯನ್ನು ನಾನು ತಂದು–ಕೊಳ್ಳುವಂತಾಗಲಿ" ಎಂದು ಹೇಳುತ್ತಾರೆ.

ನಾವು ನಿರೀಕ್ಷಿಸಿರದ, ಭರವಸೆ ತಾಳಿರದ, ಬಯಸದೆ ಇದ್ದ, ನಮ್ಮ ಆಸೆಗೆ ವಿರುದ್ಧವಾಗಿರುವ ಸಂಗತಿಗಳು ಸಂಭವಿಸಿದಾಗ ನಮ್ಮ ಅಜ್ಞಾನದಲ್ಲಿ, ಅವುಗಳನ್ನು ದುರ್ದೈವದ ಸಂಗತಿಗಳೆಂದು ಕರೆಯುತ್ತೇವೆ ಹಾಗೂ ಗೋಳಿಡುತ್ತೇವೆ. ನಾವು ಸ್ವಲ್ಪ ಜಾಣರಾದರೆ ಮತ್ತು ಇವೇ ಘಟನೆಗಳ ಆಳಾತಿ ಆಳದ ಪರಿಣಾಮಗಳನ್ನು ಅವಲೋಕಿಸಿದರೆ ಅವು ನಮ್ಮನ್ನು ತೀವ್ರಗತಿಯಿಂದ ನಮ್ಮ ಪ್ರೇಮಿ ಭಗವಂತನತ್ತ ಕರೆದೊಯ್ಯುತ್ತಿರುವುದನ್ನು ನೋಡುತ್ತೇವೆ. ಅದು ಹಾಗಿರುವಾಗ ಸುಲಭ ಹಾಗೂ ಹರ್ಷದಾಯಕ ಪರಿಸ್ಥಿತಿಗಳು (ಆಧ್ಯಾತ್ಮಿಕ) ಮಾರ್ಗದಲ್ಲಿ ಚಕ್ಕಂದವಾಡುತ್ತ ಹರ್ಷ ನೀಡುವ ಹೂವುಗಳನ್ನು ಕಿತ್ತುಕೊಳ್ಳಲು ತಡೆದು ನಿಲ್ಲುವಂತೆ ಪ್ರೋತ್ಸಾಹ ನೀಡುತ್ತವೆ, ಅವು ತಮ್ಮನ್ನು ನಮ್ಮ ಮುಂದಿರಿಸುತ್ತವೆ, ಅವುಗಳನ್ನು ನಿರ್ಧಾರಕವಾಗಿ ತಿರಸ್ಕರಿಸಲು ನಾವು ಸಾಕಷ್ಟು ನಿಷ್ಕಪಟರಾಗಿರುವುದಿಲ್ಲ, ಬಹಳ ದುರ್ಬಲರಾಗಿ–

ರುತ್ತೇವೆ. ಅವುಗಳನ್ನು ತಿರಸ್ಕರಿಸುವುದರಿಂದ ನಮ್ಮ ಮುನ್ನಡೆಗೆ ತಡೆ ಉಂಟಾಗುವುದಿಲ್ಲ. ಮನುಷ್ಯ ಅದಾಗಲೇ ಬಹಳ ದೂರದವರೆಗೆ ಸಾಕಷ್ಟು ಬಲಿಷ್ಠ–ನಾಗಿರಬೇಕು, ಅದರಿಂದಾಗಿ ಅವನು ಹಿಮ್ಮೆಟ್ಟದೆ ಯಶಸ್ಸನ್ನು ಮತ್ತು ಅದು ತರುವ ಚಿಕ್ಕಪುಟ್ಟ ಸಂತೋಷಗಳನ್ನು ಎದುರಿಸಲು ಶಕ್ತನಾಗುವನು. ಇದನ್ನು ಕೈಕೊಳ್ಳಬಲ್ಲವರು, ಬಲಿಷ್ಠರಾದವರು, ಯಶಸ್ಸಿನ ಹಿಂದೆ ಓಡದೆ ಇದ್ದವರು ಅದನ್ನು ಅರಸುವುದಿಲ್ಲ ಮತ್ತು ಉದಾಸೀನತೆಯಿಂದ ಅದನ್ನು ಸ್ವೀಕರಿಸುತ್ತಾರೆ. ಏಕೆಂದರೆ ಅಸಂತೋಷ ಹಾಗೂ ದುರ್ದೈವ ಇವುಗಳು ನೀಡುವ ಹೊಡೆತಗಳ ಬಗ್ಗೆ ಅವರು ತಿಳಿದುಕೊಂಡಿರುತ್ತಾರೆ ಮತ್ತು ಇವುಗಳ ಮೌಲ್ಯವನ್ನು ಗುರುತಿಸಿರುತ್ತಾರೆ. ಕೊನೆಯದಾಗಿ ನಿಜವಾದ ಮನೋಭಾವ, ನಾವು ಗುರಿಯ ಹತ್ತಿರ ಇರುವೆವು ಎಂಬುದರ ಕುರುಹು ಹಾಗೂ ಪ್ರಮಾಣ ಎಂದರೆ ಪರಿಪೂರ್ಣ ಸಮತೆ ಇರುವುದಾಗಿದೆ, ಅದು ಯಶಸ್ಸನ್ನು ಹಾಗೂ ವಿಫಲತೆಯನ್ನು, ಸುದೈವವನ್ನು ಹಾಗೂ ದುರ್ದೈವವನ್ನು, ಸಂತೋಷವನ್ನು ಹಾಗೂ ವೇದನೆಯನ್ನು ಅದೇ ಬಗೆಯ ಪ್ರಶಾಂತತೆಯ ಸಂತೋಷದಿಂದ ಸ್ವೀಕರಿಸುವಂತೆ ಮಾಡುತ್ತದೆ; ಏಕೆಂದರೆ ಇವೆಲ್ಲ ಭಗವಂತ ತನ್ನ ಅನಂತ ತೀವ್ರಾಸಕ್ತಿಯಿಂದ ನಮ್ಮ ಮೇಲೆ ಸುರಿಸುವ ಅತ್ಯದ್ಭುತ ಕಾಣಿಕೆಗಳಾಗಿರುತ್ತವೆ.

**CWM, 10/57–59** **– ಶ್ರೀಮಾತೆ**

*

## ದೈವೀಪ್ರೇಮ ಪರಿವರ್ತನೆಯ ಪರಮೋಚ್ಚ ಸಾಮರ್ಥ್ಯ

ನೀವು ಕೈಕೊಳ್ಳಬೇಕಾದುದೇನೆಂದರೆ ನಿಮ್ಮನ್ನು ದೇವನ ದೈವೀಕೃಪೆಗೆ ಕೊಟ್ಟುಕೊಳ್ಳಬೇಕು, ಏಕೆಂದರೆ ದೈವೀಕೃಪೆಯ ಹಾಗೂ ದೈವೀಪ್ರೇಮದ ಅಡಿಯಲ್ಲಿ, ಮೊದಲ ತೊಡಗಿಕೊಳ್ಳುವಿಕೆ ಸ್ಥಾಪಿತಗೊಂಡ ನಂತರ, ವಿಶ್ವವನ್ನು ಮೇಲಕ್ಕೆತ್ತಿ ಹಿಡಿಯಲು ದೈವೀಕೃಪೆ ಒಪ್ಪಿಕೊಂಡಿದೆ. ದೈವೀಪ್ರೇಮದೊಂದಿಗೆ ಪರಿವರ್ತನೆಯ ಪರಮೋಚ್ಚ ಸಾಮರ್ಥ್ಯವಿದೆ. ಅದಕ್ಕೆ ಈ ಸಾಮರ್ಥ್ಯವಿದೆ, ಏಕೆಂದರೆ ಪರಿವರ್ತನೆಗಾಗಿ ಅದು ತನ್ನನ್ನು ಜಗತ್ತಿಗೆ ಕೊಟ್ಟುಕೊಂಡಿದೆ ಮತ್ತು ಎಲ್ಲೆಡೆ ಪ್ರಕಟವಾಗಿದೆ. ಅದು ಮನುಷ್ಯನಲ್ಲಿ ಒಳ ಸೇರಿದೆಯಷ್ಟೇ ಅಲ್ಲ, ಜಗತ್ತನ್ನು ಅದರ ಮೂಲ ದೈವೀ ಸತ್ಯದತ್ತ ಮರಳಿ ತರಲು ಅದು ಅಣುವಿನಲ್ಲಿ ಮತ್ತು ಅತ್ಯಂತ ಮಬ್ಬಾದ ಭೌತದ್ರವ್ಯದಲ್ಲಿಯೂ ಕೂಡ ಒಳ ಸೇರಿದೆ. ಭಾರತೀಯ ಶಾಸ್ತ್ರ ಗ್ರಂಥಗಳಲ್ಲಿ ಈ ಅವರೋಹಣವನ್ನು ಪರಮೋಚ್ಚ ಯಜ್ಞಾಹುತಿ ಎಂದು

ಕರೆಯಲಾಗಿದೆ. ಆದರೆ ಅಂದು ಮಾನವ ದೃಷ್ಟಿಕೋನದಿಂದ ಯಜ್ಞಾಹುತಿಯಲ್ಲಿ ಇಂತಹದೇನನ್ನಾದರೂ ಮಾನವ ಕೈಕೊಳ್ಳಬೇಕಾಗಿದ್ದರೆ ಅದು ಪ್ರಚಂಡ ಯಜ್ಞಾಹುತಿಯಾಗುತ್ತಿತ್ತು ಎಂದು ಮಾನವ ಮನಸ್ಸು ಯೋಚಿಸುತ್ತದೆ. ಆದರೆ ಭಗವಂತ ಕುಗ್ಗಿಕೊಳ್ಳಲಾರನು, ಯಾವ 'ಯಜ್ಞಾಹುತಿ'ಗಳನ್ನೇ ಮಾಡಲಿ ಅವನ ಅನಂತ ಸಾರ ಎಂದೆಂದಿಗೂ ಕಡಿಮೆಯಾಗಲಾರದು, ದೈವೀಪ್ರೇಮಕ್ಕೆ ನೀವು ತೆರೆದುಕೊಂಡ ತತ್ಕ್ಷಣ ಪರಿವರ್ತನೆಯ ಸಾಮರ್ಥ್ಯವನ್ನು ಸ್ವೀಕರಿಸುತ್ತೀರಿ. ಅದನ್ನು ನೀವು ಪರಿಮಾಣದ ರೂಪದಲ್ಲಿ ಅಳೆಯಲಾರಿರಿ, ಅವಶ್ಯವಾದದ್ದು ನಿಜವಾದ ಸಂಪರ್ಕ, ಏಕೆಂದರೆ ಭಗವಂತನೊಡನೆ ನಿಜವಾದ ಸಂಪರ್ಕ ಒಮ್ಮೆಗೆ ನಿಮ್ಮ ಇಡೀ ಸತ್ತೆಯನ್ನು ತುಂಬಿಬಿಡುವುದಕ್ಕೆ ಸಾಕಾಗುತ್ತದೆ.

**CWM, 3/171–72** **– ಶ್ರೀಮಾತೆ**

*

ಭಗವಂತ ಜೀವನವನ್ನು ಏರ್ಪಡಿಸಿರುವ ರೀತಿ ಹೇಗಿದೆ ಎಂದರೆ ಜಗತ್ತು ಆತ್ಮದ ಪತಿಯಾಗಿದೆ, ಶ್ರೀಕೃಷ್ಣ ಉಪಪತಿಯಾಗಿದ್ದಾನೆ. ನಾವು ಈ ಜಗತ್ತಿಗೆ ಸೇವೆಯ ಸಾಲ ತೀರಿಸಬೇಕಾಗಿದೆ ಮತ್ತು ಅದನ್ನು ನಿಯಮಾನುಸಾರವಾಗಿ ಒತ್ತಾಯಪಡಿಸುವ ಅಭಿಪ್ರಾಯದಿಂದ ಮತ್ತು ನೋವು, ಹರ್ಷಗಳಿರುವ ಸರ್ವಸಾಮಾನ್ಯ ಅನುಭವದಿಂದ ತೀರಿಸಬೇಕಾದ ಬಂಧನಕ್ಕೆ ನಾವು ಒಳಗಾಗಿದ್ದೇವೆ, ಆದರೆ ನಮ್ಮ ಹೃದಯದ ಪೂಜೆ ಮತ್ತು ನಮ್ಮ ಮುಕ್ತ ಹಾಗೂ ರಹಸ್ಯ ಸಂತೋಷ ನಮ್ಮ ದೈವೀ ಪ್ರೇಮಿಗಾಗಿ ಇವೆ.

**CWM, 14/340** **– ಶ್ರೀಮಾತೆ**

*

## ದೈವೀಪ್ರೇಮ ಪರಿವರ್ತನೆಯ ಅತ್ಯಂತ ಪ್ರಭಾವಪೂರ್ಣ ಸಾಮರ್ಥ್ಯ

ಈ ಪರಿವರ್ತನೆ ಶಕ್ಯವಾಗುವಂತೆ ಮಾಡುವ ಸಾಮರ್ಥ್ಯದ ಇಲ್ಲವೆ ಶಕ್ತಿಯ ಸ್ವಭಾವವನ್ನು ನೀವು ತಿಳಿದುಕೊಳ್ಳಲು ಬಯಸಿದರೆ – ವಿಶೇಷವಾಗಿ ಅನಿಷ್ಟಕ್ಕೆ ಮತ್ತು ಸ್ವಲ್ಪಮಟ್ಟಿಗೆ ಕುರೂಪಕ್ಕೆ ಸಂಬಂಧಿಸಿದ್ದು – ಪ್ರೇಮ, ಸ್ಪಷ್ಟವಾಗಿ, ಎಲ್ಲ ಸಾಮರ್ಥ್ಯಗಳಲ್ಲಿ ಅತ್ಯಂತ ಪ್ರಭಾವಪೂರ್ಣವಾದದ್ದು ಹಾಗೂ ಸಮಗ್ರವಾದದ್ದು, ಎಲ್ಲ ಸಂದರ್ಭಗಳಲ್ಲಿ ಅನ್ವಯವಾಗುತ್ತದೆ ಎಂಬ ಕಾರಣದಿಂದ ಸಮಗ್ರವಾದದ್ದು. ಅದು ಪರಿಶುದ್ಧಗೊಳಿಸುವ ಸಾಮರ್ಥ್ಯಕ್ಕಿಂತ ಹೆಚ್ಚು ಸಾಮರ್ಥ್ಯವುಳ್ಳದ್ದು,

ಪರಿಶುದ್ಧಗೊಳಿಸುವ ಸಾಮರ್ಥ್ಯ ಎಲ್ಲ ದುಷ್ಟ ಸಂಕಲ್ಪಗಳನ್ನು ಕರಗಿಸುತ್ತದೆ, ವಿರೋಧಿ ಶಕ್ತಿಗಳ ಮೇಲೆ ಆಳಿಕೆ ನಡೆಸುವ ಪ್ರಭುವಾಗಿರುತ್ತದೆ, ಆದರೆ ಅದಕ್ಕೆ ನೇರವಾಗಿ ಪರಿವರ್ತನೆಗೊಳಪಡಿಸುವ ಸಾಮರ್ಥ್ಯವಿರುವುದಿಲ್ಲ. ಪರಿಶುದ್ಧ-ಗೊಳಿಸುವ ಸಾಮರ್ಥ್ಯ ಮೊದಲು ಕರಗಿಸುತ್ತದೆ, ಅದರಿಂದಾಗಿ ನಂತರ ಪರಿವರ್ತನೆಗೆ ಅನುವು ಮಾಡಿಕೊಡುವಂತಾಗುತ್ತದೆ ಅದು ಒಂದು ರೂಪವನ್ನು ನಾಶಮಾಡುತ್ತದೆ, ಅದರಿಂದಾಗಿ ಅದು ಒಂದು ಒಳ್ಳೆಯದನ್ನು ಸೃಷ್ಟಿಸು-ವಂತಾಗುತ್ತದೆ, ಅದು ಹಾಗಿರುವಾಗ ದೈವೀಪ್ರೇಮ ನಂತರ ಪರಿವರ್ತನೆ ಕೈಕೊಳ್ಳುವುದಕ್ಕಾಗಿ ಕರಗಿಸುವ ಆವಶ್ಯಕತೆ ಕಂಡುಕೊಳ್ಳುವುದಿಲ್ಲ, ಅದು ಪರಿವರ್ತನೆಯನ್ನುಂಟುಮಾಡುವುದಕ್ಕೆ ನೇರವಾದ ಸಾಮರ್ಥ್ಯವನ್ನು ವಶದಲ್ಲಿಟ್ಟು-ಕೊಂಡಿರುತ್ತದೆ. ದೈವೀಪ್ರೇಮ ಜ್ವಾಲೆಯ ಹಾಗಿರುತ್ತದೆ, ಬಿರುಸಾದದ್ದನ್ನು ಬೇಕಾದ ಹಾಗೆ ಹೊಂದಿಕೊಳ್ಳುವಂತೆ ಬದಲು ಮಾಡುತ್ತದೆ, ಮತ್ತು ಈ ಹೊಂದಿಕೊಳ್ಳು-ವಂತಹದನ್ನು ಒಂದು ಬಗೆಯ ಪರಿಶುದ್ಧವಾಗಿರಿಸಿದ ಉಗಿಯಾಗುವಂತೆ ಸಂಸ್ಕರಿಸುತ್ತದೆ – ಅದು ನಾಶ ಮಾಡುವುದಿಲ್ಲ, ಪರಿವರ್ತನೆಗೆ ಒಳಪಡಿಸುತ್ತದೆ.

ಅದರ ಸಾರದಲ್ಲಿ ಹಾಗೂ ಮೂಲದಲ್ಲಿ ದೈವೀಪ್ರೇಮ ಜ್ವಾಲೆಯಿದ್ದ ಹಾಗಿರುತ್ತದೆ, ಶುಭ್ರ ಜ್ವಾಲೆಯಾದ ಅದು ಎಲ್ಲ ವಿರೋಧವನ್ನು ಜಯಿಸುತ್ತದೆ, ಇದನ್ನು ನೀವೇ ಸ್ವತಃ ಅನುಭವಕ್ಕೆ ತಂದುಕೊಳ್ಳಬಹುದು. ನಿಮ್ಮ ಸತ್ತೆಯಲ್ಲಿ ಯಾವುದೇ ತೊಂದರೆ ಇರಲಿ, ಸಂಗ್ರಹವಾದ ದೋಷದ, ಅಜ್ಞಾನದ, ಅಸಮರ್ಥತೆಯ ಮತ್ತು ದುಷ್ಟ ಸಂಕಲ್ಪದ ಭಾರವೆಷ್ಟೇ ಇರಲಿ, ಈ ಪರಿಶುದ್ಧ, ಸಾರಭೂತ, ಪರಮೋಚ್ಚ ಪ್ರೇಮದ ಕ್ಷಣಮಾತ್ರದ್ದು ಸಾಮರ್ಥ್ಯಪೂರ್ಣವಾದ ಜ್ವಾಲೆಯ ಹಾಗೆ ಕರಗಿಸುತ್ತದೆ, ಒಂದು ಕ್ಷಣ ಮತ್ತು ಇಡೀ ಗತಕಾಲ ಮಾಯವಾಗುತ್ತದೆ; ನೀವು ಅದನ್ನು ಅದರ ಸಾರದಲ್ಲಿ ಸ್ಪರ್ಶಿಸಿದ ಕ್ಷಣದಲ್ಲಿ ಇಡೀ ಭಾರವನ್ನು ಕಳೆದುಕೊಳ್ಳುತ್ತೀರಿ.

**CWM, 10/72–73** **– ಶ್ರೀಮಾತೆ**

*

ಅಹಂಕಾರ ಅಲ್ಲಿ ಉಳಿದುಕೊಂಡಿರುವವರೆಗೆ ಮನುಷ್ಯ ಪ್ರೀತಿಸಲಾರ.

ದೈವೀಪ್ರೇಮವಷ್ಟೇ ಪ್ರೀತಿಸಬಲ್ಲದು, ದೈವೀಪ್ರೇಮವಷ್ಟೇ ಅಹಂಕಾರವನ್ನು ಗೆದ್ದುಕೊಳ್ಳಬಲ್ಲನು.

**CWM, 14/121** **– ಶ್ರೀಮಾತೆ**

*

ಜೀವನಕ್ಕಿಂತ ಶ್ರೇಷ್ಠವಾದ, ಮೃತ್ಯುವಿಗಿಂತ ಬಲಿಷ್ಠವಾದ, ಸೌಂದರ್ಯ ಹಾಗೂ ಮೋಹಕತೆ ಕಳೆದು ಹೋಗುವುದನ್ನು ಮೀರಿ ಬದುಕುವ, ಪ್ರೇಮದ ವಸ್ತು–ವಿಷಯ ಕೊಡುವ ಅತ್ಯಧಿಕ ನೋವು ಮತ್ತು ಉಪೇಕ್ಷೆಯನ್ನು ಕಡೆಗಣಿಸುವ, ಬಹಳಷ್ಟು ಸಲ ಶ್ರೇಷ್ಠ ಮತ್ತು ಉಚ್ಚ ಬುದ್ಧಿಮತ್ತೆ ಅದಕ್ಕಿಂತ ಅನಂತಪಟ್ಟು ಕೆಳಗಿರುವುದರ ಮೇಲೆ ಸುರಿಯುವ ಆ ಪ್ರೇಮ ಎಲ್ಲಿಂದ ಬರುತ್ತದೆ? ಯಾವುದೂ ಮೀರಿಹೋಗಲಾಗದ, ಅಲಕ್ಷಿಸುವಿಕೆಯ ಮೇಲೆ ಜೀವಿಸುವ, ಉಪೇಕ್ಷೆ ಮತ್ತು ಕ್ರೌರ್ಯಗಳಿಂದ ಅಭಿವೃದ್ಧಿ ಹೊಂದುವಾಗಿನ ಜ್ವಾಲೆ ಶವ ಸಂಸ್ಕಾರ ಮಾಡುವಾಗಿನ ಜ್ವಾಲೆಯ ನಾಲಿಗೆಗಳಿಗಿಂತ ಮೇಲಕ್ಕೇಳುವಂತಿರುವ, ಸ್ವರ್ಗಕ್ಕೆ ಹೋಗುವಾಗ ನಿಮ್ಮನ್ನು ಅನುಸರಿಸುವ, ನಿಮ್ಮನ್ನು ನರಕದಿಂದ ಹೊರ ತೆಗೆಯುವ ಸ್ತ್ರೀಯ ಆ ಪ್ರೇಮವೇನು? ಈ ಪ್ರೇಮ ಅಸ್ತಿತ್ವದಲ್ಲಿಲ್ಲ ಎಂದು ಹೇಳುವುದು ಬೇಡ ಮತ್ತು ಇಲ್ಲಿರುವ ಎಲ್ಲವೂ ಅಪೇಕ್ಷೆ, ಗರ್ವ, ಅಭಿರುಚಿ, ಸ್ವಾರ್ಥದಿಂದ ಕೂಡಿದ ಹರ್ಷ ಇವುಗಳ ಆಧಾರ ಪಡೆದಿದೆ, ಮತ್ತು ರಾಮ, ಸೀತಾ, ರುರು ಮತ್ತು ಸಾವಿತ್ರಿ ಇವರನ್ನು ಕುರಿತು ಹೇಳಲಾದ ಕತೆಗಳು ಕೇವಲ ಕನಸುಗಳ ಹಾಗೂ ಕಲ್ಪನೆಗಳ ಕತೆಗಳು ಎಂದು ಹೇಳುವುದು ಬೇಡ. ತನ್ನ ದೈವತ್ವದ ಬಗ್ಗೆ ಅರಿವುಳ್ಳ ಮಾನವ ಸ್ವಭಾವ, ಉಪೇಕ್ಷೆಯಿಂದ ಮಾನಹಾನಿ ತರುವ ಪ್ರಕಟನೆಯನ್ನು ಹಿಂದೆ ಚೆಲ್ಲಿಕೊಡುತ್ತದೆ, ಕಾವ್ಯ ಆಶೀರ್ವದಿಸುತ್ತದೆ ಮತ್ತು ಇತಿಹಾಸ ನ್ಯಾಯದರ್ಶಿ ಮಂಡಳ ನೀಡಿದ ತೀರ್ಪನ್ನು ದೃಢೀಕರಿಸುತ್ತದೆ. ದಿವ್ಯಾತ್ಮನನ್ನು ದಿವ್ಯಾತ್ಮ ಗುರುತಿಸುವುದಲ್ಲದೆ ಆ ದೈವೀಪ್ರೇಮ ಬೇರೆ ಏನೂ ಅಲ್ಲ, ಅದನ್ನು ಮಬ್ಬಾದ ರೀತಿಯಲ್ಲಿ ಇಲ್ಲವೆ ಸ್ಪಷ್ಟವಾಗಿ ಕೈಕೊಳ್ಳಬಹುದು, ಅದರಿಂದ ಏಕತೆಯನ್ನು ಹಾಗೂ ಏಕತೆಯ ದಿವ್ಯಾನಂದವನ್ನು ಅರಸುವಂತಾಗುತ್ತದೆ. ಮತ್ತೆ ಹೇಳುವುದಾದರೆ ಮಿತ್ರನೆಂದರೆ ಯಾರು? ಕೇವಲ ಜೊತೆಗಾರನಿಂದ ಬಯಸಬಹುದಾದ ದೇಹದ ಸಂತೋಷ, ಅವನು ಸುಂದರನಾಗಿರುವನೆಂದು ಆಯ್ದುಕೊಳ್ಳುವಿಕೆ, ಅಭಿರುಚಿಗಳಲ್ಲಿ ಹಾಗೂ ಬೆಂಬತ್ತುವಿಕೆಯಲ್ಲಿ ಏಕರೂಪವಿರುವಿಕೆ ಇವೆಲ್ಲವುಗಳಿಗಾಗಿ ಅವನನ್ನು ಅರಸುವುದಲ್ಲ, ಅವನು ನನ್ನನ್ನು ಪ್ರೀತಿಸುತ್ತಾನೆ, ಹೊಗಳುತ್ತಾನೆ ಎಂಬ ಕಾರಣದಿಂದ ಶಿಷ್ಯನೊಬ್ಬನನ್ನು ಪ್ರೀತಿಸುವ ಹಾಗೆ ಅವನನ್ನು ಪ್ರೀತಿಸುವುದಲ್ಲ, ಅವನು ಕೇವಲ ಬುದ್ಧಿಮತ್ತೆಯುಳ್ಳ ಬೋಧಕ ಇಲ್ಲವೆ ಸಹಾಯಕ ಎಂಬ ಕಾರಣದಿಂದ ಅವಶ್ಯವಾಗಿ ಅವನಿಂದ ಪ್ರೇಮವನ್ನು ಒತ್ತಾಯಪೂರ್ವಕವಾಗಿ ಬೇಡುವುದಲ್ಲ. ಇವೆಲ್ಲ ಭಾವನೆಗಳು ಅಸ್ತಿತ್ವದಲ್ಲಿರುತ್ತವೆ, ಆದರೆ ಅವು ಮೈತ್ರಿಯ ಆತ್ಮವಾಗಿರುವುದಿಲ್ಲ. ಸ್ತ್ರೀಯ ಕಾರಣದಿಂದಾಗಿ ನಾನು ನನ್ನ ಮಿತ್ರನನ್ನು

ಪ್ರೀತಿಸುವುದಿಲ್ಲ, ನಾನು ಅವನನ್ನು ಪ್ರೀತಿಸುತ್ತೇನೆ, ಏಕೆಂದರೆ ಹಳೆಯ ನಾಶವಾಗದ ಪದ ಗುಚ್ಛದಲ್ಲಿ ಹೇಳುವುದಾದರೆ ಅವನು ನನ್ನ ಇನ್ನೊಂದು ಆತ್ಮವಾಗಿರುತ್ತಾನೆ.

**CWSA, 17/139–40** **– ಶ್ರೀ ಅರವಿಂದರು**

*

## ಸೂತ್ರಗಳು

ಯಾರೋ ಒಬ್ಬರು ನಿಮಗಾಗಿ ಪ್ರೇಮದ ಭಾವನೆ ಹೊಂದಿರುತ್ತಾರೆ ಎಂಬುದು ನಿಮ್ಮನ್ನು ಸಂತೋಷಪಡಿಸಲು ಶಕ್ಯವಾಗುವುದಿಲ್ಲ. ನೀವು ಇತರರಿಗಾಗಿ ತಂದುಕೊಳ್ಳುವ ಪ್ರೇಮದ ಭಾವನೆ ನಿಮ್ಮನ್ನು ಸಂತೋಷಪಡಿಸುತ್ತದೆ: ಏಕೆಂದರೆ ನೀವು ಕೊಡುವ ಪ್ರೇಮವನ್ನು ಭಗವಂತನಿಂದ ಸ್ವೀಕರಿಸುತ್ತೀರಿ, ಅವನು ಶಾಶ್ವತವಾಗಿ, ವಿಫಲಗೊಳ್ಳದ ರೀತಿಯಲ್ಲಿ ಪ್ರೀತಿಸುತ್ತಾನೆ.

*

ನೆರವೇರಿಕೆ ತಂದುಕೊಡುವ, ಜ್ಞಾನೋದಯವನ್ನುಂಟು ಮಾಡುವ ನಿಜವಾದ ಪ್ರೇಮ ಸ್ವೀಕರಿಸಿದ ಪ್ರೇಮವಾಗಿರುವುದಿಲ್ಲ, ಆದರೆ ಮನುಷ್ಯ ತಾನು ನೀಡಿದ ಪ್ರೇಮವಾಗಿರುತ್ತದೆ. ಪರಮೋಚ್ಚ ದೈವೀಪ್ರೇಮ ಯಾವುದೋ ಒಂದು ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡಿರುವುದಿಲ್ಲ– ಪ್ರೇಮವೇ ಪ್ರೀತಿಸುತ್ತದೆ, ಏಕೆಂದರೆ ಅದಕ್ಕೆ ಪ್ರೀತಿಸುವುದಲ್ಲದೆ ಬೇರೆ ಏನನ್ನೂ ಮಾಡಲಾಗದು.

*

ಒಂದೇ ಒಂದು ಬಗೆಯ ಪ್ರೇಮವಿದೆ – ಅದು ದೈವೀಪ್ರೇಮ; ಆ ಪ್ರೇಮವಿಲ್ಲದೆ ಯಾವ ಸೃಷ್ಟಿಯೂ ಇರುವುದಿಲ್ಲ. ಆ ದೈವೀಪ್ರೇಮದಿಂದಾಗಿ ಎಲ್ಲವೂ ಅಸ್ತಿತ್ವದಲ್ಲಿದೆ ಮತ್ತು ನಾವು ಅಸ್ತಿತ್ವದಲ್ಲಿರದ ನಮ್ಮ ಪ್ರೇಮವನ್ನು ಕಂಡುಕೊಳ್ಳಲು ಪ್ರಯತ್ನಿಸಿದಾಗ ಏಕೈಕವಾದ ದೈವೀಪ್ರೇಮದ ಬಗ್ಗೆ ನಮಗೆ ಭಾವನೆ ಬರುವುದಿಲ್ಲ. ಭಗವಂತನದಾದ ಆ ದೈವೀಪ್ರೇಮ ಎಲ್ಲ ಅಸ್ತಿತ್ವದೊಳಗೆ ವ್ಯಾಪಿಸಿಕೊಂಡಿದೆ.

*

ಮನುಷ್ಯ ತಾನು ಪ್ರೀತಿಸುವುದರ ಹೋಲಿಕೆಯಲ್ಲಿ ಬೆಳೆಯುತ್ತಾನೆ ಎಂದು ಹೇಳಲಾಗಿದೆ, ಆದರೆ ದೇವನನ್ನು ಕುರಿತು ಕೂಡ ಅದು ನಿಜವಾಗಿದೆ, ದೇವನ ಹೋಲಿಕೆಯಲ್ಲಿ ಬೆಳೆದಾಗ ಮಾತ್ರ ಮನುಷ್ಯ ಯಾವಾಗಲು ಅವನೊಡನೆ ಇರಬಹುದು.

*

ಓ ಪ್ರಭು, ನಿನ್ನನ್ನು ಪ್ರೀತಿಸುವವನಿಗೆ ಜಗತ್ತಿನ ನಿಂದನೆ ಕಾಡಿನ ಜೇನುತುಪ್ಪವಿದ್ದ ಹಾಗೆ ಮತ್ತು ಜನ ಜಂಗುಳಿಯಿಂದ ಕಲ್ಲೆಸೆತ ಬೇಸಿಗೆಯ ಮಳೆ ದೇಹದ ಮೇಲೆ ಬಿದ್ದ ಹಾಗೆ. ಏಕೆಂದರೆ ನಿಂದಿಸುವವನು, ಕಲ್ಲೆಸೆಯುವವನು ನೀನೇ ಅಲ್ಲವೆ? ಮತ್ತು ನನ್ನನ್ನು ಹೊಡೆಯುವ ಹಾಗೂ ನೋವಿಗೀಡು ಮಾಡುವ ಕಲ್ಲುಗಳಲ್ಲಿ ನೀನೇ ಇರುವಿಯಲ್ಲವೆ?

*

ಅತ್ಯಂತ ದುಷ್ಟವಾದ ಕ್ರಿಮಿಯನ್ನು ಮತ್ತು ಅತ್ಯಂತ ನೀಚರಾದ ಅಪರಾಧಿಗಳನ್ನು ನೀನು ಪ್ರೀತಿಸದೆ ಹೋದರೆ ದೇವನನ್ನು ನಿನ್ನ ಆತ್ಮದಲ್ಲಿ ಸ್ವೀಕರಿಸಿರುವೆ ಎಂದು ನೀನು ನಂಬಿಕೊಂಡಿರುವುದು ಹೇಗೆ ಸಾಧ್ಯವಾದೀತು?

*

ಜಗತ್ತನ್ನು ಹೊರತುಪಡಿಸಿ ದೇವನನ್ನು ಪ್ರೀತಿಸುವುದೆಂದರೆ ಅವನನ್ನು ಗಾಢವಾಗಿ ಆದರೆ ಅಪರಿಪೂರ್ಣವಾಗಿ ಆರಾಧಿಸುವುದಾಗಿದೆ.

*

ದೇವ ನನ್ನಿಂದ ತಡೆಹಿಡಿದುಕೊಂಡದ್ದೆಲ್ಲವನ್ನು ಅವನು ತನ್ನ ಪ್ರೇಮದಿಂದ ಹಾಗೂ ವಿವೇಕದಿಂದ ಕೈಕೊಂಡಿದ್ದಾನೆ ಎಂಬುದನ್ನು ನಾನು ನೋಡಿದ್ದೇನೆ. ಆಗ ನಾನು ಅದನ್ನು ಗ್ರಹಿಸಿದ್ದರೆ ಶ್ರೇಷ್ಠವಾಗಿರುವ ಒಳ್ಳೆಯದಕ್ಕೆ ಶ್ರೇಷ್ಠ ವಿಷವಾಗುವ ತಿರುವನ್ನು ಕೊಡುತ್ತಿದ್ದೆ. ಆದಾಗ್ಯೂ ಕೆಲವೊಮ್ಮೆ ನಾವು ಒತ್ತಾಯಪಡಿಸಿದಾಗ ಅವನು ವಿಷವನ್ನು ಕುಡಿಯಲು ಕೊಡುತ್ತಾನೆ, ಹಾಗಾಗಿ ನಾವು ಅದರಿಂದ ಹೊರಳುವುದನ್ನು ಕಲಿತುಕೊಳ್ಳುವಂತಾಗಬಹುದು, ಮತ್ತು ಅವನ ಜ್ಞಾನದಿಂದ ಅಮೃತದ ಹಾಗೂ ದೇವತೆಗಳ ಆಹಾರದ ರುಚಿ ನೋಡುವಂತಾಗಬಹುದು.

*

ಗುರುವಾದ ದೇವನ ಶಿಷ್ಯನಾಗಿರುವುದು, ದೈವೀ ಪಿತನಾದ ದೇವನ ಮಗನಾಗಿರುವುದು, ದೈವೀ ತಾಯಿಯಾದ ದೇವನ ಕೋಮಲತೆಯಾಗಿರುವುದು, ದೈವೀ ಮಿತ್ರನ ಹಸ್ತದ ಅಪ್ಪುಗೆಯಾಗಿರುವುದು, ನಮ್ಮ ಜೊತೆಗಾರ, ಬಾಲಕ, ಮತ್ತು ಸಹ ಆಟಗಾರನೊಡನೆ ನಗು ಮತ್ತು ಕ್ರೀಡೆಯಲ್ಲಿ ತೊಡಗಿಕೊಳ್ಳುವುದು, ಪ್ರಭುವಾದ ದೇವನಿಗೆ ಸೇವೆ ಸಲ್ಲಿಸುವುದು, ದೈವೀಪ್ರೇಮ ಪಾತ್ರನನ್ನು ಪರಮಾನಂದದಿಂದ ಪ್ರೀತಿಸುವುದು, ಈ ಏಳು ವಿಷಯಗಳು ಮಾನವ ದೇಹದಲ್ಲಿ

ಜೀವನದ ಪರಮ ಸೌಖ್ಯಗಳಾಗಿವೆ. ಇವೆಲ್ಲವುಗಳನ್ನು ಏಕೈಕ ಪರಮೋಚ್ಚ ಕಾಮನ ಬಿಲ್ಲಿನ ಬಣ್ಣಗಳಲ್ಲಿರುವಂತಹ ಸಂಬಂಧವನ್ನಾಗಿ ಮಾಡಲಾರೆಯಾ? ಆಗ ನಿನಗೆ ಬೇರೆ ಯಾವ ಸ್ವರ್ಗದ ಆವಶ್ಯಕತೆ ಇರುವುದಿಲ್ಲ ಮತ್ತು ನೀನು ಅದ್ವೈತಿಗಳ ವಿಮೋಚನೆಯ ವಿಚಾರವನ್ನು ಮೀರಿ ಹೋಗಿರುತ್ತೀ.

*

ನನ್ನ ಪ್ರಿಯಕರ ಪಾಪದ ನನ್ನ ನಿಲುವಂಗಿಯನ್ನು ಕಳಚಿ ಹಾಕಿದ, ಅದು ನನ್ನಿಂದ ಹೊರಟು ಹೋಗುವುದಕ್ಕೆ ಸಂತೋಷದಿಂದ ಅನುವು ಮಾಡಿಕೊಟ್ಟೆ. ನಂತರ ಅವನು ನನ್ನ ಸದ್ಗುಣಗಳ ನಿಲುವಂಗಿಯನ್ನು ಕಿತ್ತುಕೊಳ್ಳಲು ಕೈಚಾಚಿದ, ಆದರೆ ನಾಚಿಕೆಯಾಯಿತು, ಭಯವೂ ಆಯಿತು, ಹಾಗೆ ಮಾಡದಂತೆ ಅವನನ್ನು ತಡೆದೆ. ಅವನು ಬಲವಂತವಾಗಿ ನನ್ನಿಂದ ಅದನ್ನು ಕಿತ್ತುಕೊಂಡಾಗ ನನ್ನ ಆತ್ಮವನ್ನು ನನ್ನಿಂದ ಹೇಗೆ ಅಡಗಿಸಿಡಲಾಗಿತ್ತು ಎಂಬುದನ್ನು ನೋಡಿದೆ.

*

ನನ್ನ ನೆರೆಹೊರೆಯಲ್ಲಿ ಇದ್ದವನನ್ನು ನಾನು ಪ್ರೀತಿಸಬೇಕು, ಅವನು ನೆರೆಹೊರೆಯವನು ಎಂಬ ಕಾರಣಕ್ಕಾಗಿ ಅಲ್ಲ – ನೆರೆಹೊರೆ ಮತ್ತು ದೂರವಿರುವುದು ಇವುಗಳಲ್ಲಿ ಏನಿದೆ? ಧರ್ಮಗಳು ಅವನು ನನ್ನ ಸಹೋದರ ಎಂದು ಹೇಳುತ್ತವೆ ಎಂಬ ಕಾರಣಕ್ಕಾಗಿ ಅಲ್ಲ, – ಆ ಭ್ರಾತೃತ್ವದ ಮೂಲ ಎಲ್ಲಿದೆ? ಆದರೆ ಅವನು ನಾನೇ ಆಗಿರುತ್ತೇನೆ ಎಂಬ ಕಾರಣಕ್ಕಾಗಿ ಅವನನ್ನು ಪ್ರೀತಿಸಬೇಕು. ನೆರೆಹೊರೆ ಮತ್ತು ದೂರ ಇವು ದೇಹದ ಮೇಲೆ ಪರಿಣಾಮ ಬೀರುತ್ತವೆ, ಹೃದಯ ಅವುಗಳಾಚೆ ಸಾಗಿ ಹೋಗುತ್ತದೆ. ಭ್ರಾತೃತ್ವ ರಕ್ತ ಸಂಬಂಧದ್ದು, ಇಲ್ಲವೆ ದೇಶದ್ದು, ಇಲ್ಲವೆ ಧರ್ಮದ್ದು ಇಲ್ಲವೆ ಮಾನವ ಕುಲದ್ದು ಆಗಿರಬೇಕು. ಆದರೆ ಸ್ವ–ಹಿತಾಸಕ್ತಿ ಕೂಗನ್ನೆಬ್ಬಿಸಿದಾಗ ಈ ಭ್ರಾತೃತ್ವಕ್ಕೆ ಏನಾಗಬಹುದು? ಕೇವಲ ದೇವನಲ್ಲಿ ಜೀವಿಸುವುದರ ಮೂಲಕ ಮತ್ತು ಮನಸ್ಸು, ಹೃದಯ ಹಾಗೂ ದೇಹ ಇವುಗಳನ್ನು ವಿಶ್ವಂಭರ ಏಕತೆಯ ಪ್ರತೀಕದಲ್ಲಿ ಹೊರಳಿಸುವುದರ ಮೂಲಕ ನಿರಾಸಕ್ತ ಹಾಗೂ ದಾಳಿಗೊಳಗಾಗದ ಪ್ರೇಮವಿರುವುದು ಸಾಧ್ಯವಾಗುತ್ತದೆ.

*

ಅತ್ಯಂತ ಉಚ್ಚ ದಿವ್ಯಾನಂದದ ಮೇಲೆ ಹಿಡಿತವಿರುವ ಆತ್ಮಕ್ಕೆ ಜೀವನ ದುಷ್ಟವಾದ, ವೇದನಾಪೂರ್ಣವಾದ ಭ್ರಮೆ ಆಗಿರುವುದಿಲ್ಲ, ಅದಕ್ಕೂ ಹೆಚ್ಚಾಗಿ ಎಲ್ಲ

ಜೀವನ ದೈವೀಪ್ರೇಮಿಯೂ, ಸಹಆಟಗಾರನೂ ಆದವನ ಕಿರುದೆರೆಗಳಾಗಿ ಹರಿಯುವ ಪ್ರೇಮ ಮತ್ತು ನಗುವಿನದಾಗಿರುತ್ತದೆ.

*

ತನ್ನ ಸೇವಕ ಕೈಕೊಳ್ಳುವ ಕಾರ್ಯಗಳಲ್ಲಿ ಭಗವಂತನಿಗೆ ಪರಿಪೂರ್ಣ ಸಂತೋಷ ನೀಡುವ ಎರಡು ಕಾರ್ಯಗಳಿವೆ. ಒಂದು ನಿಶ್ಚಲನೀರವತೆಯಲ್ಲಿದ್ದು–ಕೊಂಡು ಅವನ ದೇವಾಲಯದ ನೆಲ ಗೂಡಿಸುವುದು, ಎರಡನೆಯದು ಜಗತ್ತಿನ ರಣಾಂಗಣದಲ್ಲಿ ಮನುಕುಲದಲ್ಲಿ ದೈವೀ ಪರಾಕಾಷ್ಠೆಗಾಗಿ ಹೋರಾಡುವುದಾಗಿದೆ.

*

ಮಾನವ ಸತ್ತೆಗಳಿಗಾಗಿ ಕಿಂಚಿತ್ತು ಒಳ್ಳೆಯದನ್ನು ಮಾಡಿದ ಮನುಷ್ಯ ಪಾಪಿಷ್ಠರಲ್ಲಿ ಅತ್ಯಂತ ಕೆಟ್ಟವನಾಗಿದ್ದರೂ ಭಗವಂತ ಅವನನ್ನು ಸ್ವೀಕರಿಸುತ್ತಾನೆ, ಅವನನ್ನು ತನ್ನ ಪ್ರೇಮಿಗಳು ಹಾಗೂ ಸೇವಕರು ಇರುವ ಅಂತಸ್ತಿನಲ್ಲಿರಿಸುತ್ತಾನೆ. ಅವನು ಸನಾತನನ ಮುಖವನ್ನು ನೋಡುವನು.

*

ಓ, ನಿನ್ನ ದೌರ್ಬಲ್ಯದಿಂದ ಮೂರ್ಖನಾದವನೆ, ಭಯಭಕ್ತಿಯ ಪರದೆಯನ್ನಿರಿಸಿ ದೇವನ ಮುಖ ನಿನಗೆ ಕಾಣದ ಹಾಗೆ ಮುಚ್ಚಿಡಬೇಡ, ದೈನ್ಯದಿಂದ ಬೇಡಿಕೊಳ್ಳುವ ದೌರ್ಬಲ್ಯದಿಂದ ಅವನನ್ನು ಸಮೀಪಿಸಬೇಡ. ನೋಡು! ಅವನ ಮುಖದ ಮೇಲೆ ರಾಜ ಹಾಗೂ ನ್ಯಾಯಾಧೀಶನಾದವ ಗಾಂಭೀರ್ಯವನ್ನು ನೀನು ನೋಡುವುದಿಲ್ಲ, ಆದರೆ ಅಲ್ಲಿ ಪ್ರಿಯಕರನ ಮುಗುಳ್ನಗು ಇರುತ್ತದೆ.

*

ಕುರೂಪ ಹಾಗೂ ಅನಿಷ್ಟವಾದದ್ದರಲ್ಲಿ ಸುಂದರನಾದ ಹಾಗೂ ಒಳ್ಳೆಯವನಾದ ದೇವನಿರುವ ಭಾವನೆ ತಂದುಕೊಳ್ಳುವುದು ಮತ್ತು ಆದಾಗ್ಯೂ ಅತ್ಯಂತ ಪ್ರೇಮದಿಂದ ಕುರೂಪವನ್ನು ಹಾಗೂ ಅನಿಷ್ಟವನ್ನು ವಾಸಿಮಾಡಲು ಹಾತೊರೆಯುವುದು, ಇದು ನಿಜವಾದ ಸದ್ಗುಣ ಹಾಗೂ ನೈತಿಕತೆ.

**CWSA, 12 Thoughts and Aphorisms, (Bhakti)** **– ಶ್ರೀ ಅರವಿಂದರು**

*

# ದೈವೀಪ್ರೇಮ ಸನಾತನನ ಗೋಲಗಳಿಂದ ಬಂದ ಒಂದು ವೈಭವ
## (ಕವಿತೆ)

ದೈವೀಪ್ರೇಮ ಸನಾತನನ ಗೋಲಗಳಿಂದ ಬಂದ ಒಂದು ವೈಭವ
ಅವನ (ಪ್ರೇಮದ) ಹೆಸರನು, ಆಕಾರವನು, ದಿವ್ಯಾನಂದವನು ಕದಿಯುವ
ಕೀಳ್ಮಟ್ಟದ ಅಧಿಕ ಬಲಗಳು ಅವನನ್ನು ಹೀನೈಸಿಹವು, ವಿಕಾರಗೊಳಿಸಿಹವು,
ಅಪಹಾಸ್ಯ ಮಾಡಿಹವು,
ಅವನಿನ್ನೂ ತನ್ನ ಮೂಲಕ ಎಲ್ಲವನು ಬದಲಿಸುವ ದೇವ ಪ್ರಮುಖನಾಗಿಹನು.
ನಮ್ಮ ಅಚೇತನದ ದ್ರವ್ಯದಲಿ ರಹಸ್ಯವೊಂದು ಎಚ್ಚತ್ತುಕೊಳ್ಳುವುದು,
ನಮ್ಮ ಜೀವನವನು ಮರುತಯಾರು ಮಾಡುವ ದಿವ್ಯಾನಂದವೊಂದು
ಜನಿಸಿಹುದು.
ಆತ್ಮದ ತೀವ್ರಗತಿಯ ಚಲನೆಗಾಗಿ ಕಾದುಕೊಂಡಿದ್ದು
ತೆರೆದುಕೊಂಡಿರದ ಹೂವಿನ ಹಾಗೆ ಪ್ರೇಮ ನಮ್ಮಲ್ಲಿ ವಾಸಿಸುತಿಹುದು;
ಇಲ್ಲವೆ ಯೋಚನೆಗಳ ಹಾಗೂ ವಿಷಯಗಳ ಮಧ್ಯೆ ತನ್ನ ಸೊಬಗಿನ
ನಿದ್ರೆಯಲಿ ಅವನು ಸಂಚರಿಸುತಿಹನು;
ಬಹಳಷ್ಟು ಹೃದಯಗಳಲಿ, ಮನಸ್ಸುಗಳಲಿ ಹಾಗೂ ಜೀವಿಸುವ ರೂಪಗಳಲಿ
ದೇವ ಮಗು ಆಟವಾಡುತಿಹನು ತನ್ನನ್ನೇ ತಾನು ಅರಸುತಿಹನು:
ತಾನು ಅರಿತುಕೊಳ್ಳುವಂತಾಗಲೆಂದು ಒಂದು ಕುರುಹಿಗಾಗಿ ನಿಧಾನವಾಗಿ
ಕಾಲ ಕಳೆಯುತಿಹನು
ಮತ್ತು ಅದು ಬಂದಾಗ ಒಂದು ಧ್ವನಿ, ನೋಟ, ಸ್ಪರ್ಶ, ಮುಖವೊಂದರ ಅರ್ಥ
ಇವೆಲ್ಲವುಗಳಿಂದ ಎಚ್ಚತ್ತುಕೊಳ್ಳುವನು.
ಮಬ್ಬಾದ ಭೌತಿಕ ಮನ ಅವನ ಉಪಕರಣ
ಸ್ವರ್ಗೀಯ ಅಂತರ್ದೃಷ್ಟಿ ಈಗ ಮರೆಗುಳಿಯಾಗಿ ಬೆಳೆದಿಹುದು
ಪ್ರೇಮ ಬಾಹ್ಯ ಸೊಬಗಿನ ಯಾವುದೊಂದರ ಕುರುಹನು ಹಿಡಿದುಕೊಳ್ಳುವುದು,
ಪ್ರಕೃತಿಯ ಸುಳಿವುಗಳ ಸಂಚಯದ ಮಧ್ಯೆ ಅವನಿಗೆ ಮಾರ್ಗದರ್ಶನ ಮಾಡಲು
ಸ್ವರ್ಗೀಯ ಸತ್ಯಗಳನು ಪೃಥ್ವಿಯ ಹೊರ ರೂಪಗಳಲಿ ಓದುವನು,
ದೇವ ಪ್ರಮುಖನಿಗಾಗಿ ಪ್ರತೀಕವನು ಬಯಸುವನು
ರೂಪದ ಅಮರತ್ವಗಳನು ದೈವಿಕವಾಗಿಸುವನು
ಶಿಲ್ಪಾಕೃತಿಗೊಳಗಾದ ಆತ್ಮಕ್ಕಾಗಿ ದೇಹವನು ಧರಿಸುವನು . . .

ದೇವನಿಂದ ಬಹು ದೂರದಲಿ ಪ್ರೇಮ ಅವನ ಸತ್ಯವನು ಅರಸುವುದು
ಪ್ರಾಣ ಕುರುಡಾಗಿಹುದು ಮತ್ತು ಉಪಕರಣಗಳು ಮೋಸಗೊಳಿಸುವವು
ಕೀಳಾಗಿಸಲು ಶ್ರಮಿಸುವ ಸಾಮರ್ಥ್ಯಗಳು ಅಲ್ಲಿಹವು.
ಆದಾಗ್ಯೂ ದರ್ಶನ ಬರಬಹುದು, ಸಂತೋಷ ಆಗಮಿಸಬಹುದು.
ಪ್ರೇಮದ ಅಮೃತದಂತಿಹ ದ್ರಾಕ್ಷಾರಸಕ್ಕೆ ಯೋಗ್ಯ ಬಟ್ಟಲು
ಅಪರೂಪವಾಗಿಹುದು,
ಹಾಗೆಯೇ ದೇವನ ಜನ್ಮವನು ಹಿಡಿದಿಟ್ಟುಕೊಳ್ಳಬಲ್ಲ ಪಾತ್ರೆ ಕೂಡ
ಅಪರೂಪವಾಗಿಹುದು;
ಸಹಸ್ರ ವರ್ಷಗಳಾದ್ಯಂತ ತಯಾರು ಮಾಡಿದ ಆತ್ಮ
ಪರಮೋಚ್ಚ ಅವರೋಹಣದ ಜೀವಂತ ಎರಕದ ಅಚ್ಚಾಗಿಹುದು.

**ಸಾವಿತ್ರಿ : (Book V, The Book of Love, p.398)**

– ಶ್ರೀ ಅರವಿಂದರು

*

## ದೈವೀಪ್ರೇಮ ಇಲ್ಲಿ ದೂರದಲ್ಲಿರುವ ವಿಶ್ವಾತೀತನ ದೇವದೂತನಾಗಿಹುದು

## (ಕವಿತೆ)

ನಮ್ಮ ಪೃಥ್ವಿಯೆಲ್ಲ ಮಣ್ಣಿನಿಂದ ಪ್ರಾರಂಭವಾಗುವುದು, ಆಕಾಶದಲಿ
ಕೊನೆಗೊಳ್ಳುವುದು
ಒಮ್ಮೆ ಪಶುವಿನ ಆಸೆಯಾಗಿದ್ದ,
ನಂತರ ಅತ್ಯಾನಂದದ ಹೃದಯದಲಿ ಮಧುರ ಹುಚ್ಚುತನವಾಗಿದ್ದ,
ಸಂತುಷ್ಟ ಮನಸಿನಲಿ ಉತ್ಸಾಹದ ಗೆಳೆತನವಾಗಿದ್ದ,
ಪ್ರೇಮ ಆಧ್ಯಾತ್ಮಿಕ ಹಾತೊರೆತದ ವಿಶಾಲ ಸ್ಥಳಾವಕಾಶವಾಗುವುದು.
ಏಕಾಕಿ ಆತ್ಮ ದೈವೀ ಏಕಾಕಿಗಾಗಿ ಭಾವೋದ್ರೇಕವನು ಹೊರಗೆಡವುಹುದು,
ಪುರುಷನನು ಪ್ರೀತಿಸಿದ ಹೃದಯ ದೇವನ ಪ್ರೇಮದಿಂದ
ರೋಮಾಂಚನಗೊಳ್ಳುವುದು,
ಅವನ ದೇಹವೊಂದು ಪ್ರೇಮದ ಕೋಣೆ ಹಾಗೂ
ದೇವಾಲಯವಾಗುವುದು.

ಆಗ ನಮ್ಮ ಸತ್ತೆ ಪ್ರತ್ಯೇಕತೆಯಿಂದ ಪಾರಾಗುವುದು;
ಎಲ್ಲವೂ ಅದೇ ಆಗಿಹುದು, ಎಲ್ಲವನ್ನೂ ದೇವನಲಿ ಹೊಸದಾಗಿ ಭಾವನೆಗೆ
ತಂದುಕೊಳ್ಳಲಾಗಿಹುದು:
ದೈವೀ ಪ್ರೇಮಿಯೊಬ್ಬ ತನ್ನ ಸನ್ಯಾಸಿ ಗೃಹದಿಂದ ವಾಲಿಕೊಂಡು
ಇಡೀ ಜಗತ್ತನು ತನ್ನ ಏಕಾಕಿ ಎದೆಯೊಳಗೆ ಒಟ್ಟುಗೂಡಿಸಿಹನು
ಆಗ ರಾತ್ರಿ ಮತ್ತು ಮೃತ್ಯು ಇವುಗಳ ವ್ಯವಹಾರ ವಿಫಲವಾಗುವುದು
ಏಕತೆಯನು ಗೆದ್ದುಕೊಂಡಾಗ, ಕಲಹ ಕಳೆದುಹೋದಾಗ
ಎಲ್ಲವನು ಅರಿತುಕೊಂಡಾಗ ಎಲ್ಲವೂ ದೈವೀ ಪ್ರೇಮಿಯ ಅಪ್ಪುಗೆಗೆ
ಒಳಗಾದಾಗ
ಅಜ್ಞಾನ ಹಾಗೂ ನೋವುಗಳತ್ತ ಹೊರಳಿ ಹೋಗುವುರಾರು?

**ಸಾವಿತ್ರಿ, ಪು. 632–33**


ಪೃಥ್ವಿಯ ಮೇಲೆ ದೈವೀಪ್ರೇಮ ಜೀವಿಸುವುದನು ನಿಲ್ಲಿಸಕೂಡದು;
ಕಾರಣ ದೈವೀಪ್ರೇಮ ಪೃಥ್ವಿ ಹಾಗು ಸ್ವರ್ಗಗಳ ನಡುವಿರುವ ಉಜ್ವಲ ಕೊಂಡಿ,
ಇಲ್ಲಿ ದೈವೀಪ್ರೇಮ ದೂರದಲ್ಲಿರುವ ವಿಶ್ವಾತೀತನ ದೇವದೂತನಾಗಿಹುದು
ದೈವೀಪ್ರೇಮ ಪರಿಪೂರ್ಣವಾದುದರ ಮೇಲೆ ಮಾನವನ ಭೋಗ್ಯದ ಹಕ್ಕು.

**ಸಾವಿತ್ರಿ, ಪು. 633**

ಪ್ರೇಮದ ಹಾಗೂ ಏಕತೆಯ ಭಾವನೆ ತಂದುಕೊಳ್ಳುವುದು ಜೀವಿಸುವುದಕ್ಕಾಗಿ
ಎಂಬ ನನ್ನ ಹೃದಯದ ಅರ್ಥಕ್ಕೆ ನಾ ಎಚ್ಚತ್ತುಕೊಂಡೆ ಹಾಗೂ
ಇವೇ ನಮ್ಮ ಅಮೋಘ ಬದಲಾವಣೆಯ ಮೋಡಿ,
ಓ ಋಷಿಯೆ, ಇದೆಲ್ಲ ನಾನರಸುವ ಹಾಗೂ ತಿಳಿದಿರುವ ಸತ್ಯ.

**ಸಾವಿತ್ರಿ, ಪು. 724** – ಶ್ರೀ ಅರವಿಂದರು

*



*A charm and greatness locked in every hour*
*Awakes the joy which sleeps*
*in all things made.*

- Sri Aurobindo

**RNI No. 22511/1971**
No. of Pages **56 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.